₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | **ಕಲಬುರಗಿ** | ಬೆಳಗಾವಿ **ಶನಿವಾರ 13.07.2024** **ಸಂಪುಟ:** 67 **ಸಂಚಿಕೆ:** 68 **ಪುಟಗಳು:** 10 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ನಟ ಯಶ್ ಮತ್ತು ರಾಧಿಕಾ ಪಂಡಿತ್ ದಂಪತಿ ಅವರು ಮುಂಬೈನಲ್ಲಿ ಅನಂತ್ ಅಂಬಾನಿ-ರಾಧಿಕಾ ಮರ್ಚೆಂಟ್ ಅವರ ಅದ್ದೂರಿ ಮದುವೆ ಸಮಾರಂಭದಲ್ಲಿ ಭಾಗಿಯಾಗಿದ್ದಾರೆ. ಮುಂಬೈ ವಿಮಾಣ ನಿಲ್ದಾಣದಲ್ಲಿ ಹೊಸ ಗೆಟಪ್‌ನಲ್ಲಿ ಕಾಣಿಸಿಕೊಂಡ ಯಶ್ ಅವರನ್ನು ನೋಡಲು ಅಭಿಮಾನಿಗಳು ಮತ್ತು ಛಾಯಾಗ್ರಾಹಕರು ಮುಗಿ ಬಿದ್ದರು.



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ

ಸಮಾಜ ಕಲ್ಯಾಣ ಇಲಾಖೆ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಹಸಿರು ಕ್ರಾಂತಿಯ ಹರಿಕಾರ, ರಾಷ್ಟ್ರನಾಯಕ, ಭಾರತದ ಮಾಜಿ ಉಪ ಪ್ರಧಾನಿ
ಇವರ ಸ್ಮರಣೆಗಾಗಿ ಬೆಂಗಳೂರಿನಲ್ಲಿ ಅತ್ಯಾಕರ್ಷಕವಾದ

ಡಾ. ಬಾಬು ಜಗಜೀವನ ರಾಮ್ ಭವನ
ಮತ್ತು ಸಂಶೋಧನಾ ಸಂಸ್ಥೆ ಉದ್ಘಾಟನಾ ಸಮಾರಂಭ

ದಿನಾಂಕ: 13-07-2024ರ ಶನಿವಾರ, ಬೆಳಿಗ್ಗೆ 11 ಗಂಟೆಯಿಂದ ಸಾಂಸ್ಕೃತಿಕ ಕಾರ್ಯಕ್ರಮ
ಮಧ್ಯಾಹ್ನ 3 ಗಂಟೆಗೆ ಭವನದ ಉದ್ಘಾಟನೆಯ ಕಾರ್ಯಕ್ರಮ
ಸ್ಥಳ : ನಿರಾಶ್ರಿತರ ಪರಿಹಾರ ಕೇಂದ್ರ, ಮಾಗಡಿ ರಸ್ತೆ, ಸುಮನಹಳ್ಳಿ ಸರ್ಕಲ್, ಬೆಂಗಳೂರು - 560091.

ಉದ್ಘಾಟನೆ :
ಶ್ರೀ ಸಿದ್ದರಾಮಯ್ಯ , ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಘನ ಉಪಸ್ಥಿತಿ :
ಶ್ರೀ ಡಿ.ಕೆ. ಶಿವಕುಮಾರ್, ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಡಾ|| ಹೆಚ್.ಸಿ. ಮಹದೇವಪ್ಪ , ಮಾನ್ಯ ಸಮಾಜ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ
ಗೌರವಾನ್ವಿತ ಆಹ್ವಾನಿತರು :
ಶ್ರೀಮತಿ ಮೀರಾ ಕುಮಾರ್, ಲೋಕಸಭೆಯ ಮಾಜಿ ಸ್ಪೀಕರ್
ಅಧ್ಯಕ್ಷತೆ :
ಶ್ರೀ ಮುನಿರತ್ನ, ಮಾನ್ಯ ಶಾಸಕರು, ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ

ದಯಮಾಡಿ ಬಾಬೂಜೀ ಅನುಯಾಯಿಗಳು, ಹೋರಾಟಗಾರರು
ಸಂಘಟನೆಯ ಮುಖ್ಯಸ್ಥರು, ಗಣ್ಯ ನಾಗರಿಕರು
ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು
ಯಶ್ವಸಿಗೊಳಸಬೇಕೆಂದು ಕೋರುತ್ತೇವೆ.

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು
ಪ್ರತಿಯೊಬ್ಬ ಭಾರತೀಯರ ಮೂಲಭೂತ ಕರ್ತವ್ಯ"

ಸರ್ವರಿಗೂ ಸುಸ್ವಾಗತ

ನಿರ್ದೇಶಕರು
ಡಾ. ಬಾಬು ಜಗಜೀವನ ರಾಮ್ ಸಂಶೋಧನಾ ಸಂಸ್ಥೆ

ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ

ಸಮಾಚಾರ ಸಣ್ಣದಲ್ಲ

ಟ್ರಾನ್ಸ್‌ಫಾರ್ಮರ್ ತಂತಿ ತಗುಲಿ 2 ಕುರಿ ಬಲಿ

ಶಹಾಪುರ: ನಗರದ ಹಳಪೇಟೆಯ ಬಲಭೀಮ ಡೋಣಿ ಎಂಬುವವರಿಗೆ ಸೇರಿದ 2 ಕುರಿಗಳು ಮಳೆಯಲ್ಲಿ ಟ್ರಾನ್ಸ್‌ಫಾರ್ಮರ್ ತಂತಿ ತಗುಲಿ ಬಲಿಯಾಗಿವೆ. ಶುಕ್ರವಾರ ಸಂಜೆ ಕುರಿ ಮೇಯಿಸಿಕೊಂಡು ಕುರಿಗಾ ಬಲಭೀಮ ಡೋಣಿ ಮನೆಗೆ ಬರುತ್ತಿರುವ ಸಂದರ್ಭದಲ್ಲಿ ಮುಖ್ಯರಸ್ತೆಯ ಪಕ್ಕದಲ್ಲಿನ ಅಸುರಕ್ಷಿತತೆಯ ಟ್ರಾನ್ಸ್‌ಫಾರ್ಮರ್ ತಂತಿಗೆ ಕುರಿಗಳು ಕರೆಂಟ್ ತಗುಲಿ ಸಾವನಪ್ಪಿವೆ, ಕುರಿಂಡಿನಲ್ಲಿನ ಇನ್ನು 6 ಕುರಿಗಳಿಗೆ ಸಣ್ಣಪುಟ್ಟ ಗಾಯಗಳಾಗಿ ಪಾರಾಗಿವೆ. ಸುದ್ದಿ ತಿಳಿದ ತಕ್ಷಣ ಪಶು ಇಲಾಖೆಯ ಸಿಬ್ಬಂದಿ ವರ್ಗದವರು ಹಾಗೂ ಜೆಸ್ಕಾಂ ಇಲಾಖೆಯವರು ಭೇಟಿ ನೀಡಿ ಪರಿಶೀಲಿಸಿ, ಮೇಲಾಧಿಕಾರಿಗಳಿಗೆ ವರದಿ ಮಾಡುವದಾಗಿ ತಿಳಿಸಿದ್ದಾರೆ.

ಬೆಳೆವಿಮೆ ನೋಂದಣಿಗೆ ಅರ್ಜಿ ಆಹ್ವಾನ

ಯಾದಗಿರಿ: ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ ವಿಮಾ ಯೋಜನೆಯನ್ನು ಅನುಷ್ಠಾನಗೊಳಿಸಲು ಗುರುಮಠಕಲ್ ಹಾಗೂ ಯಾದಗಿರಿ ತಾಲೂಕಿಗೆ ರೈತರಿಗೆ ಟಾಟಾ ಎ.ಐ.ಜಿ. ಜನರಲ್ ಇನ್ಸೂರೆನ್ಸ್ ಕಂಪನಿ ಲೀ. ಮುಂಬೈ ವಿಮಾ ಸಂಸ್ಥೆಗೆ ನಿಗದಿಪಡಿಸಲಾಗಿದೆ ಎಂದು ಯಾದಗಿರಿ ಸಹಾಯಕ ಕೃಷಿ ನಿರ್ದೇಶಕ ಸುರೇಶ.ಬಿ ಅವರು ತಿಳಿಸಿದ್ದಾರೆ. ಬೆಳೆ ಸಾಲ ಪಡೆದ ಮತ್ತು ಬೆಳೆ ಸಾಲ ಪಡೆಯದ ರೈತರು ಈ ಯೋಜನೆಯಡಿ ವಿವಿಧ ಬೆಳೆಗಳಿಗೆ ವಿಮೆ ಮಾಡಿಸಲು ಅಂತಿಮ ದಿನಾಂಕವನ್ನು ನಿಗದಿ ಪಡಿಸಲಾಗಿದೆ. ಉದ್ದು ಮತ್ತು ಹೆಸರು ಮಳೆಯಾಶ್ರಿತ ಬೆಳೆಗೆ ನೊಂದಾಯಿಸಲು ಜುಲೈ 15 ಕೊನೆಯ ದಿನವಾಗಿದೆ.ತೊಗರಿ ನೀರಾವರಿ, ಶೇಂಗಾ ನೀರಾವರಿ, ಶೇಂಗಾ ಮಳೆಯಾಶ್ರಿತ, ಸೂರ್ಯಕಾಂತಿ ಮಳೆ ಆಶ್ರಿತ, ಹತ್ತಿ ಮಳೆಯಾಶ್ರಿತ, ನೀರಾವರಿ, ಮುಸುಕಿನ ಜೋಳ ಮಳೆ ಆಶ್ರಿತ, ಜೋಳ ಮಳೆ ಆಶ್ರಿತ, ಸಜ್ಜೆ ನೀರಾವರಿ, ಮಳೆಯಾಶ್ರಿತ ಬೆಳೆಗಳಿಗೆ ಮತ್ತು ಕಂತು ಭರಿಸುವ ದಿನಾಂಕ ಜು. 31 ಕೊನೆಯ ದಿನವಾಗಿದೆ. ಭತ್ತ ನೀರಾವರಿ, ಮಳೆಯಾಶ್ರಿತ ಮತ್ತು ತೊಗರಿ ಮಳೆಯಾಶ್ರಿತ ಬೆಳೆಗಳಿಗೆ ಆ. 16ರ ಒಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಯಾದಗಿರಿ ಶಿವ ಮೊ.ನಂ.7411155141, ಗುರುಮಠಕಲ್ ಧನರಾಜ್ ಮೊ.ನಂ. 9902803330ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಿರಸ್ಕೃತಗೊಂಡಿರುವ ಬೆಳೆ ವಿಮೆ ಪ್ರಕಟ

ಯಾದಗಿರಿ: 2023-24ನೇ ಸಾಲಿನ ಮುಂಗಾರು ಹಂಗಾಮಿನ ತಿರಸ್ಕೃತಗೊಂಡಿರುವ ಬೆಳೆ ವಿಮೆ ಪ್ರಕಟಿಸಲಾಗಿದೆ ಎಂದು ಯಾದಗಿರಿ ಸಹಾಯಕ ಕೃಷಿ ನಿರ್ದೇಶಕರು ಅವರು ತಿಳಿಸಿದ್ದಾರೆ. ಮುಂಗಾರು ಹಂಗಾಮಿನಲ್ಲಿ ಗುರುಮಠಕಲ್ (88) ಹಾಗೂ ಯಾದಗಿರಿ (123) ತಾಲೂಕಿನಲ್ಲಿ ಬೆಳೆ ಸಮೀಕ್ಷೆ ಹಾಗೂ ಬೆಳೆ ವಿಮೆಗೆ ತಾಳೆ ಹೊಂದದೆ ತಿರಸ್ಕೃತಗೊಂಡಿರುವ ಒಟ್ಟು 211 ಪ್ರಕರಣಗಳನ್ನು ಸಂಬಂಧಪಟ್ಟ ಹೋಬಳಿ ಹಾಗೂ ಪಂಚಾಯಿತಿಯಲ್ಲಿ ಫಲಾನುಭವಿಯ ವಿವರವನ್ನು ಕಚೇರಿಯ ಗೋಡೆಯ ಮೇಲೆ ಪ್ರದರ್ಶಿಸಲಾಗಿದೆ. ಒಂದು ವೇಳೆ ನೀವು ತುಂಬಿದ ಬೆಳೆ ಸರಿಯಾಗಿದ್ದರೆ ಪಹಣಿ, ಆಧಾರ್ ಕಾರ್ಡ್ ಬ್ಯಾಂಕ್ ಪಾಸ್‌ಪುಸ್ತಕ, ಬೆಳೆ ದೃಢೀಕರಣ ಹಾಗೂ ಎ.ಪಿ.ಎಂ.ಸಿ.ಗೆ ಮಾರಾಟ ಮಾಡಿದ ರಶೀದಿಯನ್ನು ನಿಮ್ಮ ವ್ಯಾಪ್ತಿಗೆ ಬರುವ ಹೋಬಳಿ ಅಧಿಕಾರಿಗಳಿಗೆ ಪ್ರಸಕ್ತ ಜು. 3 ರಂದು ಸಲ್ಲಿಸಿದ ಅರ್ಜಿಗಳು ರೈತ ಬಾಂಧವರಲ್ಲಿ ಮನವಿ ಮಾಡಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಿಳೆ ಕಾಣೆ ಪತ್ತೆಗಾಗಿ ಮನವಿ

ಬೀದರ್: ಭಾಲ್ಕಿ ತಾಲ್ಲೂಕಿನ ಕಲವಾಡಿ ಗ್ರಾಮದ ನಿವಾಸಿಯಾದ ಮತುರಾಬಾಯಿ ನರಸಿಂಗರಾವ ಕೊನ್ನಾಳೆ (75) ಇವರು ಜೂ 2 ರಂದು ಮನೆಯಿಂದ ಕಾಣೆಯಾಗಿರುತ್ತಾರೆ. ಕಾಣೆಯಾದ ಮಹಿಳೆಯು 5 ಅಡಿ 5 ಇಂಚ್ ಎತ್ತರ ಇದ್ದು, ಸಾಧಾರಣ ಮೈಕಟ್ಟು, ದುಂಡು ಮುಖ, ಗೋಧಿ ಬಣ್ಣ ಇದ್ದು, ಮೈಮೇಲೆ ಹಸಿರು ಬಣ್ಣದ ಸಿರೆ ಮತ್ತು ಕೆಂಪು ಬಣ್ಣದ ಬ್ಲಾವುಜ್ ಧರಿಸಿರುವ ಇವರು ಕನ್ನಡ ಭಾಷೆ ಮಾತನಾಡುತ್ತಾಳೆ. ಈ ಮಹಿಳೆ ಬಗ್ಗೆ ಯಾರಿಗಾದರೂ ಸುಳಿವು ಸಿಕ್ಕಲ್ಲಿ ಭಾಲ್ಕಿ ನಗರ ಪೊಲೀಸ್ ಠಾಣೆಯ ಪಿಎಸ್‌ಐಗೆ ಅಥವಾ ಪೊಲೀಸ್ ನಿಯಂತ್ರಣ ಕೋಣೆ ದೂರವಾಣಿ ಸಂಖ್ಯೆ: 262323, 252233, 08742-263601ಗೆ ಸಂಪರ್ಕಿಸುವಂತೆ ಭಾಲ್ಕಿ ನಗರ ಪೊಲೀಸ್ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

ನಂಬಿಕೆ ಜಗದಂಬಿಕೆ
ಗುರು
ಪ್ರತಿ ಗುರುವಾರ

ಡೆಂಘೀ ಉಲ್ಬಣವಾಗದಂತೆ ಮುನ್ನೆಚ್ಚರಿಕೆ ವಹಿಸಿ: ಜಿಲ್ಲಾಧಿಕಾರಿ ಡಾ.ಸುಶೀಲಾ ಬಿ ಸೂಚನೆ

ಡೆಂಘೀ ನಿಯಂತ್ರಣ ಜಿಲ್ಲಾ ಸಮನ್ವಯ ಸಮಿತಿ ಸಭೆ

ಯಾದಗಿರಿ: ಡೆಂಘೀ ಜ್ವರ ಸಾಮಾನ್ಯವಾಗಿ ಮಳೆಗಾಲದಲ್ಲಿ ಹೆಚ್ಚು ಕಂಡುಬರುತ್ತದೆ. ಈ ರೋಗ ಸೊಳ್ಳೆಗಳಿಂದ ಹರಡುವಂಥದ್ದಾಗಿದ್ದು, ಸಾಮಾನ್ಯವಾಗಿ ಸೊಳ್ಳೆಗಳ ಸಂತಾನೋತ್ಪತ್ತಿ ನೀರಿನಲ್ಲಿ ಮೊಟ್ಟೆಗಳನ್ನಿಡುವ ಮೂಲಕ ಆಗುತ್ತದೆ. ಹೀಗಾಗಿ ಸೊಳ್ಳೆಗಳ ನಿಯಂತ್ರಣಕ್ಕೆ ಎಲ್ಲರೂ ಆದ್ಯತೆ ನೀಡಬೇಕು ಎಂದು ಜಿಲ್ಲಾಧಿಕಾರಿ ಡಾ. ಸುಶೀಲಾ ಬಿ.ಅವರು ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಡೆಂಘೀ ನಿಯಂತ್ರಣ ಜಿಲ್ಲಾ ಸಮನ್ವಯ ಸಮಿತಿ ಸಭೆ ನಡೆಸಿ ಡೆಂಘೀ ಮುನ್ನೆಚ್ಚರಿಕೆ, ನಿಯಂತ್ರಣ ಕ್ರಮಗಳ ಕುರಿತು ಕರಪತ್ರ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಈ ಜ್ವರಕ್ಕೆ ನಿರ್ದಿಷ್ಟ ಚಿಕಿತ್ಸೆಯಿಲ್ಲ, ಬದಲಾಗಿ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ತಪ್ಪದೇ ಅನುಸರಿಸಿ ರೋಗದಿಂದ ದೂರ ಉಳಿಯಬೇಕು ಎಂದು ತಿಳಿಸಿದರು.

ಮಳೆಗಾಲ ಪ್ರಾರಂಭವಾದ ನಂತರ ಡೆಂಘೀ ನಿಯಂತ್ರಣ ಜಿಲ್ಲಾ ಸಮನ್ವಯ ಸಮಿತಿ ಸಭೆ ನಡೆಸಿ ರೋಗವು ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಳ್ಳುವ ಸಂಭವ ಇದೆ, ಆದ ಕಾರಣ ಈಡಿಸ್ ಸೊಳ್ಳೆಗಳು ಹಗಲು ಹೊತ್ತಿನಲ್ಲಿ ಕಚ್ಚುವುದರಿಂದ ವೃದ್ಧರು, ಗರ್ಭಿಣಿಯರು ಹಾಗೂ ಮಕ್ಕಳು ಸೊಳ್ಳೆ ಪರದೆ

ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಡೆಂಘೀ ನಿಯಂತ್ರಣ ಜಿಲ್ಲಾ ಸಮನ್ವಯ ಸಮಿತಿ ಸಭೆ ನಡೆಸಿ ಡೆಂಘೀ ಮುನ್ನೆಚ್ಚರಿಕೆ , ನಿಯಂತ್ರಣ ಕ್ರಮಗಳ ಕುರಿತು ಕರಪತ್ರ ಬಿಡುಗಡೆಗೊಳಿಸಿದರು.

ಯನ್ನು ಕಡ್ಡಾಯವಾಗಿ ಬಳಸಬೇಕು ಅಥವಾ ಸೊಳ್ಳೆ ಬತ್ತಿ, ಮುಲಾಮು, ಇತ್ಯಾದಿ ಸೊಳ್ಳೆ ನಿರೋಧಕಗಳನ್ನು ಉಪಯೋಗಿಸುವುದು ಉತ್ತಮ, ಈಡಿಸ್ ಲಾರ್ವಾ ಸಮೀಕ್ಷೆಗಾಗಿ ಮನೆಗೆ ಭೇಟಿ ನೀಡುವ ಆರೋಗ್ಯ ಸಿಬ್ಬಂದಿ ಹಾಗೂ ಆಶಾಕಾರ್ಯ ಕರ್ತೆಯರಿಗೆ ಸಾರ್ವಜನಿಕರು ಸಹಕಾರಿಸುವು ದರೊಂದಿಗೆ ಆರೋಗ್ಯ ಇಲಾಖೆ ಸಿಬ್ಬಂದಿ ನೀಡುವ ಸಲಹೆಗಳನ್ನು ಪಾಲಿಸಬೇಕು, ಸೊಳ್ಳೆಗಳು ಕಚ್ಚದಂತೆ ಮೈತುಂಬಾ ಬಟ್ಟೆಧರಿಸಬೇಕು ಎಂದು ಸಲಹೆ ನೀಡಿದರು.

ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಶಿಕ್ಷಕರು ಶಾಲೆಗಳು ಪ್ರಾರಂಭವಾಗುವ ಮುನ್ನ ಶಾಲೆಗೆ ಭೇಟಿ ನೀಡಿ ಶಾಲೆಯ ಸುತ್ತಮುತ್ತ ನೀರು ನಿಲ್ಲದಂತೆ ಎಚ್ಚರ ವಹಿಸಬೇಕು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಜಿಲ್ಲೆಯ ಎಲ್ಲಾ ಅಂಗನವಾಡಿ ಕೇಂದ್ರವನ್ನು ಶುಚಿಯಾಗಿಡಬೇಕು ಎಲ್ಲಿಯೂ ನೀರು ನಿಲ್ಲದಂತೆ, ಸೊಳ್ಳೆ ಉತ್ಪತ್ತಿ ತಾಣಗಳು ಕಂಡುಬಾರದ ಹಾಗೆ ಮುನ್ನೆಚ್ಚರಿಕೆ ವಹಿಸಬೇಕು ಮತ್ತು ಜ್ವರ ಸಮೀಕ್ಷೆ ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಭಾಗಿಯಾಗಬೇಕು ಎಂದರು. ಸಮಾಜ ಕಲ್ಯಾಣ

> ತೀವ್ರ, ಜ್ವರ, ವಿಪರೀತ ತಲೆನೋವು, ಕಣ್ಣಿನ ಹಿಂಭಾಗದಲ್ಲಿ ನೋವು, ಮಾಂಸಖಂಡ ಮತ್ತು ಕೀಲುಗಳಲ್ಲಿ ನೋವು, ವಾಕರಿಕೆ, ವಾಂತಿ, ಮೈಮೇಲೆ ಚಿಕ್ಕ ಚಿಕ್ಕ ಗುಳ್ಳೆಯ ಲಕ್ಷಣಗಳು ಕಂಡುಬಂದಲ್ಲಿ ಸಾರ್ವಜನಿಕರು ಸರಕಾರಿ ಆಸ್ಪತ್ರೆ ಅಥವಾ ವೈದ್ಯರನ್ನು ಸಂಪರ್ಕಿಸಿ.
>
> - ಡಾ. ಸುಶೀಲಾ ಬಿ, ಜಿಲ್ಲಾಧಿಕಾರಿಗಳು

ಇಲಾಖೆ ವತಿಯಿಂದ ವಸತಿ ನಿಲಯ, ವಿದ್ಯಾರ್ಥಿ ನಿಲಯಗಳಿಗೆ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಐ.ಆರ್.ಎಸ್ ಮಾಡಿಸಬೇಕು ಎಂದು ಸೂಚಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಡಾ.ಪ್ರಭುಲಿಂಗ ಮಾನಕರ್, ಡೆಂಗ್ಯೂ ನಿಯಂತ್ರಣ ಜಿಲ್ಲಾ ಸಮನ್ವಯ ಸಮಿತಿ ಹಾಗೂ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳಾದ ನಿಯಂತ್ರಣಾಧಿಕಾರಿ ಡಾ.ಸಾಜಿದ್, ನಗರಸಭೆ ಪೌರಾಯುಕ್ತ ಲಕ್ಷ್ಮೀಕಾಂತ, ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿ ಮತ್ತು ಆರೋಗ್ಯ ಇಲಾಖೆ ಅಧಿಕಾರಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಡೆಂಘೀ ನಿಯಂತ್ರಿಸಲು ಹೀಗೆ ಮಾಡಿ

ನೀರನ್ನು ಶೇಖರಿಸಿಡುವ ಸಿಮೆಂಟ್ ತೊಟ್ಟಿ, ಕಲ್ಲು ಚಪ್ಪಡಿಯಿಂದ ನಿರ್ಮಿಸಿದ ತೊಟ್ಟಿ, ಡ್ರಮ್, ಬ್ಯಾರೆಲ್, ಮಣ್ಣಿನ ಮಡಿಕೆ ನೀರಿನಲ್ಲಿ ಸೊಳ್ಳೆಗಳು ಮೊಟ್ಟೆ ಇಡುತ್ತದೆ. ಈ ರೀತಿ ನೀರು ನಿಲ್ಲದಂತೆ ಎಚ್ಚರಿಕೆ ವಹಿಸಬೇಕು. ಚರಂಡಿಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಮನೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಳೆ ನೀರು ಶೇಖರಣೆ ಆಗದಂತೆ ಕ್ರಮಗಳನ್ನು ಕೈಗೊಳ್ಳಬೇಕು. ಬಯಲಿನಲ್ಲಿರುವ ತ್ಯಾಜ್ಯ ವಸ್ತುಗಳಾದ ಟೈಯರ್, ಎಳೆನೀರಿನ ಚಿಪ್ಪು, ಒಡೆದ ಬಾಟಲಿ ಮುಂತಾದವುಗಳಲ್ಲಿ ಮಳೆ ನೀರು ಸಂಗ್ರಹವಾಗದಂತೆ ಎಚ್ಚರಿಕೆ ವಹಿಸುವುದು ಅಥವಾ ಸೂಕ್ತ ವಿಲೇವಾರಿ ಮಾಡುವುದು. ಸ್ವಯಂ ರಕ್ಷಣಾ ವಿಧಾನಗಳಾದ ಸೊಳ್ಳೆ ನಿರೋಧಕಗಳನ್ನು ಹಾಗೂ ಸೊಳ್ಳೆ ಪರದೆಯನ್ನು ಬಳಸಿ, ಸೊಳ್ಳೆಗಳು ಕಚ್ಚದಂತೆ ಎಚ್ಚರಿಕೆ ವಹಿಸುವಂತೆ,ಸ್ವಚ್ಛತೆ ಕಾಪಾಡುವಂತೆ ಜನಸಾಮಾನ್ಯರಲ್ಲಿ ಆರೋಗ್ಯ ಇಲಾಖೆ ಜಾಗೃತಿ ಮೂಡಿಸಲು ಜಿಲ್ಲಾಧಿಕಾರಿಗಳು ತಿಳಿಸಿದರು.

ಬೇಡಿಕೆ ಈಡೇರಿಕೆಗೆ ನೌಕರರ ಪ್ರತಿಭಟನೆ

ಶಹಾಪುರ: ನಾನಾ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ಸರಕಾರಿ ನೌಕರರ ಸಂಘದ ವತಿಯಿಂದ ನಗರದ ಸಚಿವರ ಮನೆಯ ಎದುರು ಪ್ರತಿಭಟನೆ ನಡೆಸಿದರು.

ತಾಲೂಕು ಸರಕಾರಿ ನೌಕರರ ಸಂಘದ ಅಧ್ಯಕ್ಷ ರಾಯಪ್ಪಗೌಡ ಜಿ. ಹುಡೇದ ಮಾತನಾಡಿ ರಾಜ್ಯ ಸರಕಾರ ಚುನಾವಣಾ ಪೂರ್ವದಲ್ಲಿ ಕೊಟ್ಟ ಭರವಸೆಯಂತೆ ರಾಜ್ಯ 7 ನೇ ವೇತನ ಆಯೋಗದ ವರದಿಯನ್ನು ಯಥವತ್ತಾಗಿ ಜಾರಿಗೊಳಿಸಬೇಕು. ಹೊಸ ಪಿಂಚಣಿ ಯೋಜನೆಯನ್ನು ರದ್ದುಗೊಳಿಸಿ, ನಾನಾ ರಾಜ್ಯದಲ್ಲಿ ಜಾರಿಗೆ ತಂದಿರುವಂತೆ ಹಳೇ ಪಿಂಚಣಿ ಯೋಜನೆಯನ್ನು ಮರು ಜಾರಿಗೊಳಿಸಬೇಕು. ಸರಕಾರಿ ನೌಕರರ ಅವಲಂಬಿತ ಕುಟುಂಬದ ಸದಸ್ಯರಿಗೆ ನಗದು ರಹಿತ ಚಿಕಿತ್ಸೆ ನೀಡುವ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ ಜಾರಿಗೊಳಿಸಬೇಕು. ನೌಕರರ ನ್ಯಾಯಯುತ ಬೇಡಿಕೆಗಳನ್ನು ಜಾರಿಗೊಳಿಸುವಲ್ಲಿ ಈಗಾಗಲೇ ವಿಳಂಬವಾಗಿದ್ದು, ಶೀಘ್ರ ಸರಕಾರಿ ಆದೇಶ ಹೊರಡಿಸಿ ಜಾರಿಗೊಳಿಸಲು, ಸರಕಾರಕ್ಕೆ ಶಿಫಾರಸ್ಸು ಮಾಡುವಂತೆ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಪ್ರೌಢ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಭೀಮನಗೌಡ ತಳೇವಾಡ, ಶಿವಲಿಂಗಪ್ಪ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಚಂದಪ್ಪ, ಸಿದ್ದನಗೌಡ ಗೂಗಲ್,

ರಾಜ್ಯ ಸರಕಾರಿ ನೌಕರರ ನಾನಾ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಗೋವಿಂದ ರಾಠೋಡ, ಬಸವರಾಜ ಬಿರೆದಾರ, ನಿವೃತ್ತ ನೌಕರರ ಸಂಘದ ಅಧ್ಯಕ್ಷ ಎನ್.ಸಿ ಪಾಟೀಲ್, ಮಹಿಬೂಬ ದೋರನಹಳ್ಳಿ, ಇಮ್ರಾನ್ ಮಣಿಯಾರ, ಮಾನಪ್ಪಗೌಡ ಕಮತರೆಡ್ಡಿ, ಬಸವರಾಜ ಯಾಳಗಿ,ದೇವಿಂದ್ರಪ್ಪ ತಡಿಬಿಡಿ, ಸಿದ್ರಾಮಪ್ಪ, ಶಿವಾನಂದ ಸಿದ್ರಾ, ಶರಣಪ್ಪ ಸನ್ನತಿ, ರಮೇಶ್ ನಾಯಕ, ದೇವರಾಜ ಗೋನಾಲ ಕಂದಾಯ ಇಲಾಖೆ ನೌಕರರ ಸಂಘದ ಅಧ್ಯಕ್ಷ ವೆಂಕಟೇಶ ಸೇರಿದಂತೆ ವಿವಿಧ ಇಲಾಖೆಯ ಸರಕಾರಿ ನೌಕರರು ಇದ್ದರು.

ಸಚಿವರಿಂದ ಕಾಲೇಜು ಕೋಣೆಗಳ ಉದ್ಘಾಟನೆ

ಶಹಾಪುರ: ಶಿಕ್ಷಣ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿದಾಗ ಮಾತ್ರ ದೇಶದ ಅಭಿವೃದಿ ಸಾಧ್ಯವೆನ್ನುವ ಉದ್ದೇಶದಿಂದ ಸರಕಾರ ಶಿಕ್ಷಣ ಕ್ಷೇತ್ರದ ಹೆಚ್ಚು ಆದ್ಯತೆ ನೀಡುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಹೇಳಿದರು.

ತಾಲೂಕಿನ ಗೋಗಿ ಕೆ. ಗ್ರಾಮದಲ್ಲಿ 2022-23 ನೇ ಸಾಲಿನ ಕೆಕೆಆರ್‌ಡಿಬಿ ಯೋಜನೆ ಯಡಿಯಲ್ಲಿ 60 ಲಕ್ಷ ರು. ವೆಚ್ಚದಲ್ಲಿ ಸರಕಾರಿ ಪಿಯು ಕಾಲೇಜಿನ ನಾಲ್ಕು ಕೋಣೆಗಳ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಶೌಚಾಲಯ, ಗ್ರಂಥಾಲಯ, ಕಂಪ್ಯೂಟರ್ ಸೇರಿದಂತೆ ಇನ್ನಿತರ ಸೌಲಭ್ಯ ಒದಗಿಸುವುದಕ್ಕೆ ಆದ್ಯತೆ ನೀಡಲಾಗುವುದು. ವ್ಯಕ್ತಿತ್ವ ವಿಕಸನದಲ್ಲಿ ಶಿಕ್ಷಣ ಅವಶ್ಯ. ಪ್ರತಿಯೊಬ್ಬರು ವಿದ್ಯೆ ಕಲಿತಾಗ ಮಾತ್ರ ದೇಶ ಅಭಿವೃದ್ಧಿ ಹೊಂದಲು ಸಾಧ್ಯ ಎಂದರು. ಈ ಸಂದರ್ಭದಲ್ಲಿ ಗೋಗಿ ದರ್ಗಾದ ಪೂಜ್ಯ ಸೈಯದ್ ಹಾಸೀಫ್ ಸಜ್ಜಾದ, ಗ್ರಾ.ಪಂ ಅಧ್ಯಕ್ಷೆ ಸಾಬವ್ವ ಹೊಸ್ಮನಿ, ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಬಸವರಾಜಪ್ಪಗೌಡ ತಂಗಡಿಗಿ, ಚಂದಪ್ಪಗೌಡ ತಾಯಮಗೊಳ, ಮಾಣಿಕರೆಡ್ಡಿ ಮಲ್ಹಾರ, ಜಿಲ್ಲಾ ಕಾಂಗ್ರೆಸ್ ವಕ್ತಾರ ಮಲ್ಲಪ್ಪ ಉಳ್ಳಂಡಗೇರಿ, ಮಾಣಿಕರೆಡ್ಡಿ ಶಿರಡ್ಡಿ, ಮಲ್ಲಿಕಾರ್ಜುನ ಹೊಸ್ಮನಿ, ಡಿಡಿಪಿಐ ಚನ್ನಬಸಪ್ಪ ಕುಳಗೇರಿ, ಜೆಇ ಕಳ್ಳಯ್ಯ ಸೇರಿದಂತೆ ಗ್ರಾಮದ ಮುಖಂಡರು, ಯುವಜನರು ಇದ್ದರು.



ಕೆಕೆಆರ್‌ಡಿಬಿ ಯೋಜನೆ ಯಡಿಯಲ್ಲಿ 60 ಲಕ್ಷ ರು. ವೆಚ್ಚದಲ್ಲಿ ಸರಕಾರಿ ಪಿಯು ಕಾಲೇಜಿನ ನಾಲ್ಕು ಕೋಣೆಗಳ ಕಟ್ಟಡವನ್ನು ಶರಣಬಸಪ್ಪಗೌಡ ದರ್ಶನಾಪುರ ಉದ್ಘಾಟಿಸಿದರು.

> ಪೋಷಕರು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುವುದು ಅತ್ಯವಶ್ಯಕವಾಗಿದೆ. ಸರಕಾರ ಶಿಕ್ಷಣ ಇಲಾಖೆಗೆ ಸಾಕಷ್ಟು ಅನುದಾನ ನೀಡಿ ಅನೇಕ ಜನಪ್ರಿಯ ಯೋಜನೆಗಳನ್ನು ಜಾರಿಗೆ ತಂದಿದೆ. ವಿದ್ಯಾರ್ಥಿಗಳು ಅವುಗಳನ್ನು ಸದುಪಯೋಗ ಪಡಿಸಿಕೊಂಡು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು.
>
> - ಶರಣಬಸಪ್ಪಗೌಡ ದರ್ಶನಾಪುರ, ಸಚಿವ

ಅಧಿಕಾರಿಗಳಿಗೆ ಶಾಸಕ ಪ್ರಭು ಚವ್ಹಾಣ ತರಾಟೆ

ಡೆಂಘೀ ನಿಯಂತ್ರಣ ಕುರಿತು ಸಭೆ

ಔರಾದ: ಶಾಸಕ ಪ್ರಭು.ಬಿ ಚವ್ಹಾಣ ಅವರು ಡೆಂಘೀ ಜ್ವರ ನಿಯಂತ್ರಣ ಕುರಿತು ಆರೋಗ್ಯ ಇಲಾಖೆ ಕಚೇರಿಯಲ್ಲಿ ತಾಲೂಕು ಆರೋಗ್ಯಾಧಿಕಾರಿ ಸೇರಿದಂತೆ ಎಲ್ಲ ತಾಲೂಕು ಮಟ್ಟದ ಅಧಿಕಾರಿಗಳ ಸಭೆ ನಡೆಸಿ ಸ್ವಚ್ಛತೆಯ ಕುರಿತಾಗಿ ಅಧಿಕಾರಿಗಳಿಗೆ ತೀವ್ರ ತರಾಟೆಗೆ ತೆಗೆದುಕೊಂಡರು.

ಡೆಂಘೀ ರೋಗ ದಿನೇ ದಿನೇ ಹೆಚ್ಚಾಗುತ್ತಿದೆ. ಆದರೆ ಎಲ್ಲಿಯೂ ಸ್ವಚ್ಛತೆ ಕಾಣಿಸುತ್ತಿಲ್ಲ. ಎಲ್ಲ ಗ್ರಾಮಗಳಲ್ಲಿ ಚರಂಡಿಗಳು ತುಂಬಿವೆ. ಎಲ್ಲೆಂ ದರಲ್ಲಿ ನೀರು ನಿಂತಿರುವುದು ಕಾಣಿಸುತ್ತಿದೆ. ಹೀಗಾದರೆ ಡೆಂಘೀ ನಿಯಂತ್ರಣ ಹೇಗೆ ಸಾಧ್ಯ, ಔರಾದ(ಬಿ) ಪಟ್ಟಣ ಒಳಗೊಂಡು ಎಲ್ಲ ಗ್ರಾಮಗಳಲ್ಲಿ ಒಂದು ವಾರದೊಳಗಾಗಿ ಸ್ವಚ್ಛತೆಯ ಕೆಲಸವಾಗಬೇಕೆಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಡೆಂಘೀ ನಿಯಂತ್ರಣಕ್ಕಾಗಿ ಆರೋಗ್ಯ ಇಲಾಖೆಯ ಜತೆಗೆ ಎಲ್ಲ ಇಲಾಖೆಗಳ ಅಧಿಕಾರಿಗಳು ಸಮನ್ವಯತೆಯೊಂದಿಗೆ ಕೆಲಸ ಮಾಡಬೇಕು. ರೋಗ ಲಕ್ಷಣಗಳ ಕಾಣಿಸಿದಲ್ಲಿ ತಕ್ಷಣ ತಪಾಸಣೆಗೆ ಒಳಪಡಿಸಿ ಚಿಕಿತ್ಸೆ ನೀಡಬೇಕು. ಡೆಂಘೀ ಜ್ವರದ ಲಕ್ಷಣಗಳು, ತಪಾಸಣೆ, ಚಿಕಿತ್ಸೆಯ ಕುರಿತು ಜನರಲ್ಲಿ ತಿಳುವಳಿಕೆ ಮೂಡಿಸಿದಲ್ಲಿ ರೋಗ ಬಾರದಂತೆ ತಡೆಯಬಹುದು. ಹಾಗಾಗಿ ಜಾಗೃತಿ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ಕೊಡಬೇಕು. ವಿಶೇಷವಾಗಿ ಗ್ರಾಮೀಣ ಭಾಗದಲ್ಲಿರುವ ವೈದ್ಯರು ಮತ್ತು ಸಿಬ್ಬಂದಿ ಸರಿಯಾಗಿ ಕೆಲಸ ಮಾಡಬೇಕು. ಮನೆ-ಮನೆಗೆ ಭೇಟಿ ನೀಡಿ ಜಾಗೃತಿ ಮೂಡಿಸಬೇಕು. ಕೆಲವೆಡೆ ಆಶಾ ಕಾರ್ಯಕರ್ತೆಯರು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂಬ ದೂರುಗಳಿವೆ. ಇವುಗಳನ್ನು ಸರಿಪಡಿಸಬೇಕೆಂದು ಹೇಳಿದರು.

ಎಲ್ಲ ಸರಕಾರಿ ಆಸ್ಪತ್ರೆಗಳ ಬಗ್ಗೆ ಒಂದೊಂದಾಗಿ ಮಾಹಿತಿ ಪಡೆದ ಶಾಸಕರು, ಎಲ್ಲ ವೈದ್ಯರು ಸರಿಯಾಗಿ ಕೆಲಸ ಮಾಡಬೇಕು. ಆಸ್ಪತ್ರೆಗೆ ಬರುವ ರೋಗಿಗಳೊಂದಿಗೆ ಸರಿಯಾಗಿ ವ್ಯವಹರಿಸಬೇಕು. ಔಷಧಕ್ಕಾಗಿ ಹೊರಗಡೆ ಚೀಟಿ ಬರೆಯುವುದು, ಸಣ್ಣ ಸಮಸ್ಯೆಗೂ ಜಿಲ್ಲಾ ಕೇಂದ್ರಕ್ಕೆ ಶಿಫಾರಸ್ಸು ಮಾಡುವುದು ನಿಲ್ಲಿಸಬೇಕು. ರೋಗಿಗಳಿಗೆ ಯಾವುದೇ ರೀತಿಯ ಸಮಸ್ಯೆಗಳಾಗದಂತೆ ಕೆಲಸ ಮಾಡಬೇಕೆಂದು ಹೇಳಿದರು.

ಡೆಂಘೀ ನಿಯಂತ್ರಣ ಕುರಿತು ತಾಲೂಕು ಅಧಿಕಾರಿಗಳ ಸಭೆಯಲ್ಲಿ ಶಾಸಕ ಪ್ರಭು ಚವ್ಹಾಣ ಮಾತನಾಡಿದರು.

> ಡೆಂಘೀ ಜ್ವರದ ಲಕ್ಷಣಗಳು, ನಿಯಂತ್ರಣ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಔರಾದ(ಬಿ) ಹಾಗು ಕಮಲನಗರ ತಾಲೂಕು ಕೇಂದ್ರಗಳಿಗೆ ರೋಗ ಪತ್ತೆಗೆ ವ್ಯವಸ್ಥೆ ಮಾಡಲಾಗಿದೆ. ರೋಗ ಲಕ್ಷಣಗಳು ಕಾಣಿಸಿದಲ್ಲಿ ತಕ್ಷಣ ತಪಾಸಣೆ ಮಾಡುವ ಕೆಲಸ ನಡೆದಿದೆ. ಈವರೆಗೆ 22 ಜನರಲ್ಲಿ ರೋಗ ಲಕ್ಷಣಗಳು ಕಾಣಿಸಿದ್ದು, ಇಬ್ಬರಲ್ಲಿ ಡೆಂಗ್ಯೂ ಪತ್ತೆಯಾಗಿದೆ. ಚಿಕಿತ್ಸೆ ನಡೆಯುತ್ತಿದೆ.
>
> - ಡಾ.ಗಾಯತ್ರಿ, ತಾಲೂಕು ವೈದ್ಯಾಧಿಕಾರಿ

ಡೆಂಘೀ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿವೆ. ಹಾಗಾಗಿ ಪಿಡಿಓಗಳು ಕಡ್ಡಾಯವಾಗಿ ಕೇಂದ್ರ ಸ್ಥಾನದಲ್ಲಿದ್ದು, ಕೆಲಸ ಮಾಡಬೇಕು. ತಮ್ಮ ವ್ಯಾಪ್ತಿಯ ಗ್ರಾಮಗಳಿಗೆ ಭೇಟಿ ನೀಡಿ ಸಮಸ್ಯೆಗಳನ್ನು ಪರಿಹರಿಸಬೇಕು. ಆರೋಗ್ಯ ಇಲಾಖೆಯ ಸಂಪರ್ಕದಲ್ಲಿದ್ದು, ಗ್ರಾಮ ಪಂಚಾಯಿತಿಯಿಂದ ಮಾಡಬಹುದಾದ ಎಲ್ಲ ರೀತಿಯ ಸಹಕಾರ ಒದಗಿಸಬೇಕೆಂದು ಸೂಚಿಸಿದರು.

ಈ ಸಂದರ್ಭದಲ್ಲಿ ತಹಸೀಲ್ದಾರರಾದ ಮಲಶೆಟ್ಟಿ ಚಿದ್ರೆ, ಅಮಿತಕುಮಾರ್ ಕುಲಕರ್ಣಿ, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಬೀರೇಂದ್ರಸಿಂಗ್ ಠಾಕೂರ್, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಸ್ವಾಮಿದಾಸ. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸುಭಾಷ, ಕಮಲನಗರ ತಾಪಂ ಸಹಾಯಕ ನಿರ್ದೇಶಕ ಶಿವಕುಮಾರ್ ಘಾಟೆ ಸೇರಿದಂತೆ ವಿವಿಧ ಆಸ್ಪತ್ರೆಗಳ ವೈದ್ಯಾಧಿಕಾರಿಗಳು ಹಾಗೂ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಸಭೆಯಲ್ಲಿದ್ದರು.

ಜಿಲ್ಲಾ ಉಸ್ತುವಾರಿ ಸಚಿವರ ಕಚೇರಿಗೆ ಎಬಿವಿಪಿ ಮುತ್ತಿಗೆ

ವಿದ್ಯಾರ್ಥಿಗಳಿಗೆ ಬಸ್‌ಪಾಸ್ ವಿತರಣೆ ವಿಳಂಬ ಆಕ್ರೋಶ

ಬೀದರ್: ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ರಾಜ್ಯ ಸರಕಾರ ವಿದ್ಯಾರ್ಥಿಗಳಿಗೆ ತರಗತಿಗಳು ಪ್ರಾರಂಭವಾದ ನಂತರ ಸರಿಯಾದ ಸಮಯಕ್ಕೆ ಬಸ್‌ಪಾಸ್ ವಿತರಣೆಯಲ್ಲಿ ವಿಳಂಬವಾಗಿದೆ ಎಂದು ಎಬಿವಿಪಿ ಪದಾಧಿಕಾರಿಗಳು ಬೀದರ್ ನಗರದ ಅಂಬೇಡ್ಕರ್ ವೃತ್ತದಿಂದ ತೆರಳಿ. ಜಿಲ್ಲಾ ಉಸ್ತುವಾರಿ ಸಚಿವರ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಶಾಲಾ ಕಾಲೇಜು ಆರಂಭವಾಗಿ ಎರಡು ತಿಂಗಳು ಕಳೆದರು ಕೂಡ ವಿದ್ಯಾರ್ಥಿಗಳಿಗೆ ಬಸ್‌ಪಾಸ್ ವಿತರಣೆ ಮಾಡಿಲ್ಲ. ಇದರಿಂದ ಬಡ ಪ್ರತಿಭಾವಂತ ವಿದ್ಯಾರ್ಥಿಗಳು ಸೇರಿದಂತೆ ಬಡ ವಿದ್ಯಾರ್ಥಿಗಳಿಗೆ ಸಮಸ್ಯೆ ಎದುರಾಗಿದೆ. ಜಿಲ್ಲೆಯ ವಿವಿಧೆಡೆ ಸರಿಯಾದ ಸಮಯಕ್ಕೆ ಬಸ್ ಸಿಗದೆ ವಿದ್ಯಾರ್ಥಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇನ್ನೂ ಹೆಚ್ಚಿನ ಬಸಗಳ ವ್ಯವಸ್ಥೆ ಕಲ್ಪಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ನಂತರ ಸಚಿವರ ಆಪ್ತ ಸಹಾಯಕರಿಗೆ ಮನವಿ ಸಲ್ಲಿಸಿದರು. ಶಿಕ್ಷಣದಿಂದ ಮಾತ್ರ ಅಭಿವೃದ್ಧಿ ಸಾಧ್ಯ ಎಂದು ಹೇಳುವ ಚುನಾಯಿತ ಪ್ರತಿನಿಧಿಗಳು ವಿದ್ಯಾರ್ಥಿಗಳ ಸಂಕಷ್ಟಕ್ಕೆ ಸ್ಪಂದಿಸಿ. ಹೆಚ್ಚಿನ ಬಸ್ ವ್ಯವಸ್ಥೆ ಹಾಗೂ ಪಾಸ ವಿತರಣೆ. ವಿದ್ಯಾರ್ಥಿ ವೇತನ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಿಗೆ ಏಕರೂಪ ಶೈಕ್ಷಣಿಕ ವೇಳಾಪಟ್ಟಿಯನ್ನು ಸಮರ್ಪಕವಾಗಿ ಜಾರಿ ಮಾಡುವಂತೆ ಸೂಚಿಸಬೇಕು ಎಂದು ಒತ್ತಾಯಿಸಿದರು.

ನಗರ ಕಾರ್ಯದರ್ಶಿ ಆನಂದ. ಸಹ ಕಾರ್ಯದರ್ಶಿ ಪವನ್, ನಾಗರಾಜ, ಅಭಿಷೇಕ, ಶಂಬು ಸೇರಿದಂತೆ ಎಬಿವಿಪಿ ತಾಲೂಕು ಸಂಚಾಲಕ ಮಹೇಶ್, ಶಶಿಕಾಂತ್ ಜಿಲ್ಲಾ ಸಂಚಾಲಕ, ಅಂಬರೀಶ್ ಬಿರಾದರ್ ಪದ್ಮಾಕರ್ ಕಾವೇರಿ ಮಠಪತಿ ರಾಜಕಾರಣಿಸಿದ ಪ್ರಾರ್ಥನಾ ಮಮತಾ

ಬೀದರ್ ನಗರದ ಅಂಬೇಡ್ಕರ್ ವೃತ್ತದಿಂದ ತೆರಳಿ. ಜಿಲ್ಲಾ ಉಸ್ತುವಾರಿ ಸಚಿವರ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

> ವಿದ್ಯಾರ್ಥಿ ವೇತನವನ್ನು ನೀಡುವುದು ಸರಕಾರಗಳ ಕರ್ತವ್ಯ, ಆದರೆ ಕಳೆದ ವರ್ಷದ ವಿದ್ಯಾರ್ಥಿ ವೇತನವು ವಿದ್ಯಾರ್ಥಿಗಳಿಗೆ ಸರಿಯಾಗಿ ಜಮೆಯಾಗದೆ ಇರುವುದು, ಶಾಲಾ ಕಾಲೇಜುಗಳು ಪ್ರಾರಂಭವಾದ ಒಂದು ತಿಂಗಳ ನಂತರ ಹಾಸ್ಟೆಲ್‌ಗಳ ಅರ್ಜಿಯನ್ನು ಪ್ರಾರಂಭ ಮಾಡಿ, ವಿಶ್ವವಿದ್ಯಾಲಯಗಳ ಶೈಕ್ಷಣಿಕ ವೇಳಾಪಟ್ಟಿಯಲ್ಲಿ ಬಹಳಷ್ಟು ಬದಲಾವಣೆ ಇರುವುದರಿಂದ ವಿದ್ಯಾರ್ಥಿಗಳು ಸಾಕಷ್ಟು ತೊಂದರೆಗಳನ್ನು ಅನುಭವಿಸುತ್ತಿದ್ದಾರೆ.
>
> - ಹೇಮಂತ್, ಕಾರ್ಯದರ್ಶಿ

ಇನ್ನಿತ ವಿದ್ಯಾರ್ಥಿಗಳು ಕಾರ್ಯಕರ್ತರು ಉಪಸ್ಥಿತರಿದ್ದರು.

ಕಾಗೋಡು ತಿಮ್ಮಪ್ಪ ಗೆ ಕಾಯಕ ರತ್ನ ಪ್ರಶಸ್ತಿ

ಆನಂದಪುರ: ಮಾಜಿ ಸಚಿವರು, ಮಾಜಿ ಸ್ಪೀಕರ್, ಹಿರಿಯ ಮುತ್ಸದ್ದಿ ಕಾಗೋಡು ತಿಮ್ಮಪ್ಪನವರಿಗೆ ರಾಜ್ಯಮಟ್ಟದ 'ಕಾಯಕ ರತ್ನ ಪ್ರಶಸ್ತಿ' ಯನ್ನು ಜು. 13 ರಂದು ಬೀದರ್‌ನಲ್ಲಿ ನೀಡಿ ಗೌರವಿಸಲಾ ಗುವುದು ಎಂದು ರಾಜ್ಯ ವೈಜ್ಞಾನಿಕ ಸಂ ಶೋಧನಾ ಪರಿಷತ್ತಿನ ಶಿವಮೊಗ್ಗ ಜಿಲ್ಲಾಧ್ಯಕ್ಷ ಬಿ.ಡಿ.ರವಿಕುಮಾರ್ ತಿಳಿಸಿದ್ದಾರೆ.

ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ವೈಜ್ಞಾನಿಕ ಚಿಂತಕ ಡಾ.ಹುಲಿಕಲ್ ನಟರಾಜ್ ಅವರ ನೇತೃತ್ವದಲ್ಲಿ ಆರಂಭಿಸಿ ಯಶಸ್ವಿ 4 ವರ್ಷಗಳಾಗಿದ್ದು, ಪ್ರತಿ ವರ್ಷ ರಾಜ್ಯ ಮಟ್ಟದ ವೈಜ್ಞಾನಿಕ ಸಮ್ಮೇಳನ, ನಾಯಕತ್ವ ಶಿಬಿರ, ವಿಚಾರ ಸಂಕಿರಣ, ಸಾಧಕರಿಗೆ ಹೆಚ್.ಎನ್.ಪ್ರಶಸ್ತಿ ಹಾಗೂ ಶ್ರಮಿಕರಿಗೆ ಕಾಯಕ ರತ್ನ ಪ್ರಶಸ್ತಿ

ಕಾರ್ಯಕ್ರಮಗಳನ್ನು ಆಯೋಜಿಸುತ್ತ ಬಂದಿದೆ ಎಂದರು. ಪ್ರತಿ ವರ್ಷದಂತೆ ಈ ವರ್ಷವು ಕಾಯಕನಾಡು ಬೀದರ್‌ನ ಡಾ.ಚನ್ನಬಸವ ಪಟ್ಟದೇವರ ರಂಗಮಂದಿರದಲ್ಲಿ ಆಯೋಜಿಸಿದ್ದು ಅನುಭವ ಮಂಟಪದ ಅಧ್ಯಕ್ಷರಾದ ನಾಡೋಜ ಡಾ.ಬಸವಲಿಂಗ ಪಟ್ಟದೇವರ ದಿವ್ಯ ಸಾನ್ನಿಧ್ಯ ಹಾಗೂ ಜ್ಞಾನ ಯೋಗಾಶ್ರಮದ ಸಿದ್ರಾಮ ಶರಣರು ಬೆಲ್ದಾಳರ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಉದ್ಘಾಟಿಸುವರು. ರಹೀ ಮ್ ಖಾನ್ ಹಾಗೂ ಡಾ.ಎ.ಎಸ್.ಕಿರಣ್ ಕುಮಾರ್ ಮಾಡಲಿದ್ದಾರೆ. ಹುಲಿಕಲ್ ನಟರಾಜ್ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಚೇತನರಾಮ್ ಉಪನ್ಯಾಸವನ್ನು ನೀಡಲಿದ್ದಾರೆ ಎಂದು ಮಾಹಿತಿ ನೀಡಿದರು.

ಮುಡಾ ಅವ್ಯವಹಾರದ ಸಮಗ್ರ ತನಿಖೆಯಾಗಲಿ

ಔರಾದ: ಮೈಸೂರು ಅಭಿವೃದ್ಧಿ ಪ್ರಾಧಿಕಾರದ (ಮುಡಾ) ಅವ್ಯವಹಾರ ಕುರಿತು ಸಮಗ್ರ ತನಿಖೆಯಾಗಬೇಕೆಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕ ಪ್ರಭು.ಬಿ ಚವ್ಹಾಣ ಅವರು

ಆಗ್ರಹಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿದ ಅವರು, ಮೈಸೂರು ಅಭಿವೃದ್ಧಿ ಪ್ರಾಧಿಕಾರದಿಂದ ದಲಿತರು, ಪರಿಶಿಷ್ಟ ಸಮುದಾಯಕ್ಕೆ ಮೀಸಲಿಟ್ಟ ನಿವೇಶನಗಳನ್ನು ತಮಗೆ ಬೇಕಾದಂತೆ ಹಂಚಲಾಗಿದೆ. ಇದು ಸರಕಾರದಿಂದ ಜನತೆಗೆ ಆಗಿರುವ ಮಹಾ ಮೋಸವಾಗಿದೆ ಎಂದು ಆರೋಪಿಸಿದ್ದಾರೆ. ಪ್ರಭಾವಿಗಳು ತಮಗೆ ಬೇಕಾದವರಿಗೆ ನಿವೇಶನ ಹಂಚಿಕೆ ಮಾಡಿರುವ ಆರೋಪ ಇರುವುದರಿಂದ ಈ ಪ್ರಕರಣ ತೀವ್ರ ಗಂಭೀರ ಸ್ವರೂಪವನ್ನು ಪಡೆದುಕೊಂಡಿದೆ. ಹಾಗಾಗಿ ಪಕ್ಷಾತೀತವಾಗಿ ತನಿಖೆ ನಡೆಸುವ ಅವಶ್ಯಕತೆಯಿದೆ ಎಂದಿದ್ದಾರೆ. ಸರಕಾರ ಏನು ಮಾಡಿದರೂ ಯಾರೂ ಕೇಳುವುದಿಲ್ಲ ಎಂದುಕೊಂಡಂತೆ ಕಾಣುತ್ತಿದ್ದು, ಒಂದರ ಮೇಲೊಂದು ಹಗರಣಗಳನ್ನು ನಡೆಸಲಾಗುತ್ತಿದೆ. ಬಡವರು, ಹಿಂದುಳಿದವರ ಪರವಾಗಿ ಪರವಾಗಿ ಮಾತನಾಡುವ ಜನಪ್ರತಿನಿಧಿಗಳೇ ಬಡ ಜನತೆಗೆ ಅನ್ಯಾಯ ಮಾಡುತ್ತಿದ್ದಾರೆ. ಮುಡಾ ಅವ್ಯವಹಾರದಲ್ಲಿ ತೊಡಗಿದ ಪ್ರತಿಯೊಬ್ಬರ ವಿರುದ್ಧ ಕಠಿಣ ಕ್ರಮವಾಗಬೇಕು ಎಂದು ಸರಕಾರಕ್ಕೆ ಒತ್ತಾಯಿಸಿದ್ದಾರೆ.

ಸಿಸಿ ರಸ್ತೆ ಕಾಮಗಾರಿಗಳಿಗೆ ಅಡಿಗಲ್ಲು

ತಂದೆಯ ಅಭಿವೃದ್ಧಿಯ ಕನಸು ನನಸಾಗಿಸುವೆ

ಸುರಪುರ: ತಾಲೂಕಿನ ರತ್ತಾಳ, ಬಾದ್ಯಾಪೂರ, ಬಾದ್ಯಾಪೂರ ದೊಡ್ಡಿ, ಬೈರಿಮಡ್ಡಿ, ಖಾನಾಪೂರ(ಎಸ್. ಎಚ್), ಕೃಷ್ಣಾಪೂರ, ಕವಡಿಮಟ್ಟಿ, ಹೇಮನೂರ, ಸೂಗೂರು, ಚೌಡೇಶ್ವರಿಹಾಳ, ಹಾವಿ ನಾಳ, ದೇವಾಪೂರ, ಶೇಳ್ಳಗಿ, ಆಲ್ದಾಳ, ತಳವರಗೇರಾ, ಮಂಗಿ ಹಾಳ, ವಾಗಣಗೇರಾ, ಬೆಂಚಿಗಡ್ಡಿ, ಅಮಲಿಹಾಳ, ನೀಲಕಂಠರಾ ಯನಗಡ್ಡಿ, ದೇವತ್ಕಲ್, ಕೋನ್ಹಾಳ, ಗೋನಾಲ(ಎಸ್.ಡಿ) ಕನ್ನಳ್ಳಿ ಕ್ಯಾಂಪ್, ದೇವರಗೋನಾಲ, ಮಾಚಗುಂಡಾಳ, ಬೋಮ್ಮನ ಹಳ್ಳಿ(ಕೆ), ಮಲ್ಲಿಬಾವಿ. ದೇವರಗಡ್ಡಿ, ಮೇಲಿನಗಡ್ಡಿ, ಬಂಡೆಗುಡ್ಡ ಕ್ಯಾಂಪ್, ನಾರಾಯಣಪೂರ ಐ.ಬಿ ತಾಂಡಾ, ನಾರಾಯಣಪೂರ, ಮಂಗಳೂರು, ದೇವಿಕೇರಾ, ಅರಕೇರಾ(ಕೆ), ಹೆಬ್ಬಾಳ(ಕೆ) ಗ್ರಾಮಗಳು ಹಾಗೂ ಸುರಪುರ ನಗರಸಭೆಯಲ್ಲಿ ಬರುವ ದರಬಾರ ಶಾಲೆ, ದಖನಿ ಮೊಹಲ್ಲದಲ್ಲಿ ಅಂಗನವಾಡಿ ಕೇಂದ್ರ, ಕಾಮಗಾರಿ ಗಳನ್ನು 23-24ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಯೋಜನೆಯ ಅಡಿಯಲ್ಲಿ ಸುಮಾರು 4 ಕೋಟಿಗೂ ಅಧಿಕ ವೆಚ್ಚದ ಸಿ.ಸಿ.ರಸ್ತೆ ಮತ್ತು ಚರಂಡಿ ಕಾಮಗಾರಿಗಳಿಗೆ ಶಾಸಕ ರಾಜಾ ವೇಣುಗೋಪಾಲ ನಾಯಕ ಅವರು ಗುದ್ದಲಿ ಪೂಜೆ ನೇರವೇರಿಸಿ ಕಾಮಗಾರಿಗಳಿಗೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ತಾಲೂಕಿನ ಗ್ರಾಮೀಣ ಭಾಗಗಳಿಗೆ ಮೂಲಸೌಕರ್ಯ ಒದಗಿಸುವ ಮೂಲಕ ಆ ಭಾಗಗಳ ಅಭಿವೃದ್ಧಿಗೆ ಶ್ರಮಿಸುವೆ, ತಂದೆಯವರು ಹೆಚ್ಚಿನ ಅನುದಾನ ತಂದು ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ಕನಸು ಹೊತ್ತಿದ್ದರು, ಅವರ ಕನಸನ್ನು ಸಕಾರ ಗೊಳಿಸಲು ಕ್ಷೇತ್ರದಾದ್ಯಂತ ಪರ್ಯಾಟನ ನಡೆಸಿ ಅಭಿವೃದ್ಧಿ

ಶಾಸಕ ರಾಜ ವೇಣುಗೋಪಾಲ್ ನಾಯಕ್ ಅವರು ಸಿಸಿ ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದರು.

ಕೆಲಸಗಳನ್ನು ಕೈಗೊಳ್ಳುವ ಮೂಲಕ ಸರ್ವಾಂಗಿಣ ಅಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದರು. ಇನ್ನೂ ಗುದ್ದಿಲಿ ಪೂಜೆ ನೆರವೇರಿಸಿರುವ ಎಲ್ಲಾ ಕಾಮಗಾರಿಗಳನ್ನು ನಿಗದಿತ ಸಮಯದಲ್ಲಿ ಗುಣಮಟ್ಟದ ಸಾಮಗ್ರಿಗಳನ್ನು ಬಳಸಿ ಕಾಮಗಾರಿಗಳನ್ನು ಪ್ರಾರಂಭಿಸುವಂತೆ ಅಧಿಕಾರಿಗಳಿಗೆ ಮತ್ತು ಗುತ್ತಿಗೆದಾರರಿಗೆ ಸೂಚಿಸಿದರು.

ವೆಂಕೋಬ ಯಾದವ, ಮಲ್ಲಣ್ಣ ಸಾಹುಕಾರ, ಪ್ರಕಾಶ್ ಗುತ್ತೇದಾರರು, ರಾಜಾ ಸುಭಾಶ್ಚಂದ್ರ ನಾಯಕ, ರಾಜಾ ಸುಶಾಂತ ನಾಯಕ, ರಾಮಚಂದ್ರಪ್ಪ ಪೂಜಾರಿ, ಸಾಹೇಬಗೌಡ ದೇವಿಕೇರಾ, ರಾಜಾ ಪಿಡ್ಡ ನಾಯಕ(ತಾತಾ), ಹಾಗೂ ಇನ್ನಿತರರು ಉಪಸ್ಥಿತರರಿದ್ದರು.

ಹಡಪದ ಅಪ್ಪಣ್ಣ ಜಯಂತಿ ಜು.21

ಬೀದರ್: ಪ್ರತಿ ವರ್ಷದಂತೆ ಈ ವರ್ಷವು ಜು. 21 ರಂದು ಹಡಪದ ಅಪ್ಪಣ್ಣ ಜಯಂತಿಯನ್ನು ಎಲ್ಲರೂ ಸೇರಿ ಅದ್ದೂರಿಯಾಗಿ ಆಚರಿಸೋಣ ಎಂದು ಅಪರ ಜಿಲ್ಲಾಧಿಕಾರಿ ಶಿವಕುಮಾರ್ ಶೀಲವಂತ ಹೇಳಿದರು. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಯಂತಿ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು ಜುಲೈ. 21 ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಹಡಪದ ಅಪ್ಪಣ್ಣ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಗುತ್ತದೆ. ನಂತರ 11 ಗಂಟೆಗೆ ಪೂಜ್ಯ ಚನ್ನಬಸವ ಪಟ್ಟದ್ದೇವರು ಜಿಲ್ಲಾ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ಜರುಗಲಿದೆ.ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮಹೇಶ ಮೆಘಣ್ಣವರ ಮಾತನಾಡಿ, ಕಾರ್ಯಕ್ರಮ ನಡೆಯುವ ದಿನದಂದು ಯಾವುದೇ ತೊಂದರೆಯಾಗದಂತೆ ಸೂಕ್ತ ಪೊಲೀಸ್ ವ್ಯವಸ್ಥೆ ಮಾಡಲಾಗುವುದು. ಮಹನೀಯರ ಜಯಂತಿಗಳನ್ನು ಎಲ್ಲರೂ ಸೇರಿ ಶಾಂತಿಯುತವಾಗಿ ಆಚರಿಸಬೇಕು ಎಂದು ಹೇಳಿದರು. ಜಿಲ್ಲಾ ಹಡಪದ ಅಪ್ಪಣ್ಣ ಸಮಾಜ ಸಂಘ ಜಿಲ್ಲಾಧ್ಯಕ್ಷ ಪ್ರಭುರಾವ್ ತರನಳ್ಳಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಿದ್ರಾಮ ಶಿಂಧೆ, ಸಮಾಜದ ರಾಷ್ಟ್ರೀಯ ಅಧ್ಯಕ್ಷ ಸಂಗಮೇಶ ವಣಕೂರ, ಉಪಾಧ್ಯಕ್ಷ ಗಣೇಶ ಹಡಪದ, ವಿಜಯಕುಮಾರ್ ಸೋನಾರೆ, ಅಬಕಾರಿ ಅಧಿಕಾರಿ ಬಿ. ಶರಣಮ್ಮ, ವಿರೂಪಾಕ್ಷ ಗಾದಗಿ, ಶಿವಪ್ರಸಾದ, ಸಂಗೀತಾ ಬಿರಾದಾರ, ಸಂಗಪ್ಪ ಕಾಂಬಳೆ ಸೇರಿದಂತೆ ಇತರೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ

{ಶಿವರಾಜ ತಂಗಡಗಿ } ಸಚಿವ

ಮುಂದಿನ 3 ತಿಂಗಳ ಒಳಗಾಗಿ ಕ್ಯಾಂಟೀನ್ ಕಟ್ಟಡ ಕಾಮಗಾರಿ ಪೂರ್ಣಗೊಂಡು, ಲೋಕಾರ್ಪಣೆ ಆಗಲಿದೆ. ಕ್ಯಾಂಟೀನ್ ನಲ್ಲಿ ಉತ್ತರ ಕರ್ನಾಟಕ ಭಾಗದ ದಿನಸಿಗಳಾದ ರೊಟ್ಟಿ, ಕಾಳು, ವಿವಿಧ ತರಕಾರಿ ಪಲ್ಯ ಸೇರಿ ಸ್ಥಳೀಯ ಆಹಾರ ಪದಾರ್ಥ ನೀಡಲಾಗುವುದು.

@vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಶನಿವಾರ 13.07.2024 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಜೇಮ್ಸ್ ಆಂಡರ್ಸನ್ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ

ಇಂಗ್ಲೆಂಡ್‌ನ ಹಿರಿಯ ವೇಗಿ ಜೇಮ್ಸ್ ಆಂಡರ್ಸನ್ ಅವರು ವೆಸ್ಟ್ ಇಂಡೀಸ್ ವಿರುದ್ಧದ ಮೊದಲನೇ ಟೆಸ್ಟ್ ಪಂದ್ಯದ ಮೂಲಕ ತಮ್ಮ ಎರಡು ದಶಕಗಳ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ. ಇಂಗ್ಲೆಂಡ್ ಗೆಲುವು ಸಾಧಿಸಿದ ಈ ಪಂದ್ಯದಲ್ಲಿ ಜೇಮ್ಸ್ ಆಂಡರ್ಸನ್ 4 ವಿಕೆಟ್‌ಗಳನ್ನು ಕಬಳಿಸಿದರು. ಆ್ಯಂಡರ್ಸನ್ ಒಟ್ಟು 188 ಟೆಸ್ಟ್ ಪಂದ್ಯಗಳಿಂದ ಅವರು 704 ವಿಕೆಟ್‌ಗಳನ್ನು ಪಡೆದಿದ್ದಾರೆ. ಮೂರು ಬಾರಿ 10 ವಿಕೆಟ್ ಸಾಧನೆ ಮಾಡಿದ್ದರೆ, 32 ಬಾರಿ 5 ವಿಕೆಟ್ ಸಾಧನೆ ಮಾಡಿದ್ದಾರೆ.

ಪುಟ ತೆರೆದಂತೆ...

ಮೋದಿ ಪುಟಿನ್ ಭೇಟಿ ರಾಜತಾಂತ್ರಿಕ ಸಂದೇಶ
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
ಸಂ.ಪುಟ | 6

ಡೆಂಘೀ ಜ್ವರದಲ್ಲಿ ಆಯುರ್ವೇದೋಕ್ತ ಉಪಚಾರ
ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ

ಸಂ.ಗಮ | 7

ಮಾತಂದ್ರೆ ಮಾತು

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ತಪ್ಪು ಮಾಡಿದ್ದರೆ ಒಪ್ಪಿಕೊಂಡು ಬಿಡಬೇಕು. ಅದು ಅಲ್ಲಿಗೇ ಮುಗಿದುಹೋಗುತ್ತದೆ. ಒಂದು ಸುಳ್ಳು ಮುಚ್ಚಿಡುವುದಕ್ಕೆ ಮತ್ತಷ್ಟು ಸುಳ್ಳು ಹೇಳಬಾರದು. ಅವರು ತಪ್ಪು ಮಾಡಿದ್ದರೆ ಖಂಡಿತ ನಮಗೂ ಮುಜುಗರ ಆಗುತ್ತದೆ. ಸಚಿವರು, ಶಾಸಕರು ಇದರಲ್ಲಿ ಭಾಗಿಯಾಗಿದ್ದರೆ ಸರಕಾರಕ್ಕೆ ಅದರಿಂದ ಕಳಂಕ.

ಸತೀಶ ಜಾರಕಿಹೊಳಿ
ಲೋಕೋಪಯೋಗಿ ಸಚಿವ

ದಾರಿದೀಪೋಕ್ತಿ

ಒಂದು ಸಮಸ್ಯೆ ಇಬ್ಬರಿಗೆ ಎದುರಾದರೆ ಅದನ್ನು ಅವರು ನಿಭಾಯಿಸುವ ರೀತಿ ಒಂದೇ ರೀತಿ ಆಗಿರುವುದಿಲ್ಲ. ತಮ್ಮ ಮೂಗಿನ ನೇರಕ್ಕೆ ಸಮಸ್ಯೆಗಳನ್ನು ಅರ್ಥೈಸಿಕೊಂಡು ಅದನ್ನು ನಿಭಾಯಿಸಲು ಮುಂದಾಗುತ್ತಾರೆ. ಅಂದರೆ ಒಂದು ಸಮಸ್ಯೆಗೆ ನಾವು ಹೇಗೆ ಸ್ಪಂದಿಸುತ್ತೇವೆ ಎಂಬುದು ಮುಖ್ಯ. ಯಾವ ಮಾರ್ಗ ಅನುಸರಿಸಬೇಕು ಎಂಬುದು ಮುಖ್ಯ.

ವಕ್ರತುಂಡೋಕ್ತಿ

ಬಡವರಂತೆ ಕಾಣುವುದು ಸುಲಭವಲ್ಲ, ಅದಕ್ಕೂ ಸಾಕಷ್ಟು ಖರ್ಚಾಗುತ್ತದೆ.

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ: ವಿಚಾರಣೆ ಬಳಿಕ ಮಾಜಿ ಸಚಿವ ಇ.ಡಿ. ಕಸ್ಟಡಿಗೆ | ಆಪ್ತ ಸಹಾಯಕರ ತಪ್ಪೊಪ್ಪಿಗೆ ಹೇಳಿಕೆಯಲ್ಲಿ ಇಬ್ಬರು ಶಾಸಕರು ಹೆಸರು ಬಯಲು

ನಾಗೇಂದ್ರ ಬಂಧನ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದ ಬಹುಕೋಟಿ ಹಗರಣ ಸಂಬಂಧ ಮಾಜಿ ಸಚಿವ ಬಿ. ನಾಗೇಂದ್ರ ಅವರನ್ನು ಶುಕ್ರವಾರ ಜಾರಿ ನಿರ್ದೇಶನಾಲಯ (ಇ.ಡಿ) ಕೊನೆಗೂ ಬಂಧಿಸಿದೆ.

ಪ್ರಕರಣ ಸಂಬಂಧ ಜಾರಿ ನಿರ್ದೇಶನಾಲಯದ ನಾಲ್ವರು ಅಧಿಕಾರಿಗಳ ತಂಡ ಬುಧವಾರ ನಾಗೇಂದ್ರ ಮತ್ತು ಶಾಸಕ ಬಸವನಗೌಡ ದದ್ದಲ್ ಅವರ ನಿವಾಸ ಸೇರಿ 18 ಕಡೆಗಳಲ್ಲಿ ದಾಳಿ ನಡೆಸಿತ್ತು. ಬಳಿಕ ಮಾಜಿ ಸಚಿವರನ್ನು ವಶಕ್ಕೆ ಪಡೆದ ಪಡೆದ ಅಧಿಕಾರಿಗಳು ಸತತ ವಿಚಾರಣೆಗೆ ಒಳಪಡಿಸಿದ್ದರು. ಗುರುವಾರ ದಿನವಿಡೀ ನಾಗೇಂದ್ರ ಹಾಗೂ ಕುಟುಂಬದವರನ್ನು ಮನೆಯಿಂದ ಹೊರಬಿಡದೆ ಇಡಿ ಅಧಿಕಾರಿಗಳು ನಿರಂತರವಾಗಿ ಪ್ರಶ್ನೆ ಮಾಡಿದ್ದರು. ಶುಕ್ರವಾರ ಶಾಂತಿನಗರದ ಕಚೇರಿಗೆ ಕರೆ ತಂದ ಅಧಿಕಾರಿಗಳು ಮತ್ತೆ ವಿಚಾರಣೆಗೆ ಗುರಿಪಡಿಸಿದ್ದರು. ವಾಲ್ಮೀಕಿ ನಿಗಮದಲ್ಲಿ ನಡೆದ 185 ಕೋಟಿ ರುಪಾಯಿಗಳ ಅವ್ಯವಹಾರದ ಬಗ್ಗೆ ತಮಗೆ ಯಾವುದೇ ಸುಳಿವು ಇರಲಿಲ್ಲ ಎಂದೇ ನಾಗೇಂದ್ರ ಹೇಳಿದ್ದರು. ಆದರೆ ನಾಗೇಂದ್ರ ಅವರ ಆಪ್ತ ಸಹಾಯಕ ಹರೀಶ್ ಹೇಳಿಕೆಯಿಂದಾಗಿ ಮಾಜಿ ಸಚಿವರ ಕೈವಾಡದ ಬಗ್ಗೆ ಅನುಮಾನ ಮೂಡಿದ್ದು ಸುದೀರ್ಘ ವಿಚಾರಣೆ ಬಳಿಕ ಅವರನ್ನು ಇ.ಡಿ. ಅಧಿಕಾರಿಗಳು ಬಂಧಿಸಿದ್ದಾರೆ.

ನಾಗೇಂದ್ರ ಆಪ್ತ ಸಹಾಯಕ ಹರೀಶ್ ಗುರುವಾರದಿಂದ ಇ.ಡಿ ವಶದಲ್ಲಿದ್ದಾರೆ. ಯೂನಿಯನ್ ಬ್ಯಾಂಕ್‌ನಲ್ಲಿ ಸುಳ್ಳು ದಾಖಲೆ ನೀಡಿ ಅಕ್ರಮ ಖಾತೆ ತೆರೆದು ಕೋಟ್ಯಂತರ ರುಪಾಯಿ ನಿಗಮದ ಹಣವನ್ನು ವರ್ಗಾಯಿಸಿರುವ ಬಗ್ಗೆ ಹರೀಶ್ ಹೇಳಿಕೆ ನೀಡಿದ್ದಾರೆ ಎನ್ನಲಾಗಿದ್ದು, ಈ ಸಂಬಂಧ ತನಿಖಾ ಸಂಸ್ಥೆಗೆ ಹಲವು ಸಾಕ್ಷಿಗಳು ಲಭ್ಯವಾಗಿವೆ. ಬ್ಯಾಂಕ್ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲನೆ ಮಾಡಿದಾಗಲೂ, ಹರೀಶ್ ಹಾಗೂ ಶಾಸಕ ದದ್ದಲ್ ಅವರ ಮಾಜಿ ಆಪ್ತ ಸಹಾಯಕ ಪಂಪಣ್ಣ ಅಲ್ಲಿಗೆ ಬಂದು ಹೋಗಿರುವ ದಾಖಲೆ ಲಭ್ಯವಾಗಿದೆ. ಅಕ್ರಮ ಬ್ಯಾಂಕ್ ಖಾತೆ ತೆರೆಯುವ ಸಂಬಂಧ 50 ಲಕ್ಷ ಡೀಲ್ ನಡೆಸಿರುವ ಕುರಿತು ಬಂಧಿತ ಬ್ಯಾಂಕ್ ಅಧಿಕಾರಿಗಳು ಬಾಯಿ ಬಿಟ್ಟಿದ್ದಾರೆ. ಹೀಗಾಗಿ ಅಂತಿಮವಾಗಿ ತನಿಖೆಯ ಉರುಳು ನಾಗೇಂದ್ರ ಕೊರಳಿಗೆ ಸುತ್ತಿಕೊಂಡಿದೆ.

→ 4

ಏನಿದು ಪ್ರಕರಣ?

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಲೆಕ್ಕಪರಿಶೋಧಕರಾಗಿದ್ದ ಚಂದ್ರಶೇಖರನ್ ಅವರು ಆತ್ಮಹತ್ಯೆ ಮಾಡಿಕೊಂಡ ಬೆನ್ನಲ್ಲೇ ನಿಗಮದಲ್ಲಿ ಕೋಟ್ಯಂತರ ರುಪಾಯಿ ಅವ್ಯವಹಾರ ನಡೆದಿರುವುದು ಬೆಳಕಿಗೆ ಬಂದಿತ್ತು. ಡೆತ್ ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದ ಚಂದ್ರಶೇಖರನ್, ನಿಗಮದಲ್ಲಿ ಅಕ್ರಮ ಹಣ ವರ್ಗಾವಣೆ ಹಾಗೂ ಅನುದಾನದ ದುರುಪಯೋಗದ ಆರೋಪ ಮಾಡಿದ್ದರು. ಡೆತ್ ನೋಟ್‌ನಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಚಿವರಾಗಿದ್ದ ಶಾಸಕ ಬಿ.ನಾಗೇಂದ್ರ ಅವರ ಹೆಸರನ್ನೂ ಉಲ್ಲೇಖಿಸಿದ್ದರು. ಈ ಹಿನ್ನೆಲೆಯಲ್ಲಿ ಬಿ.ನಾಗೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಪ್ರತಿಪಕ್ಷಗಳು ಒತ್ತಾಯಿಸಿದ್ದವು. ಬಳಿಕ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಎಸ್‌ಐಟಿ ದದ್ದಲ್ ಹಾಜರ್

ಶಾಸಕ ಬಸನಗೌಡ ದದ್ದಲ್ ಅವರು ಎಸ್‌ಐಟಿ ಎದುರು ವಿಚಾರಣೆಗೆ ಹಾಜರಾಗಿ ಅಚ್ಚರಿ ಮೂಡಿಸಿದರು. ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು ಹಗರಣದ ಬಗ್ಗೆ ದದ್ದಲ್ ಅವರಿಗೆ ಪ್ರಶ್ನೆಗಳನ್ನು ಕೇಳಿ ಮಾಹಿತಿಗಳನ್ನು ಪಡೆದುಕೊಂಡರು. ಬುಧವಾರ ಇ.ಡಿ ಅಧಿಕಾರಿಗಳು ದದ್ದಲ್ ಅವರ ಬೆಂಗಳೂರಿನ ಯಲಹಂಕದ ನಿವಾಸ, ಕಚೇರಿ ಹಾಗೂ ರಾಯಚೂರಿನ ನಿವಾಸ ಸೇರಿದಂತೆ ಹಲವೆಡೆ ದಾಳಿ ಮಾಡಿ ಶೋಧ ನಡೆಸಿದ್ದರು. ಗುರುವಾರ ಶಾಸಕರ ಸಮ್ಮುಖದಲ್ಲಿಯೇ ಆಪ್ತರು ಸೇರಿದಂತೆ ಹಲವರನ್ನು ಇ.ಡಿ ಅಧಿಕಾರಿಗಳು ವಿಚಾರಣೆ ನಡೆಸಿದ್ದರು. ಇ.ಡಿ. ಬಂಧನದಿಂದ ತಪ್ಪಿಸಿಕೊಳ್ಳಲು ಶಾಸಕ ದದ್ದಲ್ ಅವರು ಶುಕ್ರವಾರ ಬೆಳಿಗ್ಗೆಯೇ ಎಸ್‌ಐಟಿ ಎದುರು ವಿಚಾರಣೆಗೆ ಹಾಜರಾಗಿದ್ದಾರೆ ಎನ್ನಲಾಗುತ್ತಿದೆ.

ರಿಷಬ್ ಅತ್ಯುತ್ತಮ ನಟ ಚಾರ್ಲಿಗೆ ಪ್ರಶಸ್ತಿಯ ಗರಿ

ಫಿಲ್ಮ್ ಫೇರ್ ಪ್ರಶಸ್ತಿ ಪ್ರಕಟ

ಬೆಂಗಳೂರು: 2023ನೇ ಸಾಲಿನ ಫಿಲ್ಮ್‌ಫೇರ್ ಪ್ರಶಸ್ತಿ ಘೋಷಣೆಯಾಗಿದೆ. ಈ ಸಾಲಿನಲ್ಲಿ ಹಲವು ಕನ್ನಡದ ಹಲವು ಚಿತ್ರಗಳು ಪ್ರಶಸ್ತಿ ಪಡೆದುಕೊಂಡಿವೆ. ಅತ್ಯುತ್ತಮ ನಟ, ನಟಿಯರು, ನಿರ್ದೇಶಕರು, ಸಿನಿಮಾಗಳು, ಸಂಗೀತ ನಿರ್ದೇಶಕರು ಹಾಗೂ ತಂತ್ರಜ್ಞರಿಗೆ ಹಲವು ವಿಭಾಗಗಳಲ್ಲಿ ಪ್ರಶಸ್ತಿ ಘೋಷಿಸಲಾಗಿದೆ. ಕಾಂತಾರ ಸಿನಿಮಾ ಪ್ರಶಸ್ತಿಯಲ್ಲಿ ಸಿಂಹಪಾಲು ಪಡೆದಿದೆ. ಕಾಂತಾರದ ಅದ್ಭುತ ನಟನೆಗೆ ರಿಷಬ್ ಶೆಟ್ಟಿ ಅತ್ಯುತ್ತಮ ನಟ ಪ್ರಶಸ್ತಿ ಪಡೆದರೆ, ಚಾರ್ಲಿ 777 ಚಿತ್ರದ ನಿರ್ದೇಶನ ಕ್ಕಾಗಿ ಕಿರಣ್‌ರಾಜ್ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ ಮುಡುಗೇರಿ ಸಿಕೊಂಡಿದ್ದಾರೆ.

- ಅತ್ಯುತ್ತಮ ಸಿನಿಮಾ: ಕಾಂತಾರ
- ಅತ್ಯುತ್ತಮ ನಿರ್ದೇಶಕ: ಕಿರಣ್ ರಾಜ್ ಕೆ (777 ಚಾರ್ಲಿ)
- ಅತ್ಯುತ್ತಮ ನಟ: ರಿಷಬ್ ಶೆಟ್ಟಿ (ಕಾಂತಾರ)
- ಅತ್ಯುತ್ತಮ ನಟಿ: ಚೈತ್ರಾ ಆಚಾರ್ (ತಲೆದಂಡ)
- ಅತ್ಯುತ್ತಮ ಚಿತ್ರ: (ವಿಮರ್ಶಾತ್ಮಕ) ಧರಣಿ ಮಂಡಲ ಮಧ್ಯದೊಳಗೆ (ಶ್ರೀಧರ್ ಶಿಕಾರಿಪುರ)
- ಅತ್ಯುತ್ತಮ ನಟಿ: (ವಿಮರ್ಶಕರ ಮೆಚ್ಚಿನ) ಸಪ್ತಮಿಗೌಡ (ಕಾಂತಾರ)
- ಅತ್ಯುತ್ತಮ ನಟ: (ವಿಮರ್ಶಕರ ಮೆಚ್ಚಿನ) ನವೀನ್ ಶಂಕರ್ (ಧರಣಿ ಮಂಡಲ ಮಧ್ಯದೊಳಗೆ)
- ಅತ್ಯುತ್ತಮ ಪೋಷಕ ನಟ: ಅಚ್ಯುತ್ ಕುಮಾರ್ (ಕಾಂತಾರ)
- ಅತ್ಯುತ್ತಮ ಪೋಷಕ ನಟಿ: ಎನ್.ಮಂಗಳಾ (ತಲೆದಂಡ)
- ಅತ್ಯುತ್ತಮ ಗಾಯಕ: ಸಾಯಿ ವಿಘ್ನೇಶ್ (ವರಾಹ ರೂಪಂ-ಕಾಂತಾರ)
- ಅತ್ಯುತ್ತಮ ಗಾಯಕಿ: ಸುನಿಧಿ ಚೌಹಾಣ್ (ರಾ ರಾ ರಕ್ಕಮ್ಮ-ವಿಕ್ರಾಂತ್ ರೋಣ)
- ಅತ್ಯುತ್ತಮ ಸಂಗೀತ ನಿರ್ದೇಶನ: ಅಜನೀಶ್.ಬಿ. ಲೋಕನಾಥ್ (ಕಾಂತಾರ)
- ಅತ್ಯುತ್ತಮ ಸಾಹಿತ್ಯ: ವಿ.ನಾಗೇಂದ್ರ ಪ್ರಸಾದ್ (ಬೆಳಕಿನ ಕವಿತೆ-ಬನಾರಸ್)

ಸಿಡಬ್ಲ್ಯುಆರ್‌ಸಿ ಆದೇಶ ಪಾಲನೆ ಕುರಿತು ಚರ್ಚೆ ಮೇಲ್ಮನವಿ ಸಲ್ಲಿಸಲು ರಾಜ್ಯ ಸರಕಾರ ತೀರ್ಮಾನ

ಸರ್ವಪಕ್ಷ ಸಭೆ ನಾಳೆ

ಬೆಂಗಳೂರು: ಕೆಆರ್‌ಎಸ್ ಸೇರಿದಂತೆ ಕಾವೇರಿ ನದಿಪಾತ್ರದ ಜಲಾಶಯಗಳು ತುಂಬುವ ಮೊದಲೇ, ನೀರು ಬಿಡುಗಡೆಗೆ ಕಾವೇರಿ ನೀರು ನಿಯಂತ್ರಣ ಸಮಿತಿಯ ಆದೇಶವನ್ನು ಪ್ರಶ್ನಿಸಿ, ಕಾವೇರಿ ನಿರ್ವಹಣಾ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸುವುದರೊಂದಿಗೆ, ರಾಜ್ಯದ ಮುಂದಿನ ನಡೆ ಚರ್ಚಿಸಲು ಭಾನುವಾರ ಸರ್ವಪಕ್ಷ ಸಭೆಯನ್ನು ಕರೆಯಲು ಸರಕಾರ ತೀರ್ಮಾನಿಸಿದೆ.

- ಈ ಬಾರಿ ವಾಡಿಕೆ ಮಳೆಯಾಗುವುದೆಂಬ ಮುನ್ಸೂಚನೆಯಿದ್ದರೂ ಶೇ.28ರಷ್ಟು ಒಳಹರಿವಿನ ಕೊರತೆ ಇದೆ
- ಕಾವೇರಿ ಜಲಾನಯನದ ಪ್ರಮುಖ ಅಣೆಕಟ್ಟು ಗಳಲ್ಲಿ ಸರಾಸರಿ ಶೇ.62ರಷ್ಟು ಮಾತ್ರ ನೀರಿನ ಲಭ್ಯತೆ ಇದೆ
- ಹಾರಂಗಿ ಶೇ.73, ಹೇಮಾವತಿ ಶೇ.55, ಕೆಆರ್‌ಎಸ್ ಶೇ.54, ಕಬಿನಿಯಲ್ಲಿ ಶೇ.96ರಷ್ಟು ನೀರಿನ ಪ್ರಮಾಣ

ಗೃಹ ಕಚೇರಿ ಕೃಷ್ಣದಲ್ಲಿ ನಡೆದ ತುರ್ತು ಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ನೀರಾವರಿ ಇಲಾಖೆ ಹಿರಿಯ ಧಿಕಾರಿಗಳೊಂದಿಗೆ ಚರ್ಚಿಸಿದ ಬಳಿಕ ಈ ತೀರ್ಮಾನಕ್ಕೆ ಬರಲಾಗಿದೆ. ಸರ್ವಪಕ್ಷ ಸಭೆಯನ್ನು ಕರೆಯುವ ಬಗ್ಗೆ ಸಭೆಯ ಬಳಿಕ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಈ ಬಾರಿ ವಾಡಿಕೆ ಮಳೆಯಾಗುವುದೆಂಬ ಮುನ್ಸೂಚನೆಯಿದ್ದರೂ ಶೇ.28ರಷ್ಟು ಒಳಹರಿವಿನ ಕೊರತೆ ಇದೆ. ಇದನ್ನು ಸಮಿತಿ ಮುಂದೆ ಸ್ಪಷ್ಟವಾಗಿ ಹೇಳಿದ್ದೆವು. ಇದರೊಂದಿಗೆ ಜುಲೈ ಅಂತ್ಯದವರೆಗೆ ಯಾವುದೇ ತೀರ್ಮಾನ ಮಾಡದಂತೆ ಮನವಿ ಮಾಡಿದ್ದೆವು. ಆದರೂ ಜುಲೈ 12 ರಿಂದ ಪ್ರತಿದಿನ ಒಂದು ಟಿಎಂಸಿ ನೀರು ಬಿಡುಗಡೆ ಮಾಡುವಂತೆ ತಿಳಿಸಿದ್ದಾರೆ.

→ 4

ನೀರಿನ ಕೊರತೆ ಇದೆ

ಸಭೆಯ ಬಳಿಕ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಾವೇರಿ ಜಲಾನಯನದ ಪ್ರಮುಖ ಅಣೆಕಟ್ಟುಗಳಲ್ಲಿ ಸರಾಸರಿ ಶೇ.62ರಷ್ಟು ಮಾತ್ರ ನೀರಿನ ಲಭ್ಯತೆ ಇದೆ. ಸುಮಾರು 19 ಟಿಎಂಸಿಯಷ್ಟು ನೀರಿನ ಕೊರತೆ ಅಂದರೆ ಶೇ.28ರಷ್ಟು ನೀರಿನ ಕೊರತೆ ಕಂಡುಬಂದಿದೆ. ಹಾರಂಗಿ ಶೇ.73, ಹೇಮಾವತಿ ಶೇ.55, ಕೆಆರ್‌ಎಸ್ ಶೇ.54, ಕಬಿನಿಯಲ್ಲಿ ಶೇ.96ರಷ್ಟು ನೀರಿನ ಪ್ರಮಾಣವಿದೆ. ಕಳೆದ ವರ್ಷ ಸಾಕಷ್ಟು ಕೊರತೆ ಉಂಟಾಗಿತ್ತು. ನಾಲ್ಕು ವರ್ಷಗಳ ಹಿಂದೆ ಸಮೃದ್ಧವಾಗಿ ಮಳೆಯಾದ ಕಾರಣ ಕೊರತೆ ಕಂಡು ಬಂದಿರಲಿಲ್ಲ. ಈಗಾಗಲೇ ಕಬಿನಿ ಶೇ.96ರಷ್ಟು ತುಂಬಿದ್ದು ಅಣೆಕಟ್ಟಿನ ಸುರಕ್ಷತೆ ದೃಷ್ಟಿಯಿಂದ ಒಳಹರಿವಿನ ಪ್ರಮಾಣದಷ್ಟೇ ನೀರನ್ನು ಹೊರಗೆ ಬಿಡಲಾಗುತ್ತಿದೆ ಎಂದರು.

ಸಾವು-ನೋವು ಅನುಭವಿಸಿದ ಲಕ್ಷಾಂತರ ಜನರ ಹೋರಾಟ, ತ್ಯಾಗ ಸ್ಮರಣೆ

ಜೂನ್ 25 ಸಂವಿಧಾನ ಹತ್ಯಾ ದಿವಸ

ದೆಹಲಿ: ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು 1975ರಲ್ಲಿ ತುರ್ತು ಪರಿಸ್ಥಿತಿ ಘೋಷಿಸಿದ್ದ ಜೂನ್ 25 ಅನ್ನು 'ಸಂವಿಧಾನ ಹತ್ಯಾ ದಿವಸ' ಎಂದು ಆಚರಿಸಲು ಕೇಂದ್ರ ಸರಕಾರ ನಿರ್ಧರಿಸಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.ಈ ದಿನದಂದು (ಜೂನ್ 25) ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಅಮಾನವೀಯ ನೋವುಗಳನ್ನು ಸಹಿಸಿಕೊಂಡವರ ಅಪಾರ ಕೊಡುಗೆಯನ್ನು ಸ್ಮರಿಸಲಾಗುತ್ತದೆ ಎಂದು ತಿಳಿಸಿದ್ದಾರೆ. ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರು ಸರ್ವಾಧಿಕಾರಿ ಮನಸ್ಥಿತಿಯ ನಿರ್ಲಜ್ಜ ಪ್ರದರ್ಶನದಿಂದಾಗಿ ತುರ್ತು ಪರಿಸ್ಥಿತಿಯನ್ನು ಹೇರುವ ಮೂಲಕ ಪ್ರಜಾಪ್ರಭುತ್ವದ ಆತ್ಮ ವನ್ನು ಕತ್ತು ಹಿಸುಕಿದ್ದರು. ಆಗ ಲಕ್ಷಾಂತರ ಜನರನ್ನು ತಮ್ಮದಲ್ಲದ ತಪ್ಪಿಗೆ ಜೈಲಿಗೆ ಹಾಕಲಾಗಿತ್ತು. ಜತೆಗೆ, ಮಾಧ್ಯಮಗಳ ಧ್ವನಿಯನ್ನು ಅಡಗಿಸಲಾಗಿತ್ತು ಎಂದು ಶಾ ತಿಳಿಸಿದ್ದಾರೆ.

ಕರಾಳ ಅಧ್ಯಾಯ

ಚುನಾವಣಾ ಪ್ರಚಾರಕ್ಕಾಗಿ ಸರಕಾರಿ ಯಂತ್ರಗಳನ್ನು ದುರುಪಯೋಗಪಡಿಸಿಕೊಂಡ ಆರೋಪದಲ್ಲಿ ಇಂದಿರಾ ಗಾಂಧಿ ಅವರನ್ನು ಲೋಕಸಭೆ ಸ್ಥಾನದಿಂದ ಪದಚ್ಯುತಗೊಳಿ ಸುವ ಅಲಹಾಬಾದ್ ಹೈಕೋರ್ಟ್ ತೀರ್ಪಿನ ವಿರುದ್ಧ ಕುಪಿತಗೊಂಡಿದ್ದ ಪ್ರಧಾನಿ ಇಂದಿರಾ ಗಾಂಧಿ ಅವರು 1975ರ ಜೂನ್ 25ರಂದು ತುರ್ತು ಪರಿಸ್ಥಿತಿ ಘೋಷಿಸಿ ದ್ದರು. 21 ತಿಂಗಳು ತುರ್ತು ಪರಿಸ್ಥಿತಿ ಜಾರಿಯಲ್ಲಿತ್ತು. ಇದೇ ವೇಳೆ ಲಕ್ಷಾಂತರ ಜನರನ್ನು ಜೈಲಿಗೆ ಕಳುಹಿಸಲಾ ಗಿತ್ತು. ಮಾಧ್ಯಮ ಸಂಸ್ಥೆಗಳನ್ನು ಮುಚ್ಚಲಾಗಿತ್ತು. ತಮ್ಮ ವಿರುದ್ಧ ವರದಿ ಪ್ರಕಟಿಸುವ ಪತ್ರಿಕೆಗಳನ್ನು ಮುಚ್ಚಲು ಇಂದಿರಾ ಗಾಂಧಿ ಆದೇಶಿಸಿದ್ದರು. ಜನರ ಹಕ್ಕುಗಳನ್ನು ಕಸಿಯಲಾಗಿತ್ತು. ಹಾಗಾಗಿ, ತುರ್ತು ಪರಿಸ್ಥಿತಿಯು ದೇಶದ ಪ್ರಜಾಪ್ರಭುತ್ವದ ಕರಾಳ ಅಧ್ಯಾಯ ಎನಿಸಿದೆ.

ನೇಪಾಳ: 'ಪ್ರಚಂಡ' ಸರಕಾರ ಪತನ

ಕಠ್ಮಂಡು: ನೇಪಾಳದ ಪ್ರಧಾನಿ ಪುಷ್ಪ ಕಮಲ್ ದಹಾಲ್ (ಪ್ರಚಂಡ) ಸಂಸತ್ತಿನಲ್ಲಿ ವಿಶ್ವಾಸ ಮತ ಕಳೆದುಕೊಂಡಿದ್ದು, ಅಧಿಕಾರಕ್ಕೆ ಬಂದ 19 ತಿಂಗಳಿಗೇ ಸರಕಾರ ಪತನವಾಗಿದೆ. ಮಾಜಿ ಪ್ರಧಾನಿ ಕೆ.ಪಿ.ಶರ್ಮಾ ಓಲಿ ನೇತೃತ್ವದ ಸಿಪಿಎನ್-ಯುಎಂಎಲ್ ಪಕ್ಷ ಸರಕಾರಕ್ಕೆ ನೀಡಿದ್ದ ಬೆಂಬಲವನ್ನು ಹಠಾತ್ ಹಿಂತೆಗೆದುಕೊಂಡಿದ್ದು, 'ಪ್ರಚಂಡ' ವಿಶ್ವಾಸಮತ ಸಾಬೀತುಪಡಿಸುವಲ್ಲಿ ವಿಫಲರಾಗಿದ್ದಾರೆ.

ಕೊಚ್ಚಿಹೋದ 2 ಬಸ್: 65 ಜನ ನಾಪತ್ತೆ

ಕಠ್ಮಂಡು: ನೇಪಾಳದಲ್ಲಿ ಮುಂಗಾರು ಅಬ್ಬರಿಸುತ್ತಿದ್ದು, ಇದರಿಂದ ಉಂಟಾದ ಗುಡ್ಡ ಕುಸಿತದಲ್ಲಿ ಪ್ರಯಾಣಿಕರಿದ್ದ ಎರಡು ಬಸ್ಸುಗಳು ಕೊಚ್ಚಿಹೋಗಿವೆ. ಇದರಲ್ಲಿದ್ದ 62 ಜನ ನಾಪತ್ತೆಯಾಗಿದ್ದಾರೆ. ಚಿತ್ವಾನ್ ಜಿಲ್ಲೆಯಲ್ಲಿ ಈ ಘಟನೆ ಸಂಭವಿಸಿದ್ದು, ನಾಪತ್ತೆಯಾದವರ ಶೋಧ ಕಾರ್ಯದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಭಾಗಿಯಾಗಿದ್ದಾರೆ. ಬಸ್‌ಗಳು ನದಿಯಲ್ಲಿ ಮುಳುಗಿರುವುದರಿಂದ ಶೋಧ ಕಾರ್ಯಕ್ಕೆ ಅಡ್ಡಿಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕನ್ನಡದ ಸ್ವರ ರಾಣಿಗೆ ಕಣ್ಣೀರ ವಿದಾಯ

ಬೆಂಗಳೂರು: ಶ್ವಾಸಕೋಶದ ಕ್ಯಾನ್ಸರ್‌ನಿಂದ ನಿಧನರಾದ ನಿರೂಪಕಿ, ನಟಿ ಅಪರ್ಣಾ ಅವರ ಅಂತ್ಯಕ್ರಿಯೆ ಶುಕ್ರವಾರ ಬನಶಂಕರಿ ಚಿತಾಗಾರದಲ್ಲಿ ನಡೆಯಿತು. ಅಪರ್ಣಾ ಅವರ ಪಾರ್ಥಿವ ಶರೀರವನ್ನು ಬನಶಂಕರಿಯಲ್ಲಿರುವ ಮನೆಯಲ್ಲಿ ಅಂತಿಮ ದರ್ಶನಕ್ಕೆ ಇಡಲಾಗಿತ್ತು. ನಟರಾದ ಶ್ರೀನಾಥ್, ಸೃಜನ್ ಲೋಕೇಶ್ ಸೇರಿದಂತೆ ಚಿತ್ರರಂಗದ ಅನೇಕರು ಅಂತಿಮ ದರ್ಶನ ಪಡೆದರು. ಸರಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಬಿಜೆಪಿ ನಾಯಕರರನ್ನು ಟೋಲ್‌ನಲ್ಲೇ ತಡೆದ ಪೊಲೀಸರು

ಮೈಸೂರು ಚಲೋಗೆ ತಡೆ

ಬೆಂಗಳೂರು: ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ, ಮೈಸೂರು ಚಲೋ ಮಾಡಲು ಮುಂದಾದ ಬಿಜೆಪಿ ನಾಯಕರನ್ನು ಬೆಂಗಳೂರಿನಲ್ಲಿಯೇ ಪೊಲೀಸರು ಬಂಧಿಸಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಬೆಂಗಳೂರಿನಿಂದ ಮೈಸೂರಿನವರೆಗೆ ಬೈಕ್ ಹಾಗೂ ಕಾರು ರ್‍ಯಾಲಿಗೆ ಬಿಜೆಪಿ ನಾಯಕರು ಮುಂದಾಗಿದ್ದರು. ಆದರೆ ನೈಸ್ ಜಂಕ್ಷನ್ ಬಳಿಯೇ ವಿಜಯೇಂದ್ರ ಸೇರಿದಂತೆ ಹಲವು ನಾಯಕರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈ ನಡುವೆ ರಸ್ತೆ ತಡೆಗೆ ಬಿಜೆಪಿ ನಾಯಕರು ಮುಂದಾಗಿ ದ್ದರಿಂದ, ಪೊಲೀಸರು ಹಾಗೂ ಕಾರ್ಯಕರ್ತರ ನಡುವೆ ವಾಕ್ಸಮರ ನಡೆಯಿತು.

ನಿಗದಿಯಂತೆ ಬೆಂಗಳೂರು-ಮೈಸೂರು ರಸ್ತೆಯ ನೈಸ್ ರಸ್ತೆ ಜಂಕ್ಷನ್‌ನಿಂದ ರ್‍ಯಾಲಿ ಆರಂಭವಾಗಬೇಕಿತ್ತು. ವಿಜ ಯೇಂದ್ರ, ಸೇರಿದಂತೆ ಹಲವು ನಾಯಕರು ಕಾರುಗಳಲ್ಲಿ ಮೈಸೂರಿಗೆ ತೆರಳಲು ನಿರ್ಧರಿಸಿದ್ದರು.

- ಮುಡಾ ಪ್ರತಿಭಟನೆಯಲ್ಲಿ ಭಾಗವಹಿಸಲು ಅವಕಾಶ ನೀಡದ ಪೊಲೀಸರು
- ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹ

ನೈಸ್ ಜಂಕ್ಷನ್ ಬಳಿಯೇ ವಿಜಯೇಂದ್ರ ಸೇರಿದಂತೆ ಹಲವು ನಾಯಕರನ್ನು ವಶಕ್ಕೆ ಪಡೆದ ಪೊಲೀಸರು.

ದೇವರಾಜ ಅರಸು ಟರ್ಮಿನಲ್ ಬಹುಕೋಟಿ ಹಗರಣ

ಡಿ.ಎಸ್.ವೀರಯ್ಯ ಬಂಧನ

ಬೆಂಗಳೂರು: ದೇವರಾಜ ಅರಸು ಟರ್ಮಿನಲ್ ಬಹುಕೋಟಿ ಹಗರಣಕ್ಕೆ ಸಂಬಂಧಿಸಿ ಬಿಜೆಪಿ ಮಾಜಿ ಎಂಎಲ್‌ಸಿ ಡಿ.ಎಸ್. ವೀರಯ್ಯ ಅವರನ್ನು ಬಂಧಿಸಲಾಗಿದೆ. 2021ರಿಂದ 2023ರವರೆಗೆ ಡಿ.ಎಸ್.ವೀರಯ್ಯ ಅವರು ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್ ನಿಗಮದ ಅಧ್ಯಕ್ಷರಾಗಿದ್ದಾಗ ನಡೆದಿದ್ದ ಸುಮಾರು 47 ಕೋಟಿ ರು. ಅಕ್ರಮದ ಬಗ್ಗೆ ಹಾಲಿ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್.ಶಿವಪ್ರಸಾದ್ ವಿಲ್ಸನ್ ಗಾರ್ಡನ್ ಠಾಣೆಗೆ ದೂರು ನೀಡಿದ್ದರು. ಈ ಪ್ರಕರಣವನ್ನು ರಾಜ್ಯ ಸರಕಾರ ಸಿಐಡಿ ತನಿಖೆಗೆ ವಹಿಸಿತ್ತು. ಪ್ರಕರಣದ ಬಗ್ಗೆ ತನಿಖೆ ನಡೆಸಿದ್ದ ಸಿಐಡಿ, 600ಕ್ಕೂ ಹೆಚ್ಚು ದಾಖಲೆಗಳನ್ನು ವಶಕ್ಕೆ ಪಡೆದಿತ್ತು. ಇದೀಗ ಮಾಜಿ ಎಂಎಲ್‌ಸಿ ವೀರಯ್ಯ ಅವರನ್ನು ಬಂಧಿಸಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ವಾಲ್ಮೀಕಿ ನಿಗಮ ಹಗರಣ: ದುಡ್ಡು ತಿಂದ ತಿಮಿಂಗಿಲಗಳು



ಒಂದೆಡೆ ಎಸ್‌ಐಟಿ, ಇನ್ನೊಂದೆಡೆ ಇಡಿ, ಸಿಬಿಐ
ಏಕಕಾಲಕ್ಕೆ ಮೂರು ಸಂಸ್ಥೆಗಳಿಂದ ವಿಚಾರಣೆ

ವಾಲ್ಮೀಕಿ ನಿಗಮ: ಒಂದೇ ಪ್ರಕರಣ ಪ್ರತ್ಯೇಕ ಸಂಸ್ಥೆಯಿಂದ ತನಿಖೆ!

ಬೆಂಗಳೂರು: ರಾಷ್ಟ್ರಮಟ್ಟದಲ್ಲಿ ಭಾರಿ ಸದ್ದು ಮಾಡಿರುವ ವಾಲ್ಮೀಕಿ ಅಭಿವೃದ್ಧಿ ಪ್ರಾಧಿಕಾರ ಹಗರಣದಲ್ಲಿ ಸದ್ಯ ಮಾಜಿ ಸಚಿವ ನಾಗೇಂದ್ರ ಇ.ಡಿ. ಬಂಧನಕ್ಕೆ ಒಳಗಾಗಿದ್ದಾರೆ. ಇನ್ನೊಂದೆಡೆ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್‌ಗೆ ಎಸ್‌ಐಟಿ ಡ್ರಿಲ್ ಆರಂಭಿಸಿದೆ. ಮತ್ತೊಂದೆಡೆ ಸಿಬಿಐ ಕೂಡ ಪ್ರತ್ಯೇಕ ತನಿಖೆಯಲ್ಲಿ ತೊಡಗಿದೆ!

ಈ ರೀತಿ ಒಂದೇ ಪ್ರಕರಣದಲ್ಲಿ ಮೂರು ಪ್ರತ್ಯೇಕ ತಂಡಗಳಿಂದ ತನಿಖೆ ನಡೆಯುತ್ತಿರುವುದು ಇದೀಗ ಇಡೀ ಪ್ರಕರಣದಲ್ಲಿ ಗೊಂದಲಕ್ಕೆ ಕಾರಣವಾಗಿದೆ. ಮುಂದಿನ ದಿನದಲ್ಲಿ ತನಿಖಾ ತಂಡಗಳ ನಡುವೆಯೇ ಇನ್ನಷ್ಟು ಗೊಂದಲ ಸೃಷ್ಟಿಯಾಗುವ ಸಾಧ್ಯತೆಯಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಹಗರಣ ಬೆಳಕಿಗೆ ಬರುತ್ತಿದ್ದಂತೆ ರಾಜ್ಯ ಸರಕಾರ ವಿಶೇಷ ತನಿಖಾ ತಂಡವನ್ನು ರಚಿಸಿ, ತನಿಖೆಗೆ ಆದೇಶಿಸಿದೆ. ಇನ್ನೊಂದೆಡೆ ಯೂನಿಯನ್ ಬ್ಯಾಂಕ್ ಅಧಿಕಾರಿಗಳು ಸಿಬಿಐ ಕದ ತಟ್ಟಿದ್ದಾರೆ.

→ 4

ಚಾರ್ಜ್‌ಶೀಟ್ ಸಲ್ಲಿಕೆ ವೇಳೆ ಸಮಸ್ಯೆ

ಕಾನೂನು ತಜ್ಞರ ಪ್ರಕಾರ ಒಂದೇ ಪ್ರಕರಣದಲ್ಲಿ ಮೂರು ಪ್ರತ್ಯೇಕ ಚಾರ್ಜ್‌ಶೀಟ್ ಅನ್ನು ಸಲ್ಲಿಸಲು ಸಾಧ್ಯವಿಲ್ಲ. ಇದನ್ನು ಕೋರ್ಟ್ ಒಪ್ಪುವುದಿಲ್ಲ. ಆದ್ದರಿಂದ ತನಿಖೆಯ ವೇಳೆ ಪ್ರತ್ಯೇಕವಾಗಿ ತನಿಖೆ ನಡೆಸಿದರೂ, ಅಂತಿಮವಾಗಿ ಯಾವುದಾದರೂ ಒಂದು ಸಂಸ್ಥೆ ಪ್ರಕರಣವನ್ನು ಹಸ್ತಾಂತರ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಇಡಿ ಹಾಗೂ ಸಿಬಿಐ ಹೊಂದಾಣಿಕೆ ಮಾಡಿಕೊಂಡು ಒಬ್ಬರು ಚಾರ್ಜ್‌ಶೀಟ್ ಸಲ್ಲಿಸುತ್ತಾರೆ. ಆದರೆ ಎಸ್‌ಐಟಿ ಹಾಗೂ ಕೇಂದ್ರ ತನಿಖಾ ಸಂಸ್ಥೆಗಳು ಯಾವ ರೀತಿ ನಿಭಾಯಿಸಲಿದೆ ಎನ್ನುವುದು ಹಲವರ ಪ್ರಶ್ನೆಯಾಗಿದೆ.

ಸತ್ಯಶೋಧನಾ ಸಮಿತಿ ಮುಂದೆ ಸಚಿವರ ವಿರುದ್ಧ ಆರೋಪ
ಕೋಲಾರ ಸೋಲಿಗೆ ಮುನಿಯಪ್ಪ ವಿರುದ್ಧ ರಮೇಶ್ ಕುಮಾರ್ ಬಣ

ವರಿಷ್ಠರ ಮುಂದೆ ಎರಡನೇ ದಿನವೂ ದೂರಿನ ಸುರಿಮಳೆ

ಬೆಂಗಳೂರು: ಲೋಕಸಭಾ ಚುನಾವಣೆಯ ಹಿನ್ನಡೆಗೆ ಕಾರಣವೇನೆಂದು ಅರಿಯಲು ಎಐಸಿಸಿ ಕಳುಹಿಸಿರುವ ಸತ್ಯಶೋಧನಾ ಸಮಿತಿ ಮುಂದೆ ಮತ್ತೆ ದೂರಿನ ಸುರಿಮಳೆಗಳು ಕಾಣಿಸಿಕೊಂಡಿವೆ.

ಗುರುವಾರ ಬೆಂಗಳೂರಿಗೆ ಆಗಮಿಸಿರುವ ಮಧುಸೂದನ್ ಮಿಸ್ತ್ರಿ ನೇತೃತ್ವದ ಸತ್ಯಶೋಧನಾ ಸಮಿತಿ ಮುಂದೆ ಶುಕ್ರವಾರವೂ ಪರಾಜಿತ ಅಭ್ಯರ್ಥಿ ಹಾಗೂ ವಿವಿಧ ನಾಯಕರು ತಮ್ಮ ಕ್ಷೇತ್ರಗಳಲ್ಲಿನ ಸೋಲಿಗೆ ಕಾರಣವೇನೆಂದು ನಾಯಕರ ಮುಂದೆ ವರದಿ ನೀಡಿದ್ದಾರೆ. ಶುಕ್ರವಾರದ ಸಭೆಯಲ್ಲಿ ಪ್ರಮುಖವಾಗಿ ಸಚಿವ ಮುನಿಯಪ್ಪ ಬಣ ಹಾಗೂ ರಮೇಶ್‌ಕುಮಾರ್ ಬಣ ಆರೋಪ-ಪ್ರತ್ಯಾರೋಪ ಮಾಡಿರುವುದು ಬಹಿರಂಗವಾಗಿದೆ.

ಸಭೆಯಲ್ಲಿ ಕೋಲಾರ ಸೋಲಿನ ವಿವರಣೆಯನ್ನು ರಮೇಶ್ ಕುಮಾರ್ ಬಣ ಹಾಗೂ ಕೆ ಎಚ್ ಮುನಿಯಪ್ಪ ಬಣ ನೀಡಿದೆ. ಎರಡು ಬಣಗಳು ತಮ್ಮ ತಮ್ಮ ವಾದವನ್ನು ಮಂಡಿಸಿದೆ. ಸಚಿವ ಮುನಿಯಪ್ಪ ಲೋಕಸಭೆ ಚುನಾವಣಾ ಪ್ರಚಾರ ಕಾರ್ಯದಿಂದ ದೂರ ಉಳಿದಿದ್ದರು. ದಲಿತ ಎಡಗೈ ಸಮುದಾಯದ ಮತಗಳು ಬಾರದಂತೆ ನೋಡಿಕೊಂಡಿದ್ದಾರೆ ಎಂದು ಆರೋಪಿಸಿದ್ದಾರೆ. ಬಲಗೈ ಸಮುದಾಯ ವಿರೋಧದ ನಡುವೆಯೂ ಮತಗಳು ಬಂದಿವೆ.

→ 4

ಮುನಿಯಪ್ಪ ವಾದ ಏನು?

ಸಚಿವ ಕೆಎಚ್ ಮುನಿಯಪ್ಪ ಇದೇ ಸಂದರ್ಭದಲ್ಲಿ ತಮ್ಮದೇ ಆದ ವಾದ ಮಂಡಿಸಿದ್ದಾರೆ. ಅಭ್ಯರ್ಥಿ ಆಯ್ಕೆಯಲ್ಲಿ ಸಾಕಷ್ಟು ಗೊಂದಲ ಆಯಿತು. ಕ್ಷೇತ್ರಕ್ಕೆ ಅಭ್ಯರ್ಥಿ ಹೊಸಬರು , ರೀಚ್ ಆಗಲು ಆಗಿಲ್ಲ. ನಾನು ಪಕ್ಷದ ಪರವಾಗಿ ಕೆಲಸ ಮಾಡಿದ್ದೇನೆ. ನಮ್ಮ ಕುಟುಂಬದವರಿಗೆ ಕೊಟ್ಟಿದ್ದರೆ ಅನುಕೂಲ ಆಗುತ್ತಿತ್ತು ನಿಜ. ಆದರೆ ನಾನು ಪಕ್ಷದ ಗೆಲುವಿಗೆ ಪ್ರಾಮಾಣಿಕ ಕೆಲಸ ಮಾಡಿದ್ದೇನೆ ಎಂದು ಸಮರ್ಥಿಸಿಕೊಂಡಿದ್ದಾರೆ.

ಸುಪ್ರೀಂ ಮಧ್ಯಂತರ ಜಾಮೀನು
ಸಿಬಿಐ ಪ್ರಕರಣದಲ್ಲಿ 25ರವರೆಗೂ ನ್ಯಾಯಾಂಗ ಬಂಧನ

ಕೇಜ್ರಿಗೆ ಜಾಮೀನು ಸಿಕ್ಕರೂ ಬಿಡುಗಡೆ ಇಲ್ಲ

ದೆಹಲಿ: ಅಬಕಾರಿ ನೀತಿ ಹಗರಣದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಮೊದಲಿಗೆ ಇ.ಡಿಯಿಂದ ಬಂಧನಕ್ಕೊಳಗಾಗಿ ಸದ್ಯ ತಿಹಾರ್ ಜೈಲಿನಲ್ಲಿರುವ ದೆಹಲಿ ಸಿಎಂ ಅರವಿಂದ್ ಕೇಜ್ರಿವಾಲ್‌ಗೆ ಸುಪ್ರೀಂಕೋರ್ಟ್ ಶುಕ್ರವಾರ ಮಧ್ಯಂತರ ಜಾಮೀನು ನೀಡಿದೆ. ಹಾಗಿದ್ದೂ ಕೇಜ್ರಿವಾಲ್‌ಗೆ ಜೈಲಿನಿಂದ ಬಿಡುಗಡೆ ಭಾಗ್ಯ ಇಲ್ಲವಾಗಿದೆ. ಎರಡು ದಿನಗಳ ಹಿಂದಷ್ಟೇ ಭ್ರಷ್ಟಾಚಾರ ಪ್ರಕರಣದಡಿ ಸಿಬಿಐ ಬಂಧಿಸಿದ್ದು, ಪ್ರಕರಣದ ವಿಚಾರಣೆ ನಡೆಸುತ್ತಿರುವ ದೆಹಲಿಯ ರೋಸ್ ಅವಿನ್ಯೂ ಕೋರ್ಟ್, ಆರೋಪಿಯ ನ್ಯಾಯಾಂಗ ಬಂಧನ ಅವಧಿಯನ್ನು ಜು.25ರವರೆಗೂ ವಿಸ್ತರಿಸಿ ಶುಕ್ರವಾರ ಆದೇಶ ಹೊರಡಿಸಿದೆ.

ಸಮಾಚಾರ ಸಣ್ಣದಲ್ಲ

ಮೈಸೂರು ಚಲೋಗೆ ತಡೆ

ಮೊದಲಪುಟದಿಂದ

ನೈಸ್ ರಸ್ತೆಯ ಜಂಕ್ಷನ್‌ನಲ್ಲಿ ನೂರಾರು ಬಿಜೆಪಿ ಕಾರ್ಯಕರ್ತರು ಜಮಾವಣೆಗೊಂಡಿದ್ದರು. ಹಾಗೆಯೇ ರಸ್ತೆತಡೆಯನ್ನು ಸಹ ನಡೆಸಿದ್ದರು. ಆಗ ಪೊಲೀಸರು ವಿಜ ಯೇಂದ್ರ, ಸೇರಿದಂತೆ ಕಾರ್ಯಕರ್ತರು ಹಾಗೂ ಮುಖಂಡರನ್ನು ವಶಕ್ಕೆ ಪಡೆದು ಬಸ್‌ಗೆ ಹತ್ತಿಸಿ ಕರೆದೊಯ್ದು, ಬಿಜೆಪಿ ನಾಯಕರ ಮೈಸೂರು ಚಲೋವನ್ನು ತಡೆದರು.

ಒಂದೇ ಪ್ರಕರಣ; ಪ್ರತ್ಯೇಕ ಸಂಸ್ಥೆ ತನಿಖೆ

ಮೊದಲಪುಟದಿಂದ

ಇದೀಗ ಸಿಬಿಐ–ಇಡಿ ಕೇಂದ್ರ ಸರಕಾರದ ಸುಪರ್ದಿಯಲ್ಲಿ ಬರುವುದರಿಂದ, ಈ ಇಬ್ಬರು ಪ್ರತ್ಯೇಕ ತನಿಖೆ ಮಾಡಿದರೂ, ಅಂತಿಮವಾಗಿ ಒಬ್ಬರಿಗೊಬ್ಬರು ಪ್ರಕರಣವನ್ನು ವರ್ಗಾವಣೆ ಮಾಡಿಕೊಳ್ಳುವ ಸಾಧ್ಯತೆಯಿರುತ್ತದೆ. ಆದರೆ ಎಸ್‌ಐಟಿ ಹಾಗೂ ಕೇಂದ್ರೀಯ ಸಂಸ್ಥೆಗಳ ತನಿಖೆಯೇ ಇದೀಗ ಬಹುದೊಡ್ಡ ಗೊಂದಲಕ್ಕೆ ವೇದಿಕೆಯಾಗಲಿದೆ ಎನ್ನಲಾಗಿದೆ.

ಎಸ್‌ಐಟಿ, ಇಡಿ ಇಬ್ಬರಿಂದಲೂ ನೋಟಿಸ್: ಕಳೆದ ಮೂರು ದಿನಗಳ ಪ್ರಕರಣದ ವಿಚಾರಣೆಯನ್ನು ಗಮನಿಸಿದರೆ, ಗೊಂದಲದ ಬಗ್ಗೆ ಸ್ಪಷ್ಟ ಚಿತ್ರಣ ಸಿಗುತ್ತದೆ. ಒಂದೆಡೆ ಇಡಿ ಅಧಿಕಾರಿಗಳು ನಾಗೇಂದ್ರ ಹಾಗೂ ದದ್ದಲ್ ಅವರನ್ನು ವಿಚಾರಣೆಗೆ ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಇನ್ನೊಂದೆಡೆ ಎಸ್‌ಐಟಿಯಿಂದಲೂ ವಿಚಾರಣೆಗೆ ಹಾಜರಾಗಲು ನೋಟಿಸ್ ನೀಡಲಾಗಿತ್ತು. ಈ ನೋಟಿಸ್‌ಗೆ ಉತ್ತರಿಸದಿದ್ದರೆ ಅಥವಾ ವಿಚಾರಣೆಗೆ ಹಾಜರಾಗದಿದ್ದರೆ, ಕಾನೂನಾತ್ಮಕವಾಗಿಯೂ ಸಮಸ್ಯೆಯಾಗುತ್ತದೆ. ಇದರಿಂದ ವಿಚಾರಣೆಗೆ ಒಳಗಾಗುವವರಿಗೆ ಗೊಂದಲ ಹೆಚ್ಚಾಗುವ ಸಾಧ್ಯತೆಯಿದೆ.

ಮುಡಾ ಪ್ರಕರಣ ಸಿಬಿಐಗೆ ವಹಿಸಲು ಬಿಜೆಪಿ ಒತ್ತಾಯ | ಕಮಲ ನಾಯಕರ ವಿರುದ್ಧ ಕಾಂಗ್ರೆಸಿಗರ ವಾಕ್ಸಮರ

ಸಿಎಂ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯ ಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ, ಮೈಸೂರು ಚಲೋ ಮಾಡಲು ಮುಂದಾದ ಬಿಜೆಪಿ ನಾಯಕರನ್ನು ಬೆಂಗಳೂರಿನಲ್ಲಿಯೇ ಪೊಲೀಸರು ಬಂಧಿಸಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಬೆಂಗಳೂರಿನಿಂದ ಮೈಸೂರಿನವರೆಗೆ ಬೈಕ್ ಹಾಗೂ ಕಾರು ರ‍್ಯಾಲಿಗೆ ಬಿಜೆಪಿ ನಾಯಕರು ಮುಂದಾಗಿದ್ದರು. ಆದರೆ ನೈಸ್ ಜಂಕ್ಷನ್ ಬಳಿಯೇ ವಿಜಯೇಂದ್ರ ಸೇರಿದಂತೆ ಹಲವು ನಾಯಕರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈ ನಡುವೆ ರಸ್ತೆ ತಡೆಗೆ ಬಿಜೆಪಿ ನಾಯಕರು ಮುಂದಾಗಿದ್ದರಿಂದ, ಪೊಲೀಸರು ಹಾಗೂ ಕಾರ್ಯಕರ್ತರ ನಡುವೆ ವಾಕ್ಸಮರ ನಡೆಯಿತು.

ನಿಗದಿಯಂತೆ ಬೆಂಗಳೂರು–ಮೈಸೂರು ರಸ್ತೆಯ ನೈಸ್ ರಸ್ತೆ ಜಂಕ್ಷನ್‌ನಿಂದ ರ‍್ಯಾಲಿ ಆರಂಭವಾ ಗಬೇಕಿತ್ತು. ವಿಜಯೇಂದ್ರ, ಸೇರಿದಂತೆ ಹಲವು ನಾಯಕರು ಕಾರುಗಳಲ್ಲಿ ಮೈಸೂರಿಗೆ ತೆರಳಲು ನಿರ್ಧರಿಸಿದ್ದರು. ನೈಸ್ ರಸ್ತೆಯ ಜಂಕ್ಷನ್‌ನಲ್ಲಿ ನೂರಾರು ಬಿಜೆಪಿ ಕಾರ್ಯಕರ್ತರು ಜಮಾವಣೆಗೊಂಡಿದ್ದರು. ಹಾಗೆಯೇ ರಸ್ತೆತಡೆಯನ್ನು ಸಹ ನಡೆಸಿದ್ದರು. ಆಗ ಪೊಲೀಸರು ವಿಜಯೇಂದ್ರ ಸೇರಿದಂತೆ ಕಾರ್ಯಕರ್ತರು ಹಾಗೂ ಮುಖಂಡರನ್ನು ವಶಕ್ಕೆ ಪಡೆದು ಬಸ್ಗೆ ಹತ್ತಿಸಿ ಕರೆದೊಯ್ದು, ಬಿಜೆಪಿ ನಾಯಕರ ಮೈಸೂರು ಚಲೋವನ್ನು ತಡೆದರು.

ವಿಜಯೇಂದ್ರ ಆಕ್ರೋಶ: ಮೈಸೂರು ಚಲೋಗೆ ಅವಕಾಶ ಕೊಡದ ರಾಜ್ಯ ಸರಕಾರದ ವಿರುದ್ಧ ಆಕ್ರೋಶ ಹೊರ ಹಾಕಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ನಮ್ಮ ಮೈಸೂರು ಚಲೋ ತಡೆಯಬೇಡಿ. ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರನ್ನು ಬಂಧಿಸುವ ಪ್ರಯತ್ನ ಖಂಡನೀಯ. ಬಂಧನದ ಮೂಲಕ ರಾಜ್ಯಾದ್ಯಂತ ಬೆಂಕಿ ಹಚ್ಚಲು ನೀವೆ ಕಾರಣರಾಗುತ್ತೀರಿ ಎಂದು ಎಚ್ಚರಿಕೆ ನೀಡಿದರು.

ಮುಡಾದಲ್ಲಿ ಸಾವಿರಾರು ಕೋಟಿ ಹಗರಣ ನಡೆದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಪತ್ನಿ ಸಹ ನಿವೇಶನ ಪಡೆದಿದ್ದಾರೆ. ಹಗರಣ ಬಯಲಾಗಿರುವುದರಿಂದ ಮುಖ್ಯಮಂತ್ರಿಗಳು ಆತಂಕಗೊಂಡಿದ್ದಾರೆ. ಕೂಡಲೇ ಮುಡಾ ಹಗರಣದ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿಗಳು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಮಾಜಿ ಸಚಿವ ಮುನಿರತ್ನ, ಶಾಸಕ ಕೃಷ್ಣಪ್ಪ, ಧೀರಜ್ ಮುನಿರಾಜು, ರಾಜ್ಯ ಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ, ರಾಜ್ಯ ಕಾರ್ಯದರ್ಶಿ ಗಳಾದ ರಮೇಶ್‌ಗೌಡ, ಶರಣು ತಲ್ಲಿಕೆರೆ, ಮುನಿರಾಜು, ಜಿಲ್ಲಾಧ್ಯಕ್ಷ ಹರೀಶ್ ಸಪ್ತಗಿರಿಗೌಡ ಸೇರಿದಂತೆ ಅನೇಕರಿದ್ದರು.

ಮುಡಾ ಹಗರಣದ ವಿರುದ್ಧ ಬಿಜೆಪಿ ಪ್ರತಿಭಟನೆ ವಿಚಾರವಾಗಿ ಕೇಳಿದಾಗ ವಿಧಾನಸಭಾ ಕಲಾಪ ಬರುತ್ತಿರುವ ಕಾರಣ ಬಿಜೆಪಿಯವರು ರಾಜಕಾರಣ ಮಾಡುತ್ತಿದ್ದಾರೆ. ಅವರು ಮಾಡಿರುವ ದರಿದ್ರವನ್ನು ಅವರೇ ಬಯಲು ಮಾಡುತ್ತಿದ್ದಾರೆ. ಇದಕ್ಕೆ ಸದನದಲ್ಲಿ ಏನು ಉತ್ತರ ಕೊಡಬೇಕೊ ಅದನ್ನು ಕೊಡುತ್ತೇವೆ.
–ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಪೋಕ್ಸೋ ಕೇಸ್ ಮುಚ್ಚಿಹಾಕಲು ಬಿಜೆಪಿ ಮುಡಾ ಮತ್ತು ವಾಲ್ಮೀಕಿ ಹಗರಣ ವಿಚಾರ ತೆಗೆದಿದ್ದಾರೆ. ಯಡಿಯೂರಪ್ಪ ಪೋಕ್ಸೋ ಕೇಸ್ ಮುಚ್ಚಿ ಹಾಕಲು ಇದೀಗ ಪ್ರತಿಭಟನೆ ಮಾಡುತ್ತಿದ್ದಾರೆ. ಬಿಜೆಪಿಯವರು ಯಡಿಯೂರಪ್ಪ ಹೆಸರು ಎತ್ತುತ್ತಿಲ್ಲ. ನಮ್ಮ ತನಿಖೆ ಆಗುವವರೆಗೂ ಕಾಯಬೇಕಿತ್ತು. ಬಿಜೆಪಿಯವರಿಗೆ ಬಹಳ ಆತಂಕಯಿದೆ. ಐಟಿ ಕರೆಸುವುದು, ಇಡಿ ಕರೆಸುವುದು, ಸಿಬಿಐ ಕರೆಸುವುದು ಮಾಡುತ್ತಿದ್ದಾರೆ.
–ಪ್ರಿಯಾಂಕ್ ಖರ್ಗೆ, ಸಚಿವ

ಗೂಡ್ಸ್ ಟೆಂಪೋದಲ್ಲಿ ಮೈಸೂರಿಗೆ ಹೋದ ಅಶೋಕ್

ಇನ್ನು ಮೈಸೂರು ಚಲೋದಲ್ಲಿ ಭಾಗವಹಿಸುವವರನ್ನು ಪೊಲೀಸರು ಬಂಧಿಸುತ್ತಾರೆ ಎನ್ನುವುದನ್ನು ಅರಿತ ಪ್ರತಿಪಕ್ಷ ನಾಯಕ ಅಶೋಕ್ ಹಾಗೂ ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ, ಪೊಲೀಸರ ಕಣ್ತಪ್ಪಿಸಿ ಗೂಡ್ಸ್ ಟೆಂಪೋದಲ್ಲಿ ಮೈಸೂರಿಗೆ ತೆರಳಿ ಮೈಸೂರಿನಲ್ಲಿ ಮುಡಾ ಮುಂದೆ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದರು. ಬೆಂಗಳೂರಿನಿಂದ ತೆರಳಬೇಕಿದ್ದ ತಂಡ ತೆರಳದಿದ್ದರೂ, ಮೈಸೂರು ಸ್ಥಳೀಯ ಕಾರ್ಯಕರ್ತರು ಹಾಗೂ ನಾಯಕರು ಪ್ರತಿಭಟನೆ ನಡೆಸಿದರು. ಈ ಪ್ರತಿಭಟನೆಯಲ್ಲಿ ಅಶೋಕ್, ಅಶ್ವತ್ಥನಾರಾಯಣ ಭಾಗಿಯಾದರು. ಪ್ರತಿಭಟನೆ ನಡೆಸಿದ ಎಲ್ಲರನ್ನು ಪೊಲೀಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು.

ನಾಗೇಂದ್ರ ಬಂಧನ

ಮೊದಲಪುಟದಿಂದ

ಶಾಸಕರಾದ ಬಿ.ನಾಗೇಂದ್ರ, ಹಾಗೂ ಬಸವನಗೌಡ ದದ್ದಲ್ ನಿವಾಸಗಳ ಜತೆಗೆ ಮೂವರು ಯೂನಿಯನ್ ಬ್ಯಾಂಕ್ ಸಿಬ್ಬಂದಿ ಮನೆ, ವಸಂತನಗರದಲ್ಲಿರುವ ವಾಲ್ಮೀಕಿ ನಿಗಮದ ಕಚೇರಿಯಲ್ಲೂ ಇ.ಡಿ ತಪಾಸಣೆ ನಡೆಸಿ ದಾಖಲೆಗಳನ್ನು ವಶಕ್ಕೆ ಪಡೆದಿದೆ. ರೇಡ್ ಮಾಡಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಅಕ್ರಮ ಹಣ ವರ್ಗಾವಣೆ ಆರೋಪದ ಹಿನ್ನೆಲೆಯಲ್ಲಿ ಇಡಿ ದಾಳಿ ನಡೆಸಿ ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆದಿದೆ. ಫಸ್ಟ್ ಫೈನಾನ್ಸ್ ಸಹಕಾರಿ ಬ್ಯಾಂಕ್ ಸತ್ಯನಾರಾಯಣ್‌ನಿಂದ ವಾಲ್ಮೀಕಿ ನಿಗಮದ ಎಂ.ಡಿ.ಪದ್ಮನಾಭ್ ಹಣ ತಂದಿದ್ದರು ಎನ್ನಲಾಗಿದೆ. ಆ ಹಣದಲ್ಲಿ ನಾಗೇಂದ್ರ, ಆಪ್ತ ಸಹಾಯಕ ಹರೀಶ್ 25 ಲಕ್ಷ ಹಣ ಪಡೆದಿದ್ದ. ದದ್ದಲ್ ಪಿಎ ಪಂಪಣ್ಣ ಕೂಡ 55 ಲಕ್ಷ ಹಣ ಪಡೆದಿದ್ದ. ಈ ಬಗ್ಗೆ ಪರಿಶೀಲನೆ ವೇಳೆ ಹರೀಶ್ ಬಾಯಿಬಿಟ್ಟ ಹಿನ್ನೆಲೆಯಲ್ಲಿ ಆತನನ್ನು ಇಡಿ ವಶಕ್ಕೆ ಪಡೆದಿದೆ. ಪ್ರಕರಣದಲ್ಲಿ ಸಚಿವ ನಾಗೇಂದ್ರ, 50ರಿಂದ 60 ಕೋಟಿ ಅವ್ಯವಹಾರ ನಡೆಸಿರುವ ಆರೋಪಗಳು ಕೇಳಿಬಂದ ಹಿನ್ನೆಲೆಯಲ್ಲಿ ಹೆಚ್ಚಿನ ವಿಚಾರಣೆ ನಡೆದಿದೆ.

ಎರಡನೇ ದಿನವೂ ದೂರಿನ ಸುರಿಮಳೆ

ಮೊದಲಪುಟದಿಂದ

ಒಂದು ವೇಳೆ ಅಭ್ಯರ್ಥಿ ಗೆದ್ದರೆ ದಲಿತ ಎಡಗೈ ನಾಯಕತ್ವ ಜಿಲ್ಲೆಯಲ್ಲಿ ಬೆಳೆಯುತ್ತದೆ. ನಾಯಕತ್ವ ಬೆಳೆದರೆ ಅಸ್ತಿತ್ವಕ್ಕೆ ದಕ್ಕೆ ಬರಲಿದೆ ಎಂದು ಕೆಲಸ ಮಾಡಿಲ್ಲ ಎಂದು ದೂರು ನೀಡಿದ್ದಾರೆ ಎಂದು ತಿಳಿದುಬಂದಿದೆ.

ಹೊಂದಾಣಿಕೆ ರಾಜಕೀಯವಿಲ್ಲ: ಡಿಕೆಶಿ: ಇನ್ನು ಗುರುವಾರದ ಸಭೆಯಲ್ಲಿ ಹೊಂದಾಣಿಕೆ ಆರೋಪವನ್ನು ಕೆಲ ನಾಯಕರು ಹೋರಿಸಿದ್ದರು. ಈ ಬಗ್ಗೆ ಸ್ಪಷ್ಟನೆ ನೀಡಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಲೋಕಸಭಾ ಚುನಾವಣೆಯಲ್ಲಿ ಯಾವ ಹೊಂದಾಣಿಕೆ ರಾಜಕಾರಣವೂ ನಡೆದಿಲ್ಲ. ಎಲ್ಲವೂ ಸುಳ್ಳು. ರಾಜ್ಯದಲ್ಲಿ ಎಲ್ಲಾ ಕಾರ್ಯಕರ್ತರು ಒಟ್ಟಾಗಿ ದುಡಿದಿದ್ದಾರೆ ಎಂದು ತಿಳಿಸಿದ್ದಾರೆ. ಚುನಾವಣೆ ಹೊತ್ತಿನಲ್ಲಿ ತಳಮಟ್ಟದ ಪರಿಸ್ಥಿತಿಯನ್ನು ಸರಿಯಾಗಿ ಅರಿಯಲಾಗಲಿಲ್ಲ, ಎಲ್ಲಾ ಕಾರ್ಯಕರ್ತರು ಒಟ್ಟಾಗಿ ದುಡಿದಿದ್ದು, ಪಕ್ಷ ಒಗ್ಗಟ್ಟಾಗಿ ಕೆಲಸ ಮಾಡಲಿ ಎಂದು ಒಂದಷ್ಟು ಸಚಿವರಿಗೆ ತಮ್ಮ ಕುಟುಂಬದ ಸದಸ್ಯರನ್ನು ಚುನಾವಣೆಗೆ ನಿಲ್ಲಿಸಿ ಎಂದು ಹೇಳಿದ್ದೆವು. ಇದರಲ್ಲಿ ಕೆಲವರು ಗೆದ್ದಿದ್ದಾರೆ, ಇನ್ನು ಕೆಲವರು ಸೋತಿದ್ದು, ಮುಂದಿನ ದಿನಗಳಲ್ಲಿ ಪಕ್ಷಕ್ಕೆ ದೊಡ್ಡ ಆಸ್ತಿಯಾಗಿ ಬೆಳೆಯುತ್ತಾರೆ ಎಂದರು. ಎಲ್ಲಾ ಕಾರ್ಯಕರ್ತರು, ಮುಖಂಡರು, ಗೆದ್ದವರು, ಸೋತವರು ಎಲ್ಲರೂ ಸೇರಿ ಎಐಸಿಸಿ ಸತ್ಯಶೋದನಾ ಸಮಿತಿಗೆ ಪರಿಸ್ಥಿತಿ ಅರಿಯಲು ಅಹವಾಲು ಸಲ್ಲಿಸಿದ್ದು, ಅದರಂತೆ ಎಲ್ಲರೂ ಸಮಿತಿಯ ಮುಂದೆ ತಮ್ಮ ಅಭಿಪ್ರಾಯ ತಿಳಿಸಿ, ಮುಂದೆ ಯಾವ ರೀತಿ ಕಾರ್ಯನಿರ್ವಹಿಸಬೇಕು ಎನ್ನುವ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಹೇಳಿದರು.

ಸರ್ವಪಕ್ಷ ಸಭೆ ನಾಳೆ

ಮೊದಲಪುಟದಿಂದ

ಸರಕಾರ ಈ ಆದೇಶದ ವಿರುದ್ಧ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಮುಂದೆ ಮೇಲ್ಮನವಿ ಸಲ್ಲಿಸಬೇಕೆಂದು ತೀರ್ಮಾನಿಸಲಾಯಿತು. ಇದರೊಂದಿಗೆ ಜುಲೈ 14 ರಂದು ಸಂಜೆ 4 ಗಂಟೆಗೆ ಸರ್ವಪಕ್ಷ ಸಭೆ ನಡೆಸಲು ತೀರ್ಮಾನಿಸಲಾಯಿತು. ಕರ್ನಾಟಕದ ನೀರಿನ ವಿಚಾರದಲ್ಲಿ ಎಲ್ಲ ಪಕ್ಷದವರೂ ಒಟ್ಟಾಗಿದ್ದೇವೆ. ಆದ್ದರಿಂದ ಸರ್ವಪಕ್ಷ ಸಭೆ ನಡೆಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಕೇಂದ್ರ ಸಚಿವರಿಗೂ ಆಹ್ವಾನ: ಸರ್ವಪಕ್ಷ ಸಭೆಯಲ್ಲಿ ಬಿಜೆಪಿ, ಜೆಡಿಎಸ್ ರಾಜ್ಯಾಧ್ಯಕ್ಷರು, ಸಭಾನಾಯಕರು ಸೇರಿದಂತೆ ಕೇಂದ್ರ ಸಚಿವರು, ಕಾವೇರಿ ಭಾಗದ ಲೋಕಸಭೆ, ರಾಜ್ಯಸಭೆ ಸದಸ್ಯರು ಮತ್ತು ಶಾಸಕರನ್ನು ಸಹ ಸಭೆಗೆ ಆಹ್ವಾನಿಸಲಾಗುವುದು. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸರಕಾರದ ಮುಂದಿನ ನಡೆ ಕುರಿತು ತೀರ್ಮಾನಿಸಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಕಾವೇರಿ ಜಲಾನಯನ ಪ್ರದೇಶದ ಎಲ್ಲ ನಾಲ್ಕು ಜಲಾಶಯಗಳಲ್ಲಿ ಒಟ್ಟು ಕೇವಲ 60 ಟಿಎಂಸಿ ನೀರು ಲಭ್ಯವಿದೆ. ಕೃಷಿ ಚಟುವಟಿಕೆಗಳಿಗೂ ನಾವು ನೀರು ಒದಗಿಸಬೇಕಾಗಿದೆ. ಮಳೆ ಕೊರತೆಯನ್ನು ಗಮನದಲ್ಲಿರಿಸಿ ಜುಲೈ ಅಂತ್ಯದವರೆಗೆ ಕಾಯಲು ಮನವಿ ಮಾಡಿದ್ದೇವೆ.
–ಸಿದ್ದರಾಮಯ್ಯ ಸಿಎಂ

ನಮಗೆ ಮಳೆ ಕೊರತೆ ಉಂಟಾಗಿದೆ. ಕಾವೇರಿ ನೀರು ನಿಯಂತ್ರಣ ಸಮಿತಿಯು ತಮಿಳುನಾಡಿಗೆ ಒಂದು ಟಿಎಂಸಿ ನೀರು ಹರಿಸಬೇಕು ಎಂದು ಹೇಳಿದೆ. ನಾನು ದೆಹಲಿಯಲ್ಲಿ ಇರುವ ವಕೀಲರಾದ ಮೋಹನ್ ಕಾತರಕಿ, ಶ್ಯಾಮ್ ದಿವಾನ್ ಅವರ ಬಳಿ ಮಾತನಾಡಿದ್ದೇನೆ. ಅವರು ಒಂದಷ್ಟು ಸಲಹೆ ನೀಡಿದ್ದಾರೆ.
–ಡಿ.ಕೆ.ಶಿವಕುಮಾರ್ ಡಿಸಿಎಂ

ಕರ್ನಾಟಕ ಸರ್ಕಾರ
ಯಲಹಂಕ ತಾಲ್ಲೂಕು ಪಂಚಾಯಿತಿ
ಮಿನಿ ವಿಧಾನಸೌಧ, 2ನೇ ಮಹಡಿ, ಯಲಹಂಕ, ಬೆಂಗಳೂರು–560064.
ಫೋನ್ : 080–28460315
ಸಂಖ್ಯೆ: ಯ.ತಾ.ಪಂ./ಮರುಟೆಂಡರ್/ಹೊರಗುತ್ತಿಗೆ/2024–25 ದಿನಾಂಕ: 09.07.2024

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ

ಯಲಹಂಕ ತಾಲ್ಲೂಕು ಪಂಚಾಯಿತಿ ಕಛೇರಿಗೆ ಅವಶ್ಯವಿರುವ ಒಂದು ವಾಹನಚಾಲಕ ಸಿಬ್ಬಂದಿಯ ಹುದ್ದೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಹೊರ ಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆದುಕೊಳ್ಳಲು ಉದ್ದೇಶಿಸಿ ಈ ಸಂಬಂಧ ದ್ವಿ–ಲಕೋಟೆ ಪದ್ಧತಿಯಲ್ಲಿ ಮರು ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಇ–ಟೆಂಡರ್ ವೆಬ್‌ಸೈಟ್ www.kppp.karnataka.gov.in ನಲ್ಲಿ ದಿನಾಂಕ: 09.07.2024 ರಂದು ಪ್ರಕಟಿಸಲಾಗಿದೆ. ಹೊರ ನೇಮಕಾತಿ ಏಜೆನ್ಸಿಯವರು ದಿನಾಂಕ: 19.07.2024 ರಂದು 4.30 ಗಂಟೆಯೊಳಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ದಿನಾಂಕ: 20.07.2024 ರಂದು ಸಂಜೆ 5.21 ಗಂಟೆಗೆ ತಾಂತ್ರಿಕ ಬಿಡ್‌ನ್ನು ತೆರೆಯಲಾಗುವುದು ಹಾಗೂ ದಿನಾಂಕ : 07.07.2024 ರಂದು ಸಂಜೆ 5.30 ಗಂಟೆಗೆ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು.

ಕ್ರ. ಸಂ.	ಹುದ್ದೆಗಳ ವಿವರ	ಹುದ್ದೆಗಳ ಸಂಖ್ಯೆ
1	ವಾಹನ ಚಾಲಕ	1

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ
ಯಲಹಂಕ ತಾಲ್ಲೂಕು ಪಂಚಾಯಿತಿ,
ಬೆಂಗಳೂರು
ವಾಸಾಸಂಇ/ವಾ.ಪ್ರ./ಶಿರಡಿ ಸಾಯಿ/898/2024–25

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ
ಬೆಳಗಾವಿ. ಫ್ಯಾಕ್ಸ್/ದೂರವಾಣಿ ಸಂಖ್ಯೆ: 0831–2470342, 2470257 ಇ–ಮೇಲ್: belagavibuda@gmail.com
No: BUDA/PWD/E-TENDER/2024-25/976 Date: 12-07-2024

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ ಮತ್ತು ನಿಯಮಾವಳಿಗಳನ್ವಯ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಅನ್ವಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಯ ಇ–ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು, ಕಾರ್ಯಕಾರಿ ಅಭಿಯಂತರರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ ಇವರಿಂದ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. (ದೂರವಾಣಿ ಸಂಖ್ಯೆ: 0831–2470342) ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್: https://kppp.karnataka.gov.in ರಲ್ಲಿ ಪಡೆಯಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಇಂಡೆಂಟ್ ನಂ.	ಮುಂಗಡ ಠೇವಣಿ (ರೂ. ಗಳಲ್ಲಿ)
1	E-Auction for deposit BUDA fund for maximum one year period (Only Nationalised banks should participate).	BGMUDA/2024-25 AUCTION16	2,10,000/-

ಟೆಂಡರ್ ಫಾರ್ಮ ಬೆಲೆ ಇ–ಪ್ರೊಕ್ಯೂರ್‌ಮೆಂಟ್‌ದಲ್ಲಿದ್ದಂತೆ: 1) ಟೆಂಡರ್ ಕ್ವೆರಿಸ್ ಸಲ್ಲಿಸಲು ಕೊನೆಯ ದಿನಾಂಕ: 09–08–2024 ರಂದು ಸಾಯಂಕಾಲ 5.00 ಘಂಟೆಯವರೆಗೆ. 2) ಆಕ್ಷನ್‌ನಲ್ಲಿ ಭಾಗವಹಿಸಲು ಆಸಕ್ತಿ ವ್ಯಕ್ತಪಡಿಸುವಿಕೆಗಾಗಿ ಕೊನೆಯ ದಿನಾಂಕ: 12–08–2024 ರಂದು ಸಾಯಂಕಾಲ 5.00 ಘಂಟೆಗೆ. 3) ಆಕ್ಷನ್ ಪ್ರಾರಂಭ ದಿನಾಂಕ: 13–08–2024 ರಂದು ಮುಂಜಾನೆ 10.00 ಘಂಟೆಗೆ. 4) ಆಕ್ಷನ್ ಮುಕ್ತಾಯ ದಿನಾಂಕ: 14–08–2024 ರಂದು ಸಾಯಂಕಾಲ 5.00 ಘಂಟೆಯವರೆಗೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ.
ವಾಸಾಸಂಇ/ಬೆಳಗಾವಿ/371/ಅಡ್ವರ್ಟೋರ್/2024–25
ಸಹಿ/– ಆಯುಕ್ತರು
ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ.

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ–571 401
(Autonomous Medical Institution, Government of Karnataka)
(Fax & Phone: 08232-231001, 222086,
E-mail: mimanmandya@gmail.com)
Website: www.mimsmandya.org

ಇ–ಟೆಂಡರ್ ಪ್ರಕಟಣೆ
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಗದು ವಿಭಾಗ. ಹಾಗೂ ಇತರೆ ವಿಭಾಗಗಳಿಗೆ ಅವಶ್ಯವಿರುವ ಕಂಪ್ಯೂಟರ್ ಉಪಕರಣಗಳು ಹಾಗೂ ಇತ್ಯಾದಿಗಳನ್ನು ಸರಬರಾಜು ಪಡೆಯಲು ಉತ್ಪಾದಕ /ನೊಂದಾಯಿಸಲ್ಪಟ್ಟ ಅರ್ಹ ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ.
ಕ್ರಸಂ : 01. ಟೆಂಡರ್ ಪ್ರಕಟಣೆ ಸಂಖ್ಯೆ : MIMS/Sup/Com & Others Items/e-tender//2024-25 ದಿನಾಂಕ:08.07.2024. ಟೆಂಡರ್ ವಿವರ : Computers & Others Items ಗಳನ್ನು ಪಡೆಯಲು ಪ್ರಾರಂಭದ ದಿನಾಂಕ : 09.07.2024 ರಿಂದ ಅಂತಿಮ ದಿನಾಂಕ: 24.07.2024 ಸಂಜೆ 5.30 ಗಂಟೆವರೆಗೆ. ಟೆಂಡರ್ ಅಂದಾಜು ಮೊತ್ತ (ರೂ.ಗಳಲ್ಲಿ) : 23,35,000/– (ಇಪ್ಪತ್ತ ಮೂರು ಲಕ್ಷದ ಮೂವತ್ತೈದು ಸಾವಿರ ಮಾತ್ರ). ಇ.ಎಂ.ಡಿ ಮೊತ್ತ ರೂ. : 50,000/– ಟೆಂಡನ್ನು ಇ–ಪೋರ್ಟಲ್ ಮುಖಾಂತರ ನಿಗದಿತ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) ದೊಂದಿಗೆ ಸಲ್ಲಿಸುವುದು ಇತರೆ ವಿವರಗಳನ್ನು ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ http://www kppp.karnataka.gov.in ವೆಬ್ ಸೈಟ್ ನಲ್ಲಿ ನೋಡಬಹುದು. ಹೆಚ್ಚಿನ ಮಾಹಿತಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ(ರಜಾ ದಿನಗಳನ್ನು ಹೊರತುಪಡಿಸಿ) ಪಡೆಯಬಹುದಾಗಿದೆ.

ಸಹಿ/–ಮುಖ್ಯ ಆಡಳಿತಾಧಿಕಾರಿಗಳು,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/166/2024–25

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಸಂ:ಕಾ.ಇಂ/ಕಾ.ನೀ.ನಿ.ನಿ/ಹಾಸುವಿ/ಪಿಬಿಸಿ/ಟೆಂಡರ್ ಪ್ರಕಟಣೆ ಸಂಖ್ಯೆ:3/2024–25
ದಿನಾಂಕ: 12/07/2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಅಲ್ಪಾವಧಿ)
(ಐಟಂಟರು : ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್ ಪದ್ಧತಿ ಮೂಲಕ ಮುಕ್ತ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ರವರ ಪರವಾಗಿ ಸೂಚಿತ ದರ್ಜೆ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ರ್ ಪದ್ಧತಿ ಮುಖಾಂತರ ಐಟಂವಾರು ದರದ ಟೆಂಡರ್ ಗಳನ್ನು ಆಹ್ವಾನಿಸಲಾಗಿದೆ. ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ಹಾರಂಗಿ–ಕುಶಾಲನಗರ ರಸ್ತೆಯ ಸೇತುವೆ ನಿರ್ಮಾಣ ಹಾಗೂ ಭಾಗಮಂಡಲ ಮೇಲುಸೇತುವೆ ರಸ್ತೆ ಅಭಿವೃದ್ಧಿ ಯ 2 ಕಾಮಗಾರಿಗಳಿಗೆ ಐಟಂವಾರು ಟೆಂಡರ್ ಕರೆಯಲಾಗಿದ್ದು, ಈ ಕಾಮಗಾರಿಯ ಅಂದಾಜು ಮೊತ್ತ ರೂ 99.90 ಲಕ್ಷಗಳಿದ್ದು, ಈ ಕಾಮಗಾರಿಗೆ ನಿಗದಿತ ದರ್ಜೆ ಗುತ್ತಿಗೆದಾರರಿಂದ ಇ–ಪ್ರೊಕ್ಯೂಮೆಂಟ್ ಪೋರ್ಟ್‌ಲ್ ಮೂಲಕ ಮಾತ್ರ ಟೆಂಡರ್ ಕರೆಯಲಾಗಿದೆ. ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂಮೆಂಟ್ ಪೋರ್ಟಲ್ ಮುಖಾಂತರ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದ್ದು, ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದಿನಾಂಕ: 20–7–2024 ಅಪರಾಹ್ನ 400 ಗಂಟೆಯವರೆಗೆ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ಡನ್ನು ದಿನಾಂಕ: 22–7–2024 ರ ಪೂರ್ವಾಹ್ನ 11:00 ತೆರೆಯಲಾಗುವುದು, ಆರ್ಥಿಕ ಬಿಡ್ಡನ್ನು ತಾಂತ್ರಿಕ ಬಿಡು ಅನುಮೋದನೆಯಾದ ನಂತರ ತೆರೆಯಲಾಗುವುದು, ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂಮೆಂಟ್ ಪೋರ್ಟಲ್ ವೆಬ್‌ಸೈಟ್ ವಿಳಾಸ: http://kppp.Karnataka.gov.in. ರಲ್ಲಿ ಪಡೆಯಬಹುದಾಗಿದೆ. ಈ ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ ಟೆಂಡರ್ ಪ್ರೊಸೆಸಿಂಗ್ ಶುಲ್ಕ ನಿಗದಿಯಾಗಿದ್ದು, ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಕೆಳಸಹಿದಾರರನ್ನು ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಸಹಿ/–
ಕಾರ್ಯಪಾಲಕ ಇಂಜಿನಿಯರ್
ಹಾರಂಗಿ ಪುನರ್ವಸತಿ ವಿಭಾಗ,
ಕಾವೇರಿ ನೀರಾವರಿ ನಿಗಮ ನಿಯಮಿತ ಕುಶಾಲನಗರ,
ಸೋಮವಾರಪೇಟೆ ತಾ, ಕೊಡಗು ಜಿಲ್ಲೆ–571234

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ, ಶಿಡ್ಲಘಟ್ಟ
ಶ್ರೀರಾಮ ಬಿನ್ ಲೇಟ್ ಶ್ರೀರಾಮಪ್ಪ ರವರ ಬಿಲ್ಡಿಂಗ್, ನಿಸರ್ಗ ನಿಲಯ, ನ್ಯೂ ಡಿಲೆಕ್ಸ್ ಬೇಕರಿ ಹಿಂಭಾಗ, ಚಿಕ್ಕಬಳ್ಳಾಪುರ ಮತ್ತು ಚಿಂತಾಮಣಿ ಮುಖ್ಯರಸ್ತೆ, ಕನಕನಗರ, ಶಿಡ್ಲಘಟ್ಟ ನಗರ, ಚಿಕ್ಕಬಳ್ಳಾಪುರ ಜಿಲ್ಲೆ–562 105
ದೂರವಾಣಿ ಸಂಖ್ಯೆ: 08158–256497 ಮೇಲ್:cdposid2@gmail.com
ಸಂ.ಶಿಅಯೋ/ಶಿಘ/ಹೊ.ಗು.ನೌ.ಟೆಂ.ಪ್ರ/2024–25 ದಿನಾಂಕ:08.07.2024

ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ
(ಹೊರಗುತ್ತಿಗೆ ನೌಕರರ ಸೇವೆಯನ್ನು ಪಡೆಯುವ ಬಗ್ಗೆ ಟೆಂಡರ್)

2024–25ನೇ ಸಾಲಿನಲ್ಲಿ ಶಿಡ್ಲಘಟ್ಟ ಶಿಶು ಅಭಿವೃದ್ಧಿ ಯೋಜನಾ, ಕಛೇರಿಗೆ ಬಾಹ್ಯಮೂಲದಿಂದ ಕೌಟುಂಬಿಕ ದೌರ್ಜನ್ಯ ಕಾಯ್ದೆಯಡಿ 01 ಕಂಪ್ಯೂಟರ್ ಆಪರೇಟರ್ 01, ಮೆಸೆಂಜರ್ ಹಾಗೂ ಐ.ಸಿ.ಡಿ.ಎಸ್. ಯೋಜನೆಯಡಿ 01 ಕಂಪ್ಯೂಟರ್ ಆಪರೇಟರ್ ಕಂ ಟೈಪಿಸ್ಟ್ 02 ಡಿ.ಗ್ರೂಪ್ ನೌಕರರನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಮರು ಇ–ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ವೇಳಾಪಟ್ಟಿ ಈ ಕೆಳಕಂಡಂತೆ ಇದೆ. (1) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 29.07.2024ರಂದು ಸಾಯಂಕಾಲ 5.30 ಗಂಟೆವರೆಗೆ. (2) EMD ಮೊತ್ತ: ರೂ.20,000/– (3) ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ, ಸಮಯ: ದಿನಾಂಕ:31.07.2024 ರಂದು ಸಾಯಂಕಾಲ 5.30 ಗಂಟೆವರೆಗೆ. (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: ದಿನಾಂಕ:01.08.2024 ರಂದು ಸಾಯಂಕಾಲ 5.30 ಗಂಟೆವರೆಗೆ. (5) ಟೆಂಡರ್‌ನ ಅಂದಾಜು ಮೌಲ್ಯ: ರೂ.14.10ಲಕ್ಷಗಳು. ಹೆಚ್ಚಿನ ಮಾಹಿತಿಗಾಗಿ ಟೆಂಡರ್ ಪೂರ್ಣ ವಿವರಗಳನ್ನು ಕರ್ನಾಟಕ ಸರ್ಕಾರದ www.kppp.karnataka.gov.in ವೆಬ್‌ಸೈಟ್‌ನಲ್ಲಿ ಮಾತ್ರ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ:08158–256497ಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಶಿಡ್ಲಘಟ್ಟ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ89/ಕೆ.ಎಸ್.ಎಂ.ಸಿ.ಎ/2024–25

ನಗರಸಭಾ ಕಾರ್ಯಾಲಯ, ಮುಳಬಾಗಿಲು
CITY MUNICIPAL COUNCIL MULBAGAL, KOLAR DISTRICT-563131
ದೂರವಾಣಿ ಸಂ: 08159–242044, E-mail: ka.mulbagilu.cmc@gmail.com,
website: www.mulbagalcity.mrc.gov.in
ಸಂಖ್ಯೆ:ನಸಮು/ತಾಂತ್ರಿಕ/ಸಿಆರ್/09/2024–25 ದಿನಾಂಕ: 10.07.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗಳಿಗೆ ಒಳಪಟ್ಟು ಇ–ಪ್ರಕ್ಯೂರ್ಮೆಂಟ್ ಮೂಲಕ ಟೆಂಡರ್ ಪ್ರಕಟಿಸಲಾಗಿದೆ.)

ಮುಳಬಾಗಿಲು ನಗರಸಭೆ ವ್ಯಾಪ್ತಿಯಲ್ಲಿ 15ನೇ ಹಣಕಾಸು ಯೋಜನೆ ನಗರಸಭೆ ನಿಧಿ, ಎಸ್‌ಎಫ್‌ಸಿ ಮತ್ತು ನಿಧಿ ಮತ್ತು ಎಸ್‌ಬಿಎಂ ಯೋಜನೆಯಡಿಯಲ್ಲಿ ವಿವಿಧ ಕಾಮಗಾರಿಗಳು ಹಾಗೂ ವಾಹನ, ಯಂತ್ರೋಪಕರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕತೆ ಆಧ್ಯಾದೇಶ 2000ರಂತೆ ಹಾಗೂ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ/06/ಪಿಸಿಎಲ್/2006, ಬೆಂಗಳೂರು ರಂತೆ ದ್ವಿ ಲಕೋಟೆ ಪದ್ಧತಿಯಲ್ಲಿ ಇ–ಪ್ರಕ್ಯೂರ್ಮೆಂಟ್ ಪೋರ್ಟಲ್ https://kppp.karnataka.gov.in. ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಐಟಂವಾರು ದರದ ಟೆಂಡರುಗಳನ್ನು ಮತ್ತು ವಾಹನವನ್ನು ಪಡೆಯಲು ಅರ್ಹ ಗುತ್ತಿಗೆದಾರರು/ ಏಜನ್ಸಿದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ–ಪ್ರಕ್ಯೂರ್ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಕ್ರ. ಸಂ	ಕಾಮಗಾರಿಯ ಇಂಡೆಂಟ್ ನಂಬರ್	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	Category
1	DMA/2024-25/WS/WORK_INDENT20258	44.70	SC
2	DMA/2024-25/WS/WORK_INDENT20260	40.50	OTHERS
3	DMA/2024-25/RD/WORK_INDENT20265	38.60	SC
4	DMA/2024-25/OW/WORK_INDENT20269	5.00	OTHERS
5	DMA/2024-25/BD/WORK_INDENT20408	15.00	ST
6	DMA/2024-25/OW/WORK_INDENT20850	24.50	OTHERS
7	DMA/2024-25/OW/WORK_INDENT20867	5.00	OTHERS
8	DMA/2024-25/OW/WORK_INDENT20898	7.60	OTHERS
9	DMA/2024-25/RD/WORK_INDENT20512	33.00	SC
10	DMA/2024-25/OW/WORK_INDENT20902	15.00	OTHERS
11	DMA/2024-25/IND2329	13.22	OTHERS
12	DMA/2024-25/IND2388	92.99	OTHERS

(1) ಇ–ಪ್ರಕ್ಯೂರ್ಮೆಂಟ್ ಮೂಲಕ ಬಿಡ್ ಸಲ್ಲಿಸುವ ಕೊನೆಯ ದಿನಾಂಕವನ್ನು ಇ–ಪ್ರೋಟಲ್‌ನಲ್ಲಿ ನಮೂದಿಸಲಾಗಿರುತ್ತದೆ. (2) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ಇ–ಪ್ರೋಟಲ್‌ನಲ್ಲಿ ನಮೂದಿಸಲಾಗಿರುತ್ತದೆ. (3) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ಇ–ಪ್ರೋಟಲ್‌ನಲ್ಲಿ ನಮೂದಿಸಲಾಗಿರುತ್ತದೆ.

ಸಹಿ/–
ಪೌರಾಯುಕ್ತರು
ನಗರಸಭೆ, ಮುಳಬಾಗಿಲು
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ89/ಕೆ.ಎಸ್.ಎಂ.ಸಿ.ಎ/2024–25

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಎಲ್.ಆರ್.ಡಿ.ಇ ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052
ದೂರವಾಣಿ ಸಂಖ್ಯೆ: 22263479
ಸಂಖ್ಯೆ: STRRPA/TP/CLU/94/2023-24 **ಪ್ರಕಟಣೆ** ದಿನಾಂಕ: 11.07.2024.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **"ವ್ಯವಸಾಯ"** ವಲಯದಿಂದ **"ವಸತಿ"** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	2	3	4	5	6	7	8	9
1	ಶ್ರೀ. ಬಿ.ಜಿ ಕೃಷ್ಣಾರೆಡ್ಡಿ ಬಿನ್ ಲೇಟ್ ಬಿ.ಹೆಚ್ ಗುಂಡಾರೆಡ್ಡಿ.	ಆನೇಕಲ್	ಅತ್ತಿಬೆಲೆ–1	ಬಿದರಗುಪ್ಪೆ	265/3	0–27	ವ್ಯವಸಾಯ	ವಸತಿ
2	ಬಿ.ಆರ್ ಆಶಾ, ಬಿ.ಆರ್ ದೀಪ, ಬಿ.ಆರ್ ಲತ, ಬಿ.ಆರ್ ಗೀತಾ ಬಿನ್ ಶ್ರೀ. ಎ. ರಾಜಣ್ಣ.	ಆನೇಕಲ್	ಅತ್ತಿಬೆಲೆ–1	ಬಿದರಗುಪ್ಪೆ	300/4	01–15	ವ್ಯವಸಾಯ	ವಸತಿ
3	ಶ್ರೀ. ಬಿ.ಜಿ ಆಂಜಿನಪ್ಪ ಬಿನ್ ಲೇಟ್ ಬಿ.ಹೆಚ್ ಗುಂಡಾರೆಡ್ಡಿ.	ಆನೇಕಲ್	ಅತ್ತಿರ್ಬೆಲೆ–1	ಬಿದರಗುಪ್ಪೆ	265/1	0–25	ವ್ಯವಸಾಯ	ವಸತಿ
4	ಶ್ರೀ. ಬಿ.ಜಿ ಆಂಜಿನಪ್ಪ ಬಿನ್ ಲೇಟ್ ಬಿ.ಹೆಚ್ ಗುಂಡಾರೆಡ್ಡಿ.	ಆನೇಕಲ್	ಅತ್ತಿಬೆಲೆ–1	ಬಿದರಗುಪ್ಪೆ	265/2	0–05½	ವ್ಯವಸಾಯ	ವಸತಿ
	ಶ್ರೀ. ಬಿ.ಜಿ ಕೃಷ್ಣಾರೆಡ್ಡಿ ಬಿನ್ ಲೇಟ್ ಬಿ.ಹೆಚ್ ಗುಂಡಾರೆಡ್ಡಿ.				265/2	0–05½		
5	ಶ್ರೀ. ಟಿ. ಚಿಕ್ಕಣ್ಣ ಬಿನ್ ಲೇಟ್ ತಿಮ್ಮಯ್ಯ	ಆನೇಕಲ್	ಅತ್ತಿಬೆಲೆ–1	ಬಿದರಗುಪ್ಪೆ	298/2	0–16	ವ್ಯವಸಾಯ	ವಸತಿ
	ಮೆ॥ ದೈವಿಕ್ ಹೋಮ್ಸ್ ರವರ ಪರವಾಗಿ ಶ್ರೀ. ಎ ನಾಗರಾಜರೆಡ್ಡಿ ಬಿನ್ ಆನಂದರೆಡ್ಡಿ ಮತ್ತು ಶ್ರೀ. ಎ ಪ್ರಕಾಶರೆಡ್ಡಿ ಬಿನ್ ಆನಂದರೆಡ್ಡಿ.,				298/2	0–24		
6	ಶ್ರೀ. ಟಿ. ಚಿಕ್ಕಣ್ಣ ಬಿನ್ ಲೇಟ್ ತಿಮ್ಮಯ್ಯ	ಆನೇಕಲ್	ಅತ್ತಿಬೆಲೆ–1	ಬಿದರಗುಪ್ಪೆ	299/1	04–22 ಪೈಕಿ 02–06	ವ್ಯವಸಾಯ	ವಸತಿ
7	ಶ್ರೀ. ಆರ್ ವೆಂಕಟೇಶ್ ರೆಡ್ಡಿ ಬಿನ್ ರಾಮಚಂದ್ರರೆಡ್ಡಿ	ಆನೇಕಲ್	ಅತ್ತಿಬೆಲೆ–1	ಬಿದರಗುಪ್ಪೆ	299/2	0–06	ವ್ಯವಸಾಯ	ವಸತಿ
8	ಶ್ರೀ. ಶ್ರೀನಿವಾಸರೆಡ್ಡಿ ಬಿನ್ ರಾಮರೆಡ್ಡಿ. ಬಿದರಗುಪ್ಪೆ ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು–562107.	ಆನೇಕಲ್	ಅತ್ತಿಬೆಲೆ–1	ಬಿದರಗುಪ್ಪೆ	299/3	0–06	ವ್ಯವಸಾಯ	ವಸತಿ

ಷರಾ:– ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನಿನ ಪರಿಸರದಲ್ಲಿ ವಸತಿ ಬಡಾವಣೆಗಳು ಬಂದಿದ್ದು/ಬರುತ್ತಿದ್ದು, ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ವಿನ್ಯಾಸವನ್ನು ಅಭಿವೃದ್ಧಿಪಡಿಸಿ, ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ನಿವೇಶನಗಳನ್ನು ನೀಡುವ ಸಲುವಾಗಿ ಸದರಿ ಪ್ರದೇಶವನ್ನು **ವ್ಯವಸಾಯ** ವಲಯದಿಂದ **ವಸತಿ** ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ
ಪ್ರಾಧಿಕಾರ, ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/928/ಆಕಾರ್/2024–25

ಟ್ವೀಟೂ-ಖಾರಾ

ಬಿಜೆಪಿ
ಕರ್ನಾಟಕ

ದಲಿತರ ದುಡ್ಡನ್ನು ಕೊಳ್ಳೆಹೊಡೆದ ಬಿ.ನಾಗೇಂದ್ರ ಇನ್ನುಮುಂದೆ, ಕಂಬಿ ಹಿಂದೆ. ರಾಜ್ಯವನ್ನು ಲೂಟಿ ಮಾಡಲೆಂದೇ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ, ಪರಿಶಿಷ್ಟ ಪಂಗಡದಲ್ಲಿನ ಬಡಜನರ ಅಭಿವೃದ್ಧಿಗೆ ವಿನಿಯೋಗಿಸಲು ಇದ್ದ ಹಣವನ್ನು ವಾಲ್ಮೀಕಿ ನಿಗಮದಿಂದ ಲಪಟಾಯಿಸಿ ಕಾರು, ಬಾರಿಗೆ ಬಳಸಿದ್ದ ಲೂಟಿಕೋರರರನ್ನು ಇ.ಡಿ ತನಿಖಾ ಸಂಸ್ಥೆ ಹೆಡೆಮುರಿ ಕಟ್ಟುತ್ತಿದೆ.

ಮುಜಮಿಲ್
ಬೆಂಗಳೂರು

ಪ್ರಕರಣದಲ್ಲಿ ಎಲ್ಲ ಆರೋಪಗಳು ರುಜುವಾತಾದರೆ ಬಿ. ನಾಗೇಂದ್ರ ಶೀಘ್ರವೇ ಬಿಜೆಪಿ ಸೇರುತ್ತಾರೆ...!

ಬಿಜೆಪಿ ಪ್ರತಿಭಟನೆಗೆ ಕಾಂಗ್ರೆಸ್‌ನಿಂದ ಪ್ರತಿ ಹೋರಾಟ | ಕಮಲ ನಾಯಕರ ವಿರುದ್ಧ ಸಹಸ್ರಾರು ಕಾರ್ಯಕರ್ತರಿಂದ ಘೋಷಣೆ

ಮುಡಾ ಹಗರಣ: ಕಾಂಗ್ರೆಸ್, ಬಿಜೆಪಿ ಪರಸ್ಪರ ಪ್ರತಿಭಟನೆ

ಮೈಸೂರು: ಮುಡಾದಲ್ಲಿನ ನಿವೇಶನ ಹಗರಣ ಕುರಿತಂತೆ ಮೈಸೂರಿನಲ್ಲಿ ಶುಕ್ರವಾರ ಕಾಂಗ್ರೆಸ್ ಮತ್ತು ಬಿಜೆಪಿ ಪರಸ್ಪರ ಪ್ರತಿಭಟನೆಗೆ ಇಳಿದ ಕಾರಣ ಕೆಲಕಾಲ ಪರಿಸ್ಥಿತಿ ಪ್ರಕ್ಷುಬ್ಧಗೊಂಡಿತ್ತು. ಪ್ರತಿಪಕ್ಷ ನಾಯಕ ಅಶೋಕ್, ಮಾಜಿ ಡಿಸಿಎಂ ಅಶ್ವತ್ಥ ನಾರಾಯಣ್ ಮೊದಲಾದವರ ನೇತೃತ್ವದಲ್ಲಿ ಬಿಜೆಪಿ ಪ್ರತಿಭಟನೆ ಸಂಘಟಿಸಿತ್ತು.

ಇದಕ್ಕೆ ಪ್ರತಿಯಾಗಿ , ನಗರದ ಎಂಜಿನಿಯರುಗಳ ಸಂಸ್ಥೆ ಎದುರಿನ ಫುಟ್ಪಾತ್‌ನಲ್ಲಿ ಕಾಂಗ್ರೆಸ್ ಮುಖಂಡರು 2 ಸಾವಿರಕ್ಕೂ ಹೆಚ್ಚು ಮಂದಿಯೊಂದಿಗೆ ಪ್ರತಿಭಟನೆ ನಡೆಸಿ, ಬಿಜೆಪಿ ವಿರುದ್ಧ ಆಕ್ರೋಶ ವ್ಯಕ್ತ ಪಡಿಸಿದರು. ಈ ನಡುವೆ ಬಿಜೆಪಿಯವರು ಪ್ರತಿಭಟನೆ ನಡೆಸುವ ಸ್ಥಳಕ್ಕೆ ತೆರಳಿ ಅವರನ್ನು ಮುತ್ತಿಗೆ ಹಾಕುವುದಾಗಿ ಕಾಂಗ್ರೆಸ್ ಪ್ರತಿಭಟನಾಕಾರರು ಯತ್ನಿಸಿದರು. ಇದಕ್ಕೆ ಪೊಲೀಸರು ಅವಕಾಶ ನೀಡಲಿಲ್ಲ. ಬಿಜೆಪಿ ಹೋರಾಟ ಭ್ರಷ್ಟಾಚಾರದ ಕಡೆ, ಕಾಂಗ್ರೆಸ್ ಜನಪರ ಆಡಳಿತದ ವಿರೋಧಿ ಬಿಜೆಪಿ ಎಂಬ ಭಿತ್ತಿಪತ್ರಗಳನ್ನು ಹಿಡಿದ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ ನಾಯಕರ ವಿರುದ್ಧ ಧಿಕ್ಕಾರ ಕೂಗಿದರು.

ಮುತ್ತಿಗೆ ನಿರ್ಣಯ: ಧರಣಿಯಲ್ಲಿ ಸಿದ್ದರಾಮಯ್ಯ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡುತ್ತಿರುವ ಬಿಜೆಪಿ ನಾಯಕರನ್ನು ಮುತ್ತಿಗೆ ಹಾಕುವ ನಿರ್ಣಯವನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಮಂಡಿಸಿದರು.

ಮೈಸೂರಿನ ಎಂಜಿನಿಯರುಗಳ ಸಂಸ್ಥೆ ಎದುರು ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ.

ಬಳಿಕ ಮುಖಂಡರ ನೇತೃತ್ವದಲ್ಲಿ ಸಾವಿರಾರು ಕಾರ್ಯಕರ್ತರು ಮುಡಾ ಮುಂಭಾಗದ ಮೂಲಕ ಬಿಜೆಪಿ ವತಿಯಿಂದ ನಡೆಯುತ್ತಿರುವ ಪ್ರತಿಭಟನಾ ಸ್ಥಳದತ್ತ ತೆರಳಲು ಮುನ್ನುಗಿದರು. ಮುಡಾ ಆವರಣದಲ್ಲಿ ತಡೆಗೋಡೆ ನಿರ್ಮಿಸಿದ ಪೊಲೀಸರು ಕಾಂಗ್ರೆಸ್ ಕಾರ್ಯಕರ್ತರನ್ನು ತಡೆದರು.

ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರು ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಮುಖಂಡರೊಂದಿಗೆ ಮಾತುಕತೆ ನಡೆಸಿದರು. ಬಳಿಕವೂ ಪ್ರತಿಭಟನೆ ಮುಂದುವರಿಯಿತು.

ಮುತ್ತಿಗೆಗೆ ಪೊಲೀಸರ ಅವಕಾಶ ದೊರೆಯದ ಹಿನ್ನೆಲೆಯಲ್ಲಿ ಹಳೇ ಜಿಲ್ಲಾಧಿಕಾರಿಗಳ ಕಚೇರಿಗೆ ಹೋಗಲು ಕಾಂಗ್ರೆಸ್‌ನವರು ಯತ್ನಿಸಿದರು. ಆದರೆ, ಮಹಾರಾಜ ಕಾಲೇಜು ಕ್ಯಾಂಟಿನ್ ಮುಂಭಾಗದಲ್ಲಿ ಪೊಲೀಸ್ ಸಿಬ್ಬಂದಿ ತಡೆದರು. ಮತ್ತೆ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಕಾರ್ಯಕರ್ತರು ಬಿಜೆಪಿ ನಾಯಕರ ಭೇಟಿಗೆ ಅವಕಾಶ ನೀಡುವಂತೆ ಪೊಲೀಸರನ್ನು ಒತ್ತಾಯಿಸಿದರು.

ಬದಲಿ ನಿವೇಶನ: ಅಕ್ರಮ ನಡೆದಿಲ್ಲ: ನಂತರ ಮಾತನಾಡಿದ ಹೈನುಗಾರಿಕೆ ಸಚಿವ ಕೆ. ವೆಂಕಟೇಶ್, ಮುಡಾದಲ್ಲಿ ನಡೆದಿದೆ ಎನ್ನಲಾದ ಹಗರಣ ಬಿಜೆಪಿ ಅಧಿಕಾರವಧಿಯಲ್ಲೇ ಆಗಿದೆ. ಸಿದ್ದರಾಮಯ್ಯ ಅವರ ಪತ್ನಿಗೆ ಬದಲಿ ನಿವೇಶನ ನೀಡಲಾಗಿದೆ. ಇದರಲ್ಲಿ ಅಕ್ರಮ ನಡೆದಿಲ್ಲ. ಆದರೂ, ಬಿಜೆಪಿ ಕಾಂಗ್ರೆಸ್ ಮತ್ತು ಸಿದ್ದರಾಮಯ್ಯ ವಿರುದ್ಧ ಅಪಪ್ರಚಾರ ನಡೆಸುತ್ತಿದೆ ಎಂದು ಕಿಡಿಕಾರಿದರು.

ಮುಡಾ ಹಗರಣವನ್ನು ಮುಂದಿಟ್ಟುಕೊಂಡು ಬಿಜೆಪಿ ಅನಗತ್ಯವಾಗಿ ಸಿದ್ದರಾಮಯ್ಯ ಅವರನ್ನು ತೇಜೋವಧೆ ಮಾಡುತ್ತಿದೆ. ಇದನ್ನು ನಾವು ಎಂದಿಗೂ ಸಹಿಸುವುದಿಲ್ಲ, ಅವರ ಆಡಳಿತಾವಧಿಯಲ್ಲೇ ಬದಲಿ ನಿವೇಶನ ನೀಡಲಾಗಿದೆ. ಅವರು ಮಾಡಿರುವ ತಪ್ಪನ್ನು ನಮ್ಮ ಮೇಲೆ ಹೊರಿಸುವ ಕೆಲಸವನ್ನು ಬಿಜೆಪಿಯವರು ಮಾಡುತ್ತಿದ್ದು, ಈ ಆರೋಪಗಳಲ್ಲಿ ಹುರುಳಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಸುಳ್ಳು ಆರೋಪ ಮಾಡಿ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರಂತೆ ಜೈಲಿಗೆ ಕಳುಹಿಸುವ ಸಂಚು ಮಾಡಿರುವರೇ? ಅವರನ್ನು ಜೈಲಿಗೆ ಕಳುಹಿಸುವ ತಾಕತ್ತು ಇದೆಯೇ? ಎಂದು ಪ್ರಶ್ನಿಸಿದರು.

ಕಾಂಗ್ರೆಸ್‌ನಿಂದ ಹೈಡ್ರಾಮ

ಎಂಜಿನಿಯರುಗಳ ಸಂಸ್ಥೆ ಎದುರು ಪ್ರತಿಭಟನೆ ನಡೆಸುತ್ತಿದ್ದ ಕಾಂಗ್ರೆಸ್ ಮುಖಂಡರು ನಮ್ಮನ್ನು ಬಂಧಿಸಿ ಎಂದು ಪೊಲೀಸರ ವಿರುದ್ಧ ವಾಗ್ವಾದಕ್ಕಿಳಿದ ಘಟನೆ ನಡೆಯಿತು. ಬಿಜೆಪಿ ಪ್ರತಿಭಟನಾಕಾರರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಆದರೆ ನಮ್ಮನ್ನು ವಶಕ್ಕೆ ಪಡೆಯದೇ ನಮ್ಮನ್ನು ಅಪಮಾನ ಮಾಡುತ್ತಿದ್ದೀರಿ ಎಂದು ಪೊಲೀಸರ ವಿರುದ್ಧ ಹರಿಹಾಯ್ದರು. ಈ ವೇಳೆ ಪೊಲೀಸರು ಮತ್ತು ಕಾಂಗ್ರೆಸ್ ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿ ನಡೆಯಿತು. ಆದರೂ, ಪೊಲೀಸರು ಕೈ ಕಾರ್ಯಕರ್ತರನ್ನು ಬಂಧಿಸಲಿಲ್ಲ. ಕಡೆಗೆ ಪ್ರತಿಭಟನೆ ಕೊನೆಗೊಳಿಸಿ ಸ್ಥಳದಿಂದ ತೆರಳಿದರು.

ಮುಡಾ ಹಗರಣ ವಿರೋಧಿಸಿ ಬಿಜೆಪಿ ಹೋರಾಟ.

ಸಿಎಂ ರಾಜೀನಾಮೆಗೆ ಅಶೋಕ್ ಒತ್ತಾಯ

ಮೈಸೂರು: ಮುಡಾ ನಿವೇಶನ ಹಗರಣದ ತನಿಖೆಯನ್ನು ಸಿಬಿಐಗೆ ವಹಿಸಿ, ಸಿದ್ದರಾಮಯ್ಯ ಅವರು ರಾಜೀನಾಮೆ ನೀಡುವವರೆಗೆ ನಮ್ಮ ಹೋರಾಟ ನಿಲ್ಲುವುದಿಲ್ಲ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ತಿಳಿಸಿದರು. ಮಹಾರಾಜ ಕಾಲೇಜು ಮೈದಾನದ ಬಳಿ ಪ್ರತಿಭಟನಾ ಮೆರವಣಿಗೆ ಯಲ್ಲಿ ಭಾಗ ವಹಿಸಿ ಮಾತನಾಡಿದ ಅವರು, ಮುಡಾದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರವಾಗಿದೆ. ಹಗರಣದಲ್ಲಿ ಸಿದ್ದರಾಮಯ್ಯ ಅವರ ನೇರ ಪಾತ್ರವಿದೆ. ನಿವೇಶನಗಳನ್ನು ಕಾನೂನಾತ್ಮಕವಾಗಿ ಪಡೆದು ಕೊಂಡಿದ್ದೇವೆ ಎಂದು ಹೇಳಿ ಜನರ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ.

ಕಾನೂನುಬಾಹಿರವಾಗಿ ಸಿಎಂ ಕುಟುಂಬ ನಿವೇಶನ ಪಡೆದಿರುವುದರಿಂದ ರಾಜೀನಾಮೆ ಕೊಡುವತನಕ ಹೋರಾಟ ಮುಂದುವರಿಯಲಿದೆ. ವಾಲ್ಮೀಕಿ ನಿಗಮ,ಮುಡಾ ಹಗರಣವನ್ನು ವಿಧಾನಮಂಡಲದಲ್ಲಿ ಪ್ರಸ್ತಾಪಿಸುತ್ತೇವೆ ಎಂದು ಅಶೋಕ್ ಸ್ಪಷ್ಟಪಡಿಸಿದರು.

ಅಧಿಕಾರ ದುರುಪಯೋಗ: ಮಹಾರಾಜ ಕಾಲೇಜು ಮೈದಾನದ ಎದುರಿನಿಂದ ಮುಡಾಕ್ಕೆ ಮುತ್ತಿಗೆ ಹಾಕಲು ಹೊರಡುವ ಮುನ್ನ ಮಾತನಾಡಿ, ಮುಡಾ ಸ್ವಾಧೀನಪಡಿಸಿಕೊಂಡ ಜಮೀನಿನ ಬದಲಿಗೆ ಪಕ್ಕದಲ್ಲೇ ನಿವೇಶನ ಕೊಡಬೇಕು. ಅಥವಾ ಹೊಸದಾಗಿ ರಚನೆಯಾಗುವ ಬಡಾವಣೆಯಲ್ಲಿ ಕೊಡಬೇಕು. ಆದರೆ, ಈ ಸ್ವಾಧೀನಕ್ಕೂ ಮುನ್ನ ರಚನೆಯಾಗಿರುವ ಬಡಾವಣೆಯಲ್ಲಿ ನೀಡಿರುವುದರಿಂದ ಅಧಿಕಾರ ದುರುಪಯೋಗವಾಗಿದೆ ಎಂದು ದೂರಿದರು.

ರಾಜ್ಯದ ಖಜಾನೆ ಖಾಲಿ: ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಮೈಸೂರು ಸಿಎಂ ತವರು ಎಂದು ಪ್ರತಿಷ್ಠೆಯಾಗದೆ ಅಭಿವೃದ್ಧಿ ವಿಚಾರದಲ್ಲಿ ಪ್ರತಿಷ್ಠೆಯಾಗಬೇಕು. ರಾಜ್ಯದಲ್ಲಿ ಖಜಾನೆ ಖಾಲಿಯಾಗಿ ಅಭಿವೃದ್ಧಿ ಕಾರ್ಯಕ್ಕೆ ಹಣವಿಲ್ಲದಂತಾಗಿದೆ. ರಾಜ್ಯದಲ್ಲಿ ರಸ್ತೆಗಳ ಹಳ್ಳ, ಗುಂಡಿ ಮುಚ್ಚಲು ಹಣವಿಲ್ಲ. ಡೆಂಗ್ಯೂ ನಿಯಂತ್ರಿಸಲು ಯಾವುದೇ ಕ್ರಮಕೈಗೊಂಡಿಲ್ಲ. ಗ್ಯಾರಂಟಿ ಯೋಜನೆಗಳಿಗೆ ಹಣ ಇಲ್ಲದೆ ಸಾಲವನ್ನು ದುಪ್ಪಟ್ಟು ಮಾಡುವ ಸನ್ನಿವೇಶ ನಿರ್ಮಾಣವಾಗಿದೆ. ಇದರಿಂದಾಗಿ ಅಭಿವೃದ್ಧಿ ಕೆಲಸ ಕಾರ್ಯಗಳು ಕುಂಠಿತವಾಗಿವೆ ಎಂದ ಅವರು, ಸಿದ್ದರಾಮಯ್ಯ ತಕ್ಷಣವೇ ನೈತಿಕ ಹೊಣೆಹೊತ್ತು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಸಮಾಚಾರ ಸಣ್ಣದಲ್ಲ

ಜು. 30: ಕಲಬುರಗಿ ಮೇಯರ್ ಆಯ್ಕೆ

ಕಲಬುರಗಿ: ಕಲಬುರಗಿ ಮಹಾನಗರ ಪಾಲಿಕೆಯ 21ನೇ ಅವಧಿಯ ಮೇಯರ್ ಹಾಗೂ ಉಪ ಮೇಯರ್ ಸ್ಥಾನಗಳ ಅಧಿಕಾರಾವಧಿ ಮಾರ್ಚ್ 22ರಂದೇ ಮುಕ್ತಾಯವಾಗಿದ್ದು, 22ನೇ ಅವಧಿಯ ಚುನಾವಣೆಗೆ ಜು.30ಕ್ಕೆ ಮುಹೂರ್ತ ನಿಗದಿಯಾಗಿದೆ. ಈ ಮೂಲಕ ಕಲಬುರಗಿಯ ಪ್ರಥಮ ಪ್ರಜೆಯಾಗಿ ಯಾರು ಆಯ್ಕೆಯಾಗಲಿದ್ದಾರೆ ಎನ್ನುವ ಕುತೂಹಲ ಸಾರ್ವಜನಿಕರಲ್ಲಿ ಮೂಡಿಸಿದೆ. ಸರ್ಕಾರ ಈಗಾಗಲೇ ಹೊಸ ಮೀಸಲಾತಿ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಮೇಯರ್ ಸ್ಥಾನ ಎಸ್‌ಟಿ ಸಮುದಾಯಕ್ಕೆ ಮೀಸಲಾಗಿದೆ. ಉಪಮೇಯರ್ ಬಿಸಿಎ(2ಎ) ವರ್ಗಕ್ಕೆ ಸ್ಥಾನಕ್ಕೆ ಮೀಸಲಾಗಿದೆ.

ನಾಲೆಯಲ್ಲಿ ಕೊಚ್ಚಿಹೋದ ಬಾಲಕನ ಮೃತದೇಹ ಪತ್ತೆ

ಮಂಡ್ಯ: ತಾಲ್ಲೂಕಿನ ಹೊನಗಾನಹಳ್ಳಿ ಮಠ ಗ್ರಾಮದ ಬಳಿ ವಿಶ್ವೇಶ್ವರಯ್ಯ ನಾಲೆಯಲ್ಲಿ ಕೊಚ್ಚಿ ಹೋಗಿದ್ದ ನಾಲ್ಕು ವರ್ಷಗಳ ಬಾಲಕ ಸಬಿನ್‌ರಾಜ್ ಮೃತದೇಹ ಶುಕ್ರವಾರ ಬೆಳಿಗ್ಗೆ ಪತ್ತೆಯಾಗಿದೆ. ಗುರುವಾರ ಮಧ್ಯಾಹ್ನ ನಾಲೆಯ ಪಕ್ಕ ಆಟವಾಡುತ್ತಿದ್ದ ಬಾಲಕ ನಾಪತ್ತೆಯಾಗಿದ್ದ. ನಾಲೆಯಲ್ಲಿ ಕೊಚ್ಚಿ ಹೋದ ಶಂಕೆಯಿಂದ ಬಾಲಕನಿಗಾಗಿ ಅಗ್ನಿಶಾಮಕ ಸಿಬ್ಬಂದಿ ಮತ್ತು ಪೊಲೀಸರು ರಾತ್ರಿ 9ರವರೆಗೂ ಶೋಧನೆ ನಡೆಸಿದ್ದರು. ಶುಕ್ರವಾರ ಶವ ಪತ್ತೆಯಾಗಿದೆ.

ವಿದ್ಯುತ್ ಸ್ಪರ್ಶಕ್ಕೆ ವಿದ್ಯಾರ್ಥಿ ಬಲಿ

ಶಿವಮೊಗ್ಗ: ರಿಪ್ಪನ್‌ಪೇಟೆ ಗವಟೂರು ಗ್ರಾಮದ ಹಳಿಯೂರು ನಿವಾಸಿ ಶಂಕರಪ್ಪ ಎಂಬುವರ ಪುತ್ರ ಕಾರ್ತಿಕ್ (20) ಶುಕ್ರವಾರ ಬೆಳಗ್ಗೆ ವಿದ್ಯುತ್ ಸ್ಪರ್ಶದಿಂದ ಸಾವಿಗೀಡಾಗಿದ್ದಾರೆ.

ಕಾರ್ತಿಕ್ ರಿಪ್ಪನ್‌ಪೇಟೆ ಸರ್ಕಾರಿ ಪದವಿ ಕಾಲೇಜಿನಲ್ಲಿ ಪ್ರಥಮ ವರ್ಷದ ಬಿಬಿಎ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿದ್ದರು. ಬೆಳಿಗ್ಗೆ ಮನೆಯಂಗಳದ ಕೈತೋಟದಲ್ಲಿ ಕೆಲಸ ಮಾಡುವಾಗ ಕಾಡುಪ್ರಾಣಿಗಳ ಹಾವಳಿ ತಡೆಗೆ ಬೇಲಿಗೆ ಅಳವಡಿಸಿದ್ದ ವಿದ್ಯುತ್ ಸ್ಪರ್ಶದಿಂದ ಕಾರ್ತಿಕ್ ಗಂಭೀರವಾಗಿ ಗಾಯಗೊಂಡಿದ್ದರು. ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸ ಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ವಿದ್ಯಾರ್ಥಿ ಮೃತಪಟ್ಟಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

ಹಟ್ಟಿಗಣಿಯಲ್ಲಿ ಭೂ ಕುಸಿತ: ಕಾರ್ಮಿಕ ಸಾವು

ರಾಯಚೂರು: ಹಟ್ಟಿ ಚಿನ್ನದಗಣಿಯಲ್ಲಿ ಅದಿರು ಕಲ್ಲುಗಳು ಬಿದ್ದು ರಾತ್ರಿ ಪಾಳಿಯಲ್ಲಿದ್ದ ಕಾರ್ಮಿಕ ಮೌನೇಶ ಎಂಬ ಕಾರ್ಮಿಕ ಸಾವಿಗೀಡಾಗಿದ್ದು, ಇತರ ನಾಲ್ವರಿಗೆ ಗಂಭೀರ ಗಾಯಗಳಾದ ಘಟನೆ ಸಂಭವಿಸಿದೆ. ಮಲ್ಲಪ್ಪ ಶಾಫ್ಟ್‌ನ 2800 ಅಡಿ ಆಳದಲ್ಲಿ ಚಿನ್ನದ ಅದಿರು ಕಲ್ಲುಗಳು ಕುಸಿತಗೊಂಡು ಕಾರ್ಮಿಕ ಮೌನೇಶ ಮಾಯಮ್ಮ (48), ಮೃತಪಟ್ಟಿದ್ದಾನೆ.

ವಾಲ್ಮೀಕಿ-ಮುಡಾ ಪ್ರಕರಣ ಹೋಲಿಕೆ ಬೇಡ: ಸತೀಶ ಜಾರಕಿಹೊಳಿ

ತಪ್ಪು ಮಾಡಿದ್ದರೆ ಒಪ್ಪಿಕೊಳ್ಳಲಿ

ಬೆಳಗಾವಿ: ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ತಪ್ಪು ಮಾಡಿದ್ದರೆ ಒಪ್ಪಿಕೊಳ್ಳಬೇಕು. ಅದು ಅಲ್ಲಿಗೇ ಮುಗಿದುಹೋಗುತ್ತದೆ. ಒಂದು ಸುಳ್ಳು ಮುಚ್ಚಿಡಲು ಮತ್ತಷ್ಟು ಸುಳ್ಳು ಹೇಳಬಾರದು ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದ್ದಾರೆ.

ಶುಕ್ರವಾರ ಪ್ರತಿಕ್ರಿಯೆ ನೀಡಿದ ಅವರು, ಈ ಪ್ರಕರಣ ರಾಜಕೀಯ ಸ್ವರೂಪ ಪಡೆದಿದೆ ಎಂದು ಈಗಲೇ ಹೇಳಲು ಆಗುವುದಿಲ್ಲ. ಹಾಗೆಂದು ರಾಜಕೀಯವೇ ಇಲ್ಲ ಎಂದೂ ನಿರ್ಧರಿಸಲು ಆಗುತ್ತಿಲ್ಲ. ತನಿಖೆ ನಡೆಯುತ್ತಿದೆ. ದಾಖಲೆಗಳೇ ಇದರ ಸತ್ಯಾಸತ್ಯತೆ ಹೇಳಬೇಕು ಎಂದರು. ಸಿದ್ದರಾಮಯ್ಯ ರಾಜೀನಾಮೆಗೆ ಬಿಜೆಪಿ ಒತ್ತಾಯಿಸುತ್ತಿರುವುದನ್ನು ತಳ್ಳಿಹಾಕಿದ ಜಾರಕಿಹೊಳಿ, ಈ ಪ್ರಕರಣದಿಂದ ಮುಖ್ಯಮಂತ್ರಿ ಸ್ಥಾನಕ್ಕೆ ಆತಂಕವಿಲ್ಲ. ನಮ್ಮ ಇಲಾಖೆ ನಾವು ನೋಡಿಕೊಳ್ಳಬೇಕಾಗುತ್ತದೆ. ಅದಕ್ಕೆ ನಾವೇ ಜವಾಬ್ದಾರರು. ಹಾಗಾಗಿ, ಸಿ.ಎಂ ಕುರ್ಚಿಗೂ ಇದಕ್ಕೂ ಸಂಬಂಧವೇ ಇಲ್ಲ ಎಂದು ಹೇಳಿದರು.

ಮುಡಾ ಹಗರಣ ಹಿನ್ನೆಲೆಯಲ್ಲಿ ಬಿಜೆಪಿಯಿಂದ ಮೈಸೂರು ಚಲೋ ಹೋರಾಟಕ್ಕೆ ಮುಂದಾಗಿದ್ದಾರೆ. ಅದರಿಂದ ಏನೂ ಆಗುವುದಿಲ್ಲ. ಅಂಥ ಬಹಳಷ್ಟು ಪ್ರಕರಣಗಳು ಆಗಿವೆ. ಬೆಳಗಾವಿಯಲ್ಲೂ ಅಂಥದ್ದೇ ಪ್ರಕರಣ ನಾವು ನೋಡಿದ್ದೇವೆ. ಹಾಗಾಗಿ, ಮುಡಾ ಹಾಗೂ ವಾಲ್ಮೀಕಿ ನಿಗಮ ಎರಡನ್ನೂ ಹೋಲಿಸಲು ಆಗುವುದಿಲ್ಲ. ಮುಡಾ ಪ್ರಕರಣ ರಾಜಕೀಯಪ್ರೇರಿತ ಎಂದು ಖಂಡಿತವಾಗಿ ಹೇಳಬಹುದು ಎಂದು ಸಚಿವರು ತಿರುಗೇಟು ಕೊಟ್ಟರು.

ನಮಗೂ ಮುಜುಗರ

ನಾಗೇಂದ್ರ ವಿಚಾರದಲ್ಲಿ ರಾಜ್ಯ ಸರ್ಕಾರಕ್ಕೆ ಮುಜುಗರ ಆಗಿಲ್ಲವೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸತೀಶ್, ಅವರು ತಪ್ಪು ಮಾಡಿದ್ದರೆ ಖಂಡಿತ ನಮಗೂ ಮುಜುಗರ ಆಗುತ್ತದೆ. ಇದು ಇನ್ನೂ ತನಿಖಾ ಹಂತದಲ್ಲಿದೆ. ಸಚಿವರು, ಶಾಸಕರು ಇದರಲ್ಲಿ ಭಾಗಿಯಾಗಿದ್ದರೆ ಸರ್ಕಾರಕ್ಕೆ ಅದರಿಂದ ಕಳಂಕ ಎಂದರು.

ಹತಾಶ ಸಿದ್ದರಾಮಯ್ಯರಿಂದ ಜಾತಿ ಅಸ್ತ್ರ ಪ್ರಯೋಗ

ದಾವಣಗೆರೆ: ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಭಾಗಿಯಾಗಿರುವುದರಿಂದ ಕೂಡಲೇ ರಾಜೀನಾಮೆ ನೀಡಬೇಕು ಎಂದು ಶಾಸಕ ಬಿ.ಪಿ. ಹರೀಶ್ ಒತ್ತಾಯಿಸಿದರು. ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಜಿಲ್ಲಾಧಿಕಾರಿ ಕಚೇರಿ ಎದುರು ಹೋರಾಟ ನಡೆಸಲಾಗುವುದು. ದಾವಣಗೆರೆ ಜಿಲ್ಲಾ ಬಿಜೆಪಿಯಿಂದಲೂ ರಾಜೀನಾಮೆಗೆ ಒತ್ತಾಯಿಸಲಾಗುವುದು ಎಂದರು. ಮುಡಾದಿಂದ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರ 3.16 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡಿರುವುದು 1992ರಲ್ಲಿ. ಪಾರ್ವತಮ್ಮ ಅವರ ಸಹೋದರ ಜಮೀನು ತೆಗೆದುಕೊಂಡಿರುವುದು 2004ರಲ್ಲಿ. ಈಗಾಗಲೇ ಸ್ವಾಧೀನ ಪಡಿಸಿಕೊಂಡಿರುವ ಜಮೀನನ್ನು ಪಾರ್ವತಮ್ಮ ಅವರ ಸಹೋದರ ಹೇಗೆ ಖರೀದಿಸಲು ಸಾಧ್ಯ ಎಂದು ಪ್ರಶ್ನಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಂದಿಗೂ ಸೋಲೊಪ್ಪಿದವರಲ್ಲ, ಹತಾಶರಾಗಿದ್ದಾರೆ. ಹಾಗಾಗಿ ಅಂತಿಮವಾಗಿ ಜಾತಿ ಅಸ್ತ್ರ ಪ್ರಯೋಗಿಸಿದ್ದಾರೆ ಎಂದು ಹರೀಶ್ ದೂರಿದರು.

ಮುಖ್ಯಮಂತ್ರಿ ಸಲಹೆಗಾರ ರಾಯರೆಡ್ಡಿಗೆ ಸಚಿವ ಶಿವರಾಜ ತಂಗಡಗಿ ತಿರುಗೇಟು

ಗ್ಯಾರಂಟಿ ಜೊತೆಗೆ ಅಭಿವೃದ್ಧಿ ಕೆಲಸಕ್ಕೂ ಹಣ ಇದೆ

ಕೊಪ್ಪಳ: ರಾಜ್ಯ ಸರಕಾರ ಗ್ಯಾರಂಟಿ ಯೋಜನೆ ನೀಡುತ್ತಲೇ, ರಾಜ್ಯದ ಇತರೇ ಅಭಿವೃದ್ಧಿಗೆ ಅನುದಾನ ನೀಡುತ್ತಿದೆ. ರಾಜ್ಯಾದ್ಯಂತ ಸಾಕಷ್ಟು ಅಭಿವೃದ್ಧಿ ಯೋಜನೆಗೆ ಚಾಲನೆ ದೊರೆತಿದ್ದು, ಹಿರಿಯರಾದ ಬಸವರಾಜ ರಾಯರೆಡ್ಡಿ ಅವರು ಯಾವ ಅರ್ಥದಲ್ಲಿ ಹೇಳಿದ್ದಾರೋ ನನಗೆ ಗೊತ್ತಿಲ್ಲ ಎಂದು ಸಚಿವ ಶಿವರಾಜ ತಂಗಡಗಿ ತಿರುಗೇಟು ನೀಡಿದ್ದಾರೆ.

ಕಾರಟಗಿಯಲ್ಲಿ ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿದ ತಂಗಡಗಿ, ಗ್ಯಾರಂಟಿಯಿಂದ ಇತರ ಅಭಿವೃದ್ಧಿ ಕೆಲಸಗಳಿಗೆ ಅನುದಾನ ಇಲ್ಲದಾಗಿದೆ ಎಂಬ ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಹೇಳಿಕೆಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದರು.

ಗಂಗಾವತಿ- ಕಾರಟಗಿ ಪಟ್ಟಣಕ್ಕೆ ಕುಡಿವ ನೀರು, ಕುಕನೂರು- ಯಲಬುರ್ಗಾ ಪಟ್ಟಣಗಳಿಗೆ ಕುಡಿವ ನೀರಿನ ಯೋಜನೆ ಸೇರಿ ಸಾಕಷ್ಟು ಅಭಿವೃದ್ಧಿ ಕೆಲಸಗಳು ಕೊಪ್ಪಳ ಜಿಲ್ಲೆಯಲ್ಲಿ ನಡೆದಿವೆ. ಅದರಂತೆ ರಾಜ್ಯಾದ್ಯಂತ ಎಲ್ಲ ಶಾಸಕರಿಗೂ ಸಿಎಂ ಅನುದಾನ ನೀಡಿದ್ದಾರೆ.

ಸರಕಾರದಲ್ಲಿ ಹಣಕಾಸಿನ ಯಾವುದೇ ತೊಂದರೆ ಇಲ್ಲ. ಗ್ಯಾರಂಟಿಯೇ ಬೇರೆ ಅಭಿವೃದ್ಧಿಯೇ ಬೇರೆ. ಗ್ಯಾರಂಟಿ ಯೋಜನೆಗಳು ರಾಜ್ಯದ ಅಭಿವೃದ್ಧಿ ಮೇಲೆ ಪರಿಣಾಮ ಬೀರುತ್ತಿಲ್ಲ ಎನ್ನುವ ಮೂಲಕ ರಾಯರೆಡ್ಡಿ ಅವರ ಹೇಳಿಕೆಯನ್ನು ತಳ್ಳಿಹಾಕಿದರು.

ವರ್ಗಾವಣೆ ದಂಧೆ ಆಗಿಲ್ಲ: ನನ್ನ ಜಿಲ್ಲೆಯಲ್ಲಂತೂ ಅಧಿಕಾರಿಗಳ ವರ್ಗಾವಣೆ ದಂಧೆ ಆಗಿಲ್ಲ. ಸಿಎಂ ಸಿದ್ದರಾಮಯ್ಯ ದಂಧೆ ಮಾಡಲು ಬಿಡುವುದಿಲ್ಲ. ಈ ಮಾತನ್ನು ರಾಯರೆಡ್ಡಿ ಯಾವ ಅರ್ಥದಲ್ಲಿ ಹೇಳಿದ್ದಾರೆ ಎಂಬುದನ್ನು ಅವರನ್ನೇ ಕೇಳಬೇಕು. ಉತ್ತಮ ಆಡಳಿತ ನೀಡಲು, ಸಹಜವಾಗಿ ಕೊಪ್ಪಳ ಜಿಲ್ಲೆಯಲ್ಲೂ ಅಧಿಕಾರಿಗಳ ವರ್ಗಾವಣೆ ನಡೆದಿದೆ. ಆದರೆ, ನಾನು ತಾಲೂಕು ಮಟ್ಟದ ಅಧಿಕಾರಿಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ ಎಂದು ಸಚಿವ ತಂಗಡಗಿ ಪರೋಕ್ಷವಾಗಿ ಬಸವರಾಜ ರಾಯರಡ್ಡಿ ಮಾತಿಗೆ ಟಾಂಗ್ ನೀಡಿದರು.

ಪೊಲೀಸರಿಂದ ಬಾಲಕಿ ರಕ್ಷಣೆ, ಪೋಷಕರ ಸುಪರ್ದಿಗೆ

ತುಮಕೂರು: ಸಾಲ ತೀರಿಸಲಾಗದೆ ಅದಕ್ಕೆ ಬದಲಾಗಿ ಅಕ್ಕನ ಮಗಳನ್ನೆ ಮಾರಾಟ ಮಾಡಿದ್ದು, ತುಮಕೂರಿನ ಬಾಲಕಿಯನ್ನು ಆಂಧ್ರಪ್ರದೇಶದ ಹಿಂದೂಪುರದಲ್ಲಿ ನಗರ ಠಾಣೆಯ ಪೊಲೀಸರು ರಕ್ಷಿಸಿ, ನಗರಕ್ಕೆ ಕರೆತಂದಿದ್ದಾರೆ. ನಗರದ ಹೊರವಲಯ ದಿಬ್ಬೂರಿನ ಚೌಡಮ್ಮ ಎಂಬುವರ 11 ವರ್ಷದ ಪುತ್ರಿಯನ್ನು ರಕ್ಷಿಸಿ ಕರೆತಂದಿರುವ ಪೊಲೀಸರು ನಗರದ ಬಾಲ ಮಂದಿರದ ಸುಪರ್ದಿಗೆ ಒಪ್ಪಿಸಿದ್ದಾರೆ.

ಆಂಧ್ರಪ್ರದೇಶದ ಹಿಂದೂಪುರದಲ್ಲಿರುವ ಸಹೋದರಿ ಸುಜಾತ ಮನೆಗೆ ಚೌಡಮ್ಮ ಕೆಲ ದಿನಗಳ ಹಿಂದೆ ಮಗಳನ್ನು ಕಳಿಸಿದ್ದರು. ಶ್ರೀರಾಮುಲು ಎಂಬುವರಿಗೆ ಕೊಡಬೇಕಿದ್ದ ₹35 ಸಾವಿರ ಸಾಲದ ಬದಲಾಗಿ ಸುಜಾತ ಸಹೋದರಿಯ ಮಗಳನ್ನು ಮಾರಾಟ ಮಾಡಿದ್ದಳು.

ಒತ್ತೆಯಾಳಾಗಿದ್ದ ಬಾಲಕಿ: ಬಾಲಕಿಯನ್ನು ಶ್ರೀರಾಮುಲು ಬಾತುಕೋಳಿ ಮೇಯಿಸಲು ಒತ್ತೆಯಾಳಾಗಿ ಇರಿಸಿಕೊಂಡಿದ್ದ. ವಿಷಯ ತಿಳಿದ ಚೌಡಮ್ಮ ಹಿಂದೂಪುರಕ್ಕೆ ತೆರಳಿ ಮಗಳನ್ನು ತನ್ನೊಂದಿಗೆ ಕಳುಹಿಸುವಂತೆ ಬೇಡಿಕೊಂಡಿದ್ದರು. ಆದರೆ, ಶ್ರೀರಾಮುಲು ಒಪ್ಪಿರಲಿಲ್ಲ. ಚೌಡಮ್ಮ ಮಗಳನ್ನು ರಕ್ಷಿಸುವಂತೆ, ಜಿಲ್ಲಾ ಕಾರ್ಮಿಕ ಅಧಿಕಾರಿ ತೇಜಾವತಿ ಅವರಿಗೆ ಮನವಿ ಸಲ್ಲಿಸಿದ್ದರು. ಕೂಡಲೇ ಕಾರ್ಮಿಕ ಅಧಿಕಾರಿ ಈ ಸಂಬಂಧ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಪತ್ರ ಬರೆದು ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದರು.

ಆಷಾಢ ಶುಕ್ರವಾರದ ಅಂಗವಾಗಿ ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಅಪಾರ ಸಂಖ್ಯೆಯ ಜನರು ಭೇಟಿನೀಡಿ ದೇವಿಯ ದರ್ಶನ ಪಡೆದರು.

ಇ.ಡಿ ದುರ್ಬಳಕೆ ಯತ್ನ ಸಲ್ಲ, ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ: ಎಂಬಿ ಪಾಟೀಲ್ | ಬಿಜೆಪಿಯಿಂದ ಬೆಂಕಿ ಹಚ್ಚುವ ಕೆಲಸ

ವಾಲ್ಮೀಕಿ ಹಗರಣ: ನಿಷ್ಪಕ್ಷಪಾತ ತನಿಖೆಯಾಗಲಿ

ವಿಜಯಪುರ: ವಾಲ್ಮೀಕಿ ನಿಗಮದ ವಿಚಾರ ಈಗಾಗಲೇ ಎಸ್ ಐಟಿ ತನಿಖೆ ಮಾಡುತ್ತಿದೆ. ಇ.ಡಿ. ತನ್ನ ಕೆಲಸ ಮಾಡಲಿ ತಪ್ಪಿಲ್ಲ. ನಿಷ್ಪಕ್ಷಪಾತವಾಗಿ ತನಿಖೆ ಮಾಡಲಿ. ಆದರೆ ರಾಜಕೀಯ ಒತ್ತಡದಿಂದ ತನಿಖೆ ಆಗಬಾರದು. ನಾಗೇಂದ್ರ ಅವರ ಪಾತ್ರ ಇದೆಯೋ ಇಲ್ಲವೋ ಎಂಬ ಬಗ್ಗೆ ನಿಷ್ಪಕ್ಷಪಾತ ತನಿಖೆ ಆಗಬೇಕು. ಅದರಲ್ಲಿ ರಾಜಕೀಯ ಆಗಬಾರದು ಎಂದು ಬೃಹತ್ ಕೈಗಾರಿಕಾ ಸಚಿವ ಡಾ.ಎಂ.ಬಿ.ಪಾಟೀಲ್ ಆಗ್ರಹಿಸಿದ್ದಾರೆ.

ಮಾಜಿ ಸಚಿವ ನಾಗೇಂದ್ರ, ಇ.ಡಿ ವಶಕ್ಕೆ ವಿಚಾರವಾಗಿ ವಿಜಯಪುರದಲ್ಲಿ ಸಚಿವ ಎಂ.ಬಿ.ಪಾಟೀಲ್ ಸುದ್ದಿಗಾರರೊಂದಿಗೆ ಮಾತನಾಡಿದರು. ಬೇರೆ ರಾಜ್ಯಗಳಲ್ಲಿಯೂ ಹಣ ಸಂದಾಯವಾದ ಕಾರಣ ಇ.ಡಿ ತನಿಖೆ ನಡೆಸುತ್ತಿದೆ. ಎಸ್ ಐಟಿ ಮೇಲೆ ನಮಗೆ ಸಂಪೂರ್ಣ ನಂಬಿಕೆ ಇದೆ. ಯಾರೇ ತಪ್ಪಿತಸ್ಥರಿದ್ದರೆ ಶಿಕ್ಷೆ ಆಗಲಿ, ಆದರೆ ಯಾವುದೇ ಸಾಕ್ಷಿ ಇಲ್ಲದಿದ್ದರೆ, ಷಡ್ಯಂತ್ರದಿಂದ ಇ.ಡಿ.ಯನ್ನು ದುರುಪಯೋಗ ಪಡಿಸಿಕೊಳ್ಳುವ ಕೆಲಸ ಆಗಬಾರದು. ರಾಜಕೀಯ ಒತ್ತಡದಿಂದ ಆಗಬಾರದು ಎಂದರು.

ರಾಯರೆಡ್ಡಿ ಹೇಳಿಕೆ ಸರಿಯಲ್ಲ: ಗ್ಯಾರಂಟಿ ಯೋಜನೆಗಳಿಂದ ಯಾವುದೇ ಅಭಿವೃದ್ಧಿ ಕೆಲಸ ಆಗುತ್ತಿಲ್ಲ ಎಂಬ ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಹೇಳಿಕೆಯನ್ನು ಅಲ್ಲಗಳೆದ ಸಚಿವ ಪಾಟೀಲ್, ಅಂಥದ್ದು ಯಾವುದೂ ಇಲ್ಲ. ಅದೇನೇ ಇದ್ದರೂ ರಾಯರೆಡ್ಡಿಯವರ ಜೊತೆಗೆ ಸಿಎಂ ಮಾತನಾಡುತ್ತಾರೆ. ರಾಯರೆಡ್ಡಿ ಏನು ಮಾತನಾಡಿದ್ದಾರೆ ನನಗೆ ಪೂರ್ಣ ಗೊತ್ತಿಲ್ಲ. ಸಿಎಂ ಚರ್ಚೆ ಮಾಡುತ್ತಾರೆ ಎಂದರು.

ಯತ್ನಾಳ ಸಂಸದರೇ..?: ಇನ್ನು ಗ್ಯಾರಂಟಿ ಯೋಜನೆಯಿಂದ ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತ, ಈ ಕುರಿತು ಕ್ರಮಕ್ಕೆ ಆಗ್ರಹಿಸಿ ಕೇಂದ್ರ ಹಣಕಾಸು ಸಚಿವರಿಗೆ ಶಾಸಕ ಯತ್ನಾಳ್ ಪತ್ರ ಬರೆದ ವಿಚಾರಕ್ಕೆ ಸಚಿವ ಎಂ.ಬಿ.ಪಾಟೀಲ್ ಪ್ರತಿಕ್ರಿಯಿಸಿ, ಯತ್ನಾಳ ಸಂಸದರೇ..? ಅವರು ಶಾಸಕರು. ನಮ್ಮ ರಾಜ್ಯ ಸರ್ಕಾರ ಏನೂ ತೀರ್ಮಾನ ಮಾಡಬೇಕೋ ಮಾಡುತ್ತದೆ. ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾದ ಹಣ ಬರಲಿ ಎಂದು ಯತ್ನಾಳಗೆ ಹೇಳಿ. ಕಳೆದ ಬಾರಿ ಜಿಎಸ್‌ಟಿ ಹಣವನ್ನು ಕೋರ್ಟ್‌ಗೆ ಹೋಗಿ ಪಡೆದುಕೊಳ್ಳುವ ಪರಿಸ್ಥಿತಿ ಬಂತು. ಬರ ಪರಿಹಾರಕ್ಕೆ ಕೇಳಿದಷ್ಟು ಹಣ ಬರಲಿಲ್ಲ. ಕೇಳಿದ್ದಕ್ಕಿಂತಲೂ ಕಡಿಮೆ ಮೊತ್ತ ಕೊಟ್ಟರು. ಯತ್ನಾಳ ಅವರು ಕೇಂದ್ರದ ಮೇಲೆ ಒತ್ತಡ ಹಾಕಿ ರಾಜ್ಯಕ್ಕೆ ಹಣ ಕೊಡಿಸಲು ಹೇಳಿ ಎಂದು ತಿರುಗೇಟು ಕೊಟ್ಟರು.

ಮುಡಾ ಕಾನೂನು ಜಾರಿಯಾಗಿದ್ದು ಬಿಜೆಪಿಯಿಂದ

ಇನ್ನೂ ಮುಡಾ ಹಗರಣ ವಿಚಾರವಾಗಿ ಸಿಎಂ ಸ್ಪಷ್ಟನೆ ನೀಡಿದ್ದಾರೆ. ಬಿಜೆಪಿ ಸರ್ಕಾರ ಇದ್ದಾಗ ಈ ಕಾನೂನು ಜಾರಿ ಮಾಡಿದ್ದು. ಈ ರೀತಿಯ ಯೋಜನೆ ಮಾಡಿದ್ದು. ಅದರ ಪ್ರಕಾರ ಮಾಡಲಾಗಿದೆ ಎಂದು ಸಿಎಂ ಹೇಳಿದ್ದಾರೆ. ಈ ಪ್ರಕರಣವನ್ನು ಕಾಂಗ್ರೆಸ್ ನವರೇ ಹೊರತಂದಿದ್ದು ಎಂಬ ವಿಚಾರಕ್ಕೆ, ಸುಮ್ಮನೇ ಬೆಂಕಿ ಹಚ್ಚುವ ಕೆಲಸ ಎಂದು ಸಚಿವ ಎಂ ಬಿ ಪಾಟೀಲ್ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು.

ಅನ್ನಭಾಗ್ಯಕ್ಕೆ ಕೇಂದ್ರ ಅಕ್ಕಿ ಕೊಡಲಿಲ್ಲ. ಆದರೆ ಅಕ್ಕಿಯನ್ನು ಹರಾಜು ಮಾಡಿದರು. ಹಣ ಕೊಟ್ಟರೂ ಅಕ್ಕಿ ಕೊಡಲಿಲ್ಲ. ಇದಕ್ಕೆಲ್ಲ ಯತ್ನಾಳ ಉತ್ತರಿಸಲಿ.
- ಎಂ.ಬಿ ಪಾಟೀಲ್, ಸಚಿವ

ಭೀಮಾ ನದಿಗೆ ಇಳಿದ ಮಹಿಳೆ ನೀರುಪಾಲು

ಕಲಬುರಗಿ: ಸ್ನಾನಕ್ಕೆಂದು ಭೀಮಾ ನದಿಗಿಳಿದ ಮಹಿಳೆಯೊಬ್ಬರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ಜಿಲ್ಲೆಯ ದೇವಲಗಾಣಗಾಪುರದಲ್ಲಿ ವರದಿಯಾಗಿದೆ.

ಮೃತ ಮಹಿಳೆಯನ್ನು ಮಹಾರಾಷ್ಟ್ರದ ಪುಣೆ ಆಲಂಡಿ ನಿವಾಸಿ ಸಾಹಿಲಿ ವಿಶಾಲ್ (24) ಎಂದು ಗುರುತಿಸಲಾಗಿದೆ. ಈ ಮಹಿಳೆ ತನ್ನ ತಂದೆ- ತಾಯಿ ಮತ್ತು ಇಬ್ಬರು ಮಕ್ಕಳೊಂದಿಗೆ ಜು. 7ರಂದು ಶ್ರೀ ದತ್ತಾತ್ರೇಯನ ದೇವಸ್ಥಾನದ ದರ್ಶನಕ್ಕೆ ಆಗಮಿಸಿದ್ದರು. ಗುರುವಾರ ಬೆಳಗ್ಗೆ ನದಿದಡದಲ್ಲಿ ಸ್ನಾನ ಮಾಡುವಾಗ ಆಕಸ್ಮಿಕವಾಗಿ ಜಾರಿ ಮುಳುಗಿ ಮೃತಪಟ್ಟಿದ್ದಾರೆ ಎಂದು ತಂದೆ ಯಶವಂತ ನೇವಶಿ ತಿಳಿಸಿದ್ದಾರೆ. ಮಹಿಳೆಯ ಮೃತ ದೇಹಕ್ಕಾಗಿ ಪಿಎಸ್‌ಐ ರಾಹುಲ್ ಪವಾಡಿ, ಸಿಬ್ಬಂದಿ ಸಂಗಣ್ಣ ನೇತೃತ್ವದಲ್ಲಿ ಮೀನುಗಾರರ ತಂಡದಿಂದ ತೀವ್ರ ಶೋಧ ಕಾರ್ಯ ನಡೆಸಿದರೂ, ಮಹಿಳೆಯ ಮೃತದೇಹ ಪತ್ತೆಯಾಗಿರಲಿಲ್ಲ. ಬಳಿಕ ಅಗ್ನಿಶಾಮಕ ದಳದ ಸಿಬ್ಬಂದಿ ಪತ್ತೆಹಚ್ಚಿದ್ದಾರೆ.ದೇವಲಗಾಣಗಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

{ಮುಖ್ಯಮಂತ್ರಿ ಚಂದ್ರು} ಎಎಪಿ ರಾಜ್ಯಾಧ್ಯಕ್ಷ

ರಾಜ್ಯದ ಜನರ ತೆರಿಗೆ ಹಣವನ್ನು ಕೇವಲ ಬೆಂಗಳೂರನ್ನು ವಿಸ್ತರಿಸಲು ವಿನಿಯೋಗಿಸಿದರೆ ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ, ಮಧ್ಯ ಕರ್ನಾಟಕ ಭಾಗದ ಜನರು ಏನು ಮಾಡಬೇಕು.

ವಿಶ್ವವಾಣಿ

ಸಂಪಾದಕೀಯ

ಸಂಕಷ್ಟ ಸೂತ್ರವೊಂದೇ ಪರಿಹಾರ

ಕಳೆದ ವರ್ಷವಿಡೀ ಕಾವೇರಿ ನದಿ ನೀರಿನ ವಿಚಾರದಲ್ಲಿ ಕರ್ನಾಟಕ ರಾಜ್ಯವನ್ನು ಕಟಕಟೆಯಲ್ಲಿ ನಿಲ್ಲಿಸಿದ ತಮಿಳುನಾಡು ಈ ಬಾರಿ ಮುಂಗಾರು ಆರಂಭದಲ್ಲಿಯೇ ತನ್ನ ಪಾಲಿನ ನೀರಿಗಾಗಿ ಕ್ಯಾತೆ ತೆಗೆದಿದೆ. ತಮಿಳುನಾಡಿನ ಒತ್ತಡ ತಂತ್ರದ ಫಲವಾಗಿ ಕಳೆದ ವರ್ಷ ಕಾವೇರಿ ಕೊಳ್ಳದ ನಮ್ಮ ರೈತರ ಹಿತಾಸಕ್ತಿಯನ್ನು ಬಲಿಗೊಟ್ಟು ನೀರು ಬಿಡಲೇಬೇಕಾಯಿತು. ಮೂರು ಬೆಳೆಯ ಕನಸು ಕಂಡಿದ್ದ ಮೈಸೂರು, ಮಂಡ್ಯ ಭಾಗದ ರೈತರು ಎರಡು ಬೆಳೆಯನ್ನೂ ಸರಿಯಾಗಿ ಬೆಳೆಯಲಾಗಲಿಲ್ಲ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಮುಂಗಾರು ಆಶಾದಾಯಕವಾಗಿದೆ. ಕಳೆದ ಒಂದೂವರೆ ತಿಂಗಳಿನಿಂದ ಮಳೆಯಾಗುತ್ತಿದೆ. ಆದರೆ ಈ ತನಕ ರಾಜ್ಯದ ಯಾವ ಜಲಾಶಯವೂ ಪೂರ್ತಿಯಾಗಿ ತುಂಬಿಲ್ಲ. ಕಾವೇರಿ ಜಲಾಯನ ಪ್ರದೇಶದಲ್ಲಿ ಕೆಆರ್‌ಎಸ್ ಮತ್ತು ಹೇಮಾವತಿ ಜಲಾಶಯಗಳ ನೀರಿನ ಮಟ್ಟ ಇನ್ನೂ ಅರ್ಧದಷ್ಟಿದೆ. ಈ ವರ್ಷ ಜುಲೈ ನಂತರ ಮಳೆ ಪ್ರಮಾಣ ಕಡಿಮೆಯಾಗಲಿದೆ ಎಂಬ ಹವಾಮಾನ ಇಲಾಖೆ ವರದಿ ರಾಜ್ಯದ ಪಾಲಿಗೆ ಆತಂಕ ತಂದೊಡ್ಡಿದೆ. . ರೈತರ ಬೆಳೆ, ಕುಡಿಯುವ ನೀರು, ಕೈಗಾರಿಕೆ ಉದ್ದೇಶ ಸೇರಿ ಕಾವೇರಿ ಆಶ್ರಿತ ಜಿಲ್ಲೆಗಳಿಗೆ ವಾರ್ಷಿಕ ಒಟ್ಟು 106 ಟಿಎಂಸಿ ನೀರು ಅಗತ್ಯವಿದೆ. ಆದರೆ ನಮ್ಮ ಬಳಿ ಸದ್ಯ ಇರುವುದು ಕೇವಲ 60 ಟಿಎಂಸಿ ನೀರು. ಇದರ ನಡುವೆಯೇ ರೈತರ ಮುಂಗಾರು ಬೆಳೆಗಳಿಗೆ ಮತ್ತು ಕುಡಿಯುವ ನೀರಿನ ಅವಶ್ಯಕತೆಗಳಿಗೆ ನೀರು ಬಿಡಬೇಕಾಗಿದೆ. ತಮಿಳುನಾಡಿಗೆ ಆರಂಭದಲ್ಲಿಯೇ 20 ಟಿಎಂಸಿ ನೀರನ್ನು ಬಿಟ್ಟರೆ ನಮ್ಮ ರೈತರ ಬೆಳೆಗಳಿಗೆ ನೀರು ಸಿಗುವುದು ಕಷ್ಟ. ಸದ್ಯ ತಮಿಳುನಾಡಿನ ಮೆಟ್ಟೂರು, ಭವಾನಿ ಜಲಾಶಯಗಳಲ್ಲಿ 25 ಟಿಎಂಸಿ ನೀರಿದ್ದು ಆ ರಾಜ್ಯಕ್ಕೆ ನೀರಿನ ತುರ್ತು ಇಲ್ಲ. ಆದರೆ ತನ್ನ ಪಾಲಿನ ನೀರನ್ನು ಆಯಾ ತಿಂಗಳು ಪಡೆದೇ ತೀರಬೇಕೆಂಬ ಹಠ ತಮಿಳುನಾಡಿನ ನಾಯಕರದ್ದು. ಬರ ಪರಿಸ್ಥಿತಿಯಲ್ಲಿ ಎರಡೂ ರಾಜ್ಯಗಳು ಸಂಕಷ್ಟ ಸೂತ್ರದ ಪ್ರಕಾರ ನೀರನ್ನು ಹಂಚಿಕೊಳ್ಳಬೇಕೆಂದು ಅಂತಿಮ ತೀರ್ಪಿನಲ್ಲಿ ತಿಳಿಸಿರುವ ಸುಪ್ರೀಂ ಕೋರ್ಟ್ ತಾನೇ ಈ ಕೆಲಸ ಮಾಡಿದ್ದರೆ ರಾಜ್ಯದ ಭಾರ ಕಡಿಮೆಯಾಗಿರುತ್ತಿತ್ತು. ಇದೀಗ ಕಾವೇರಿ ನೀರು ನಿಯಂತ್ರಣ ಸಮಿತಿ ಇಲ್ಲವೇ ಕೇಂದ್ರ ಸರಕಾರದ ಈ ಜವಾಬ್ದಾರಿ ನಿರ್ವಹಿಸಬೇಕಿದೆ. ರಾಜ್ಯ ಸರಕಾರ ಈ ಸಂಬಂಧ ಒತ್ತಡ ಹೇರುವ ಕೆಲಸ ಮಾಡಬೇಕು. ತಮಿಳುನಾಡಿನ ಒತ್ತಡ ತಂತ್ರಕ್ಕೆ ಬಲಿಯಾಗಬಾರದು.

ಸೊಂಪಾದಕೀಯ

ದುಬಾರಿ ಅಬಕಾರಿ

ಸರಕಾರಗಳ ತೆರಿಗೆ ಹಣ ಕಡಿಮೆ ಆದ ಕೂಡ್ಲೇ ಅವುಗಳ ಕಣ್ಣು ಬೀಳೋದು ಮದ್ಯದ ಬೆಲೆ ಮೇಲೆ. ಎಷ್ಟು ರೇಟ್ ಜಾಸ್ತಿ ಮಾಡಿದರೂ ಎಣ್ಣೆಗೆಂಪು ಕಣ್ಣಲ್ಲೇ, ಕಮಕ್ ಕಿಮಕ್ ಎನ್ನದೆ ಉದರಕ್ಕೆ ಎಣ್ಣೆ ಸೇರಿಸಿ ಕಿಕ್ ಏರಿಸಿಕೊಳ್ಳುವ, ಸರಕಾರವನ್ನು ಉದ್ಧಾರ ಮಾಡುವ ಮದ್ಯಪ್ರಿಯರ ಉದಾರ ನೀತಿ ಇದಕ್ಕೆ ಕಾರಣ. ಇದರ ಪರಿಣಾಮವಾಗಿ ಈಗ ಕರ್ನಾಟಕ ರಾಜ್ಯ, ದೇಶದಲ್ಲೇ ಮದ್ಯಕ್ಕೆ ಅತಿ ಹೆಚ್ಚು ಬೆಲೆ ಹೊಂದಿದ ರಾಜ್ಯ ಎಂಬ ಕುಖ್ಯಾತಿಗೆ ಒಳಗಾಗಿದೆ. ಕುಡಿಯಲಾರದೇ ಇರುವವರು ಮಾಡಿರುವ ಒಂದು ಸರ್ವೆ ಪ್ರಕಾರ ಗೋವಾದಲ್ಲಿ 100 ರುಪಾಯಿಗೆ ಸಿಗೋ ಮದ್ಯಕ್ಕೆ ಕರ್ನಾಟಕದಲ್ಲಿ 513 ರುಪಾಯಿ ಕೊಡಬೇಕು. ಹಾಗೆ ನೋಡಿದರೆ ಕರ್ನಾಟಕ ದುಬಾರಿ ಅಬಕಾರಿ ವಿಷಯದಲ್ಲಿ ಬರೀ ಮೊದಲನೇ ಸ್ಥಾನದಲ್ಲಿ ಇಲ್ಲ. ಎರಡನೇ ಸ್ಥಾನದಲ್ಲಿರುವ ತೆಲಂಗಾಣದಲ್ಲಿ ಮದ್ಯದ ಬೆಲೆ ಕರ್ನಾಟಕಕ್ಕಿಂತ ಶೇಕಡಾ 50 ರಷ್ಟು ಕಮ್ಮಿ ಇದೆ. ಹಾಗಾಗಿ ಕರ್ನಾಟಕ ಸರಕಾರ ಮದ್ಯ ಪ್ರಿಯರನ್ನು ಟೇಕನ್ ಫಾರ್ ಗ್ರಾಂಟೆಡ್ ಅಂತ ಮಾಡಿಕೊಂಡಿರುವುದು ಸ್ಪಷ್ಟವಾಗಿದೆ ಎನ್ನಬಹುದು. ಮದ್ಯದ ಬೆಲೆಯಲ್ಲಿ ನಂಬರ್ ಒನ್ ಸ್ಥಾನ ಅಲಂಕರಿಸಿರುವ ಬೆಳವಣಿಗೆಯ ಮಧ್ಯದಲ್ಲಿ ನಮ್ಮ ಅಬಕಾರಿ ಸಚಿವ ತಿಮ್ಮಾಪುರ ಅವರು ರಾಜ್ಯದ ಜನಸಂಖ್ಯೆಗೆ ತಕ್ಕಂತೆ ಮದ್ಯದ ಅಂಗಡಿಗಳು ಇಲ್ಲ ಎಂದಿದ್ದಾರೆ. ಗ್ರಾಮದ ಜನ ನಗರಕ್ಕೆ ಬಂದು ದುಬಾರಿ ಬೆಲೆಗೆ ಮದ್ಯ ಖರೀದಿ ಮಾಡೋದನ್ನು ತಪ್ಪಿಸಬೇಕಿದೆ ಅಂತಲೂ ಅಬಕಾರಿ ಸಚಿವರು ಹೇಳಿದ್ದಾರೆ. ಒಟ್ಟಿನಲ್ಲಿ ಮದ್ಯದ ವಿಷಯದಲ್ಲಿ ಆದರೂ ಕರ್ನಾಟಕ ನಂಬರ್ ಒನ್ ಆಗಿ ಮದ್ಯ ಕರ್ನಾಟಕ ಇಡೀ ಇಂಡಿಯಾದಲ್ಲೇ ಹೆಸರು ಮಾಡಿದೆ. ಆದರೆ, ದೊಡ್ಡ ಪಾರ್ಟಿ ಮಾಡುವ ಯೋಜನೆ ಇದ್ದವರು, ಸ್ವಲ್ಪ ಖರ್ಚು ಮಾಡಿ ಪಕ್ಕದಲ್ಲಿರುವ ಗೋವಾಕ್ಕಷ್ಟೇ ಅಲ್ಲ, ತೆಲಂಗಾಣಕ್ಕೆ ಹೋದ್ರೂ ಕಡಿಮೆ ಖರ್ಚಲ್ಲಿ ಕುಡಿದು ತೇಲುಗಣ್ಣಲ್ಲಿ ವಾಪಸ್ಸು ಬರಬಹುದು ಅಂತ ಯೋಚನೆ ಮಾಡೋ ಹಾಗೂ ಆಗಿದೆ. ವಿಶೇಷ ಅಂದ್ರೆ, ರಾಜ್ಯದಲ್ಲಿ ಮದ್ಯ ಇಷ್ಟೊಂದು ದುಬಾರಿ ಆಗಿ ಮದ್ಯಪ್ರಿಯರು ಎಣ್ಣೆಗಾಯಿ ನೀರುಗಾಯಿ' ಆಗಿದ್ದರೂ, ಹುಟ್ಟಿದರೇ ಕನ್ನಡ ನಾಡಲ್ ಮಾತ್ರ ಹುಟ್ಟಬಾರದು ಅಂತ ಕರ್ನಾಟಕದ ಮದ್ಯಪ್ರಿಯರು ಮಾತ್ರ ಇದರ ಬಗ್ಗೆ ಇನ್ನೂ ಅಪಸ್ವರ ಎತ್ತಿಲ್ಲ. ಬಹುಶಃ, ಎಣ್ಣೆ ರೇಟು ಜಾಸ್ತಿ ಆಗಿ ಕುಡುಕರ ಕುಡಿಯುವ ಸ್ಪಿರಿಟ್' ಮಾತ್ರ ಒಂದು ಪೆಗ್ಗಿನಷ್ಟು ಕಮ್ಮಿ ಆಗಿ ರೇಟಿನ ಜೊತೆ ಎಣ್ಣೆ ಏಟು ಕೂಡಾ ಕಮ್ಮಿ ಆಗಿರಬಹುದೇನೋ.

ಸಂಪಾದಕರ ಸದ್ಯಶೋಧನೆ

ಹೀಗಿದ್ದರು ಪಾವೆಂ ಆಚಾರ್ಯರು

ಪಾವೆಂ ಆಚಾರ್ಯರು ಮೂರು ತಿಂಗಳ ಸಂಚಿಕೆಗಳನ್ನು ಮುಂಚಿತವಾಗಿಯೇ ಸಿದ್ಧಪಡಿಸಿ ಇಟ್ಟಿರುತ್ತಿದ್ದರು. ಬಿಡುವಿನ ವೇಳೆಯಲ್ಲಿ ಸಿದ್ಧಪಡಿಸಿದ ಸಂಚಿಕೆಗಳ ಲೇಖನಗಳನ್ನು ಪದೇ ಪದೆ ಓದಿ, ದೋಷರಹಿತವಾಗಿರುವುದನ್ನು ಖಚಿತಪಡಿಸಿಕೊಳ್ಳುತ್ತಿದ್ದರು. ಯಾವ ಲೇಖಕರೊಂದಿಗೆ ಯಾವ ಲೇಖನ ಬರೆಯಿಸಬಹುದು ಎಂಬುದು ಅವರಿಗೆ ಗೊತ್ತಿತ್ತು. ಅವರು ಒಂದಷ್ಟು ಲೇಖಕರನ್ನು ಸೇರಿಸಿ ಬಳಗ ಕಟ್ಟಲಿಲ್ಲ. ಎಲ್ಲರಿಂದಲೂ ಬರೆಯಿಸಿದರು. ಡೆಡ್ ಲೈನ್ ಮಿತಿಯಲ್ಲಿ ಯಾರೂ ಸಿಗದಿದ್ದಾಗ, ತಾವೇ ಬರೆಯುತ್ತಿದ್ದರು. ತಮ್ಮ ಆಪ್ತ ಸಹೋದ್ಯೋಗಿಯಾದ ಜಿ.ಜಿ.ಹೆಗಡೆ ತಕ್ಷಣದ ನೆರವಿಗೆ ಬರುತ್ತಿದ್ದರು. ಐವತ್ತು ವರ್ಷಗಳ ಹಿಂದಿನ ಸಂಚಿಕೆ ಸಿಕ್ಕರೂ ಎದೆಗವುಚಿಕೊಂಡು ಈಗಲೂ ಓದಬಹುದು. ಅದು ನಿಜಕ್ಕೂ ಕಾಲಾತೀತ. ಪಾವೆಂ ಅವರಿಗೆ ಎಂಟು ಮಕ್ಕಳಿದ್ದರೂ, ಅವರ ನಿಜವಾದ ಸಂಸಾರ ಮಾತ್ರ 'ಕಸ್ತೂರಿ'ಯೇ ಆಗಿತ್ತು! ತಮ್ಮ ಜೀವಿತದ ಅತ್ಯಂತ ಮಹತ್ವದ ದಿನಗಳನ್ನು ಅವರು 'ಕಸ್ತೂರಿ'ಗಾಗಿಯೇ ಧಾರೆಯೆರೆದರು. ಅಕ್ಷರಶಃ 'ಕಸ್ತೂರಿ'ಯ ಒಂದೊಂದು ಸಂಚಿಕೆಯನ್ನೂ ಕರುಳ ಕುಡಿಯಂತೆ ಬೆಳೆಸಿದರು. ಐವತ್ತು ವರ್ಷಗಳ ಹಿಂದಿನ ಆ ದಿನಗಳಲ್ಲಿ ಹುಬ್ಬಳ್ಳಿಯಲ್ಲಿದ್ದರೂ ಆಚಾರ್ಯರು ಎಲ್ಲ ವಿಷಯಗಳ ಬಗ್ಗೆಯೂ ಅಪ್‌ಡೇಟ್ ಆಗಿರುತ್ತಿದ್ದರು. ಅವರ ಮೇಜಿನ ಮೇಲೆ ಪ್ರಮುಖ ಪತ್ರಿಕೆ ಮತ್ತು ನಿಯತಕಾಲಿಕಗಳಿರುತ್ತಿದ್ದವು. ಧರ್ಮಯುಗ, ಇಲ್ಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯ, ನವನೀತ್, ಕಾದಂಬಿನಿ, ನ್ಯಾಷನಲ್ ಜಿಯಾಗ್ರಫಿಕ್, ಭವಾನ್ಸ್ ಜರ್ನಲ್ ಮುಂತಾದ ಪತ್ರಿಕೆಗಳಿರುತ್ತಿದ್ದವು. ಅವುಗಳಲ್ಲಿನ ಉತ್ತಮ ಲೇಖನಗಳನ್ನು ಓದಿ ಅವರೇ ಅನುವಾದ ಮಾಡುತ್ತಿದ್ದರು. ಆಚಾರ್ಯರ ಜತೆ ಯಾವತ್ತೂ ಕನ್ನಡ-ಕನ್ನಡ, ಇಂಗ್ಲಿಷ್-ಕನ್ನಡ, ಸಂಸ್ಕೃತ-ಕನ್ನಡ, ಹಿಂದಿ-ಕನ್ನಡ ಪದಕೋಶ ಇರಲೇಬೇಕಿತ್ತು. ಯಾವ ಹೊಸ ಪದವನ್ನು ಕಂಡರೂ ಅವರು ಅದನ್ನು ಅರಗಿಸಿ, ಒಲಿಸಿಕೊಳ್ಳುವ ತನಕ ಬಿಡುತ್ತಿರಲಿಲ್ಲ. ಆಚಾರ್ಯರು ಕಚೇರಿಯಲ್ಲಿದ್ದಾಗ ಸದಾ ಅಧ್ಯಯನ ಮಗ್ನರಾಗಿರುತ್ತಿದ್ದರು. ರಂಗನಾಥ ದಿವಾಕರರು ಆಚಾರ್ಯರಿಗೆಂದು ಸೆಕೆಂಡ್ ಹ್ಯಾಂಡ್ 'ಎನ್ಸೈಕ್ಲೋಪಿಡಿಯಾ ಬ್ರಿಟಾನಿಕಾ'ದ ಮೂವತ್ತು ಸಂಪುಟಗಳನ್ನು ತಂದುಕೊಟ್ಟಿದ್ದರು. ಆಚಾರ್ಯರು ಆ ಮೂವತ್ತು ಪುಸ್ತಕಗಳನ್ನು ಅದೆಷ್ಟು ಬಾರಿ ರೆಫರ್ ಮಾಡಿದ್ದರೆಂದರೆ, ಅದರ ರಟ್ಟು ಸವೆದು, ಕೆಲವು ಹಾಳೆಗಳ ತುದಿ ಸುಕ್ಕುಗಟ್ಟುವಷ್ಟು. ಆಚಾರ್ಯರಿಗೆ ಪದಗಳ ವ್ಯುತ್ಪತ್ತಿಯಲ್ಲಿ ವಿಶೇಷವಾದ ಕಾಳಜಿ. ಅವರ 'ಪದಾರ್ಥ ಚಿಂತಾಮಣಿ'ಯೇ ಇದಕ್ಕೆ ಸಾಕ್ಷಿ. ಒಮ್ಮೆ ಆಚಾರ್ಯರಿಗೆ ಉರ್ದು-ಮರಾಠಿ ಪದಕೋಶ ಪ್ರಕಟವಾಗಿದೆಯೆಂದು ತಿಳಿಯಿತು. ಅದನ್ನು ಅವರು ತಮ್ಮ ಮರಾಠಿ ಸ್ನೇಹಿತರಿಂದ ತರಿಸಿಕೊಂಡರು. ಆಚಾರ್ಯರ ಹತ್ತಿರ ಒಂದು ಮರಾಠಿ-ಕನ್ನಡ ಪದಕೋಶವಿತ್ತು. ಅವರಿಗೆ ಉರ್ದುವಿನ ಒಂದು ಪದದ ಅರ್ಥವನ್ನು ಕನ್ನಡದಲ್ಲಿ ತಿಳಿಯಬೇಕೆಂದರೆ, ಆ ಎರಡೂ ಪದಕೋಶಗಳನ್ನು ರೆಫರ್ ಮಾಡುತ್ತಿದ್ದರು. ಅಷ್ಟಾಗಿಯೂ ಸಮಾಧಾನವಾಗದಿದ್ದರೆ, ತಮಗೆ ಪರಿಚಿತ ಭಾಷಾ ವಿದ್ವಾಂಸರ ಬಳಿ ಕೇಳುತ್ತಿದ್ದರು. ಆಚಾರ್ಯರ ಈ ಪದ ಗೀಳಿನ ಬಗ್ಗೆ ಹುಬ್ಬಳ್ಳಿ 'ಸಂಯುಕ್ತ ಕರ್ನಾಟಕ' ಕಚೇರಿಯಲ್ಲಿ ಕೆಲವರು ತಮಾಷೆ ಮಾಡುತ್ತಿದ್ದರು. 'ಆಚಾರ್ಯರ ತಲೆಯಲ್ಲಿ ಯಾವುದೋ ಪದ ಸಿಕ್ಕಿಹಾಕಿಕೊಂಡಿರಬೇಕು. ಅದರ ಅರ್ಥವನ್ನು ಹೊರತೆಗೆಯಲು ದಿನವಿಡೀ ಪ್ರಯಾಸ ಪಡುತ್ತಿದ್ದಾರೆ' ಎಂದು ಆಡಿಕೊಳ್ಳುತ್ತಿದ್ದರು. ಆ ಮಾತಿನಲ್ಲಿ ಅಭಿಮಾನ ಮತ್ತು ಮೆಚ್ಚುಗೆಯೂ ಇರುತ್ತಿತ್ತು. ಹಾಗೆ ಅವರನ್ನು 'ಸರ್ವಜ್ಞ' ಎಂದೂ ಅಲ್ಲಿನ ಸುದ್ದಿಮನೆಯಲ್ಲಿ ಕರೆಯುತ್ತಿದ್ದರು. ಆ ಮಾತಿನಲ್ಲೂ ಕುಹಕ, ಹೊಟ್ಟೆಕಿಚ್ಚು ಮತ್ತು ಪ್ರಶಂಸೆ ಎಲ್ಲವೂ ಅಡಕವಾಗಿರುತ್ತಿತ್ತು. ಆಚಾರ್ಯರಿಗೆ ಕನ್ನಡ, ಸಂಸ್ಕೃತ, ಹಿಂದಿ, ಇಂಗ್ಲಿಷ್, ಉರ್ದು, ಮರಾಠಿ ಭಾಷೆಗಳು ಗೊತ್ತಿದ್ದವು. ಹಿಂದಿಯಲ್ಲಿ ಲೇಖನ ಬರೆಯುವಷ್ಟು ಮತ್ತು ಕವನ ರಚಿಸುವಷ್ಟು ಅವರಿಗೆ ಆ ಭಾಷೆಯ ಮೇಲೆ ಹಿಡಿತವಿತ್ತು. ಅರವತ್ತಾರು ವರ್ಷಗಳ ಹಿಂದೆ, ಇಂಗ್ಲಿಷಿನ 'ರೀಡರ್ಸ್ ಡೈಜೆಸ್ಟ್'ಗೆ ಪ್ರತಿರೂಪವಾಗಿ ಕನ್ನಡದಲ್ಲಿ 'ಕಸ್ತೂರಿ'ಯಂಥ ಪತ್ರಿಕೆಯನ್ನು ರೂಪಿಸಿದ ಪಾವೆಂ ಆಚಾರ್ಯರ ಪ್ರಯೋಗ ವಿನೂತನವಾದುದು. ಅವರು ಅಂದು ಆರಂಭಿಸಿದ 'ಕಸ್ತೂರಿ', ಇಂದಿಗೂ ಜನಮಾನಸದ ಪ್ರೀತಿಗೆ ಪಾತ್ರವಾಗಿದೆ ಮತ್ತು ತನ್ನ ಘನತೆ-ಗೌರವವನ್ನು ಉಳಿಸಿಕೊಂಡಿದೆ.

ಮೋದಿ ಪುಟಿನ್ ಭೇಟಿ ರಾಜತಾಂತ್ರಿಕ ಸಂದೇಶ

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಸೋಮವಾರ ರಾತ್ರಿ ಅವರ ಅಧಿಕೃತ ನಿವಾಸದಲ್ಲಿ ಖಾಸಗಿಯಾಗಿ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಸಂವಾದ ನಡೆಸಿದರು. ಈ ಸಂದರ್ಭದಲ್ಲಿ ಪುಟಿನ್ ಮೋದಿಯವರು ಭಾರತದ ಪ್ರಗತಿಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟ ನಾಯಕನೆಂದು ಶ್ಲಾಘಿಸಿದರು. ಮೋದಿಯವರ ರಷ್ಯಾ ಭೇಟಿಯ ಸಂದರ್ಭದಲ್ಲಿ ಉಭಯ ನಾಯಕರು ಮಾಸ್ಕೊದ ಹೊರಗೆ ಅನೌಪಚಾರಿಕ ಸಭೆ ನಡೆಸುತ್ತಿದ್ದಂತೆ, ವ್ಲಾಡಿಮಿರ್ ಪುಟಿನ್ ಪ್ರಧಾನಿಗೆ 'ನೀವು ಪ್ರಧಾನಿಯಾಗಿ ಮರು ಆಯ್ಕೆಯಾದ ಮೇಲೆ ನಾನು ನಿಮ್ಮನ್ನು ಅಭಿನಂದಿಸಲು ಬಯಸುತ್ತೇನೆ. ಇದು ಆಕಸ್ಮಿಕವಲ್ಲ, ಹಲವು ವರ್ಷಗಳಿಂದ ನಿಮ್ಮ ಕೆಲಸದ ಫಲಿತಾಂಶ ನಿಮಗೆ ಮತ್ತೊಮ್ಮೆ ಗೆಲುವನ್ನು ತಂದುಕೊಟ್ಟಿದೆ. ನಿಮಗೆ ದೇಶದ ಪರವಾದ ನಿಮ್ಮದೇ ವಿಚಾರಗಳಿವೆ. ನೀವು ಜಗತ್ತಿನ ಶಕ್ತಿಯುತ ವ್ಯಕ್ತಿಯಾಗಿದ್ದೀರಿ, ಭಾರತ ಮತ್ತು ಭಾರತೀಯರ ಹಿತಾಸಕ್ತಿಗಳಲ್ಲಿ ನಿಮ್ಮ ಶ್ರದ್ಧೆ ದೇಶವು ಉತ್ತಮ ಫಲಿತಾಂಶಗಳನ್ನು ಸಾಧಿಸಲು ಸಾಧ್ಯವಾಗುತ್ತಿದೆ. ಫಲಿತಾಂಶ ಸ್ಪಷ್ಟವಾಗಿದೆ' ಎಂದು ಹೇಳಿದರು. ಇದೇ ವೇಳೆ ಭಾರತವು ನಿಮ್ಮ ಅವಧಿಯಲ್ಲಿಯೇ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಲಿದೆ ಎಂದು ಪುಟಿನ್ ಹೇಳಿರುವುದನ್ನು ರಷ್ಯಾದ ಸರಕಾರಿ ಸ್ವಾಮ್ಯದ ಟಾಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ. ಮೋದಿ ಅವರು ತಮ್ಮ ಇಡೀ ಜೀವನವನ್ನು ಭಾರತದ ಜನರಿಗೆ ಮುಡಿಪಾಗಿಟ್ಟಿದ್ದಾರೆ ಎಂದು ರಷ್ಯಾ ಅಧ್ಯಕ್ಷ ಪುಟಿನ್ ಹೇಳಿದ್ದಾರೆ. ಇದಕ್ಕೆ ಪ್ರತಿಕ್ರಿಸಿರುವ ಮೋದಿ ಇತ್ತೀಚಿನ ಸಾರ್ವತ್ರಿಕ ಚುನಾವಣೆಗಳ ಕುರಿತು ಮಾತನಾಡಿ, ಭಾರತದ ಜನರು ತಾಯ್ನಾಡಿಗೆ ಸೇವೆ ಸಲ್ಲಿಸಲು ಮತ್ತೊಮ್ಮೆ ನನಗೆ ಅವಕಾಶ ನೀಡಿದ್ದಾರೆ ಎಂದು ಹೇಳಿದ್ದಾರೆ.

ಆದರೆ ಅಮೆರಿಕ ದೇಶ ಭಾರತ ಸರಕಾರದ ರಷ್ಯಾ ಜತೆಗಿನ ಸಂಬಂಧದ ಬಗ್ಗೆ ತನ್ನ ಕಳವಳವನ್ನು ವ್ಯಕ್ತಪಡಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರ ರಷ್ಯಾ ಭೇಟಿಯ ಕುರಿತು ಭಾರತದೊಂದಿಗೆ ಸಂಪರ್ಕದಲ್ಲಿರುವುದಾಗಿ ಅಮೆರಿಕ ಮಂಗಳವಾರ ಹೇಳಿದೆ ಮತ್ತು ಮೋದಿಯವರೊಟ್ಟಿಗಿನ ಸಂಭಾಷಣೆಯ ವಿಷಯವನ್ನು ಖಾಸಗಿಯಾಗಿಟ್ಟುಕೊಂಡು, ರಷ್ಯಾದೊಂದಿಗಿನ ಭಾರತದ ಸಂಬಂಧದ ಬಗ್ಗೆ ತನ್ನ ಕಳವಳವನ್ನು ಪುನರುಚ್ಚರಿಸಿದೆ. ಉಕ್ರೇನ್‌ನಲ್ಲಿ 'ಶಾಶ್ವತ ಶಾಂತಿ' ಪ್ರಯತ್ನಗಳನ್ನು ಬೆಂಬಲಿಸುವಂತೆ ದೆಹಲಿಯನ್ನು ಅಮೆರಿಕ ಒತ್ತಾಯಿಸಿದೆ. ಭಾರತವು ತನ್ನ ಎಲ್ಲಾ ಹೇಳಿಕೆಗಳಲ್ಲಿ ಸತತವಾಗಿ ಉಕ್ರೇನ್‌ನ ಪ್ರಾದೇಶಿಕ ಸಮಗ್ರತೆ ಮತ್ತು ಅದರ ಸಾರ್ವಭೌಮತ್ವವನ್ನು ಬೆಂಬಲಿಸಿದೆ ಹಾಗೂ ಉಕ್ರೇನ್‌ನಲ್ಲಿ ನಡೆಯುತ್ತಿರುವ ಯುದ್ಧವನ್ನು ಕೊನೆಗೊಳಿಸಲು ರಾಜತಾಂತ್ರಿಕತೆ ಮತ್ತು ಮಾತುಕತೆಗೆ ಕರೆ ನೀಡಿದೆ. ಮಾಸ್ಕೋದಲ್ಲಿ ಮೋದಿಯವರು ಉಕ್ರೇನ್ ಯುದ್ಧದಲ್ಲಿ ಉಂಟಾದ ಹಿಂಸಾಚಾರ ಮತ್ತು ದುಃಖದ ಬಗ್ಗೆ ತಮ್ಮ ನೋವನ್ನು ವ್ಯಕ್ತಪಡಿಸಿದ್ದಾರೆ. ಭಾರತವು ಸತತವಾಗಿ ಉಕ್ರೇನ್ ರಷ್ಯಾ ಯುದ್ಧದಲ್ಲಿ ಶಾಂತಿಯನ್ನೇ ಪ್ರತಿಪಾದಿಸುತ್ತಾ ಬಂದಿದೆ.

ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ತಮ್ಮ ಎರಡು ದಿನಗಳ ಮಾಸ್ಕೋ ಭೇಟಿಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರಿಗೆ ನೀಡಿದ ರಾಜಮರ್ಯಾದೆಯಿಂದ ಚೀನಾ ದೇಶಕ್ಕೆ ಎದೆಯುರಿ ಉಂಟುಮಾಡಿದೆ. ಉಕ್ರೇನ್ ಯುದ್ಧದ ನಂತರ ರಷ್ಯಾ ದೇಶ ಪಾಶ್ಚಿಮಾತ್ಯ ದೇಶಗಳಿಂದ ಉಂಟಾದಂತಹ ಒತ್ತಡವನ್ನು ಎದುರಿಸಲು ಚೀನಾದ ಬೆಂಬಲ ಕೋರಿತ್ತು. ಆದರೆ ಯುದ್ಧದ ಸಮಯದಲ್ಲಿ ಪ್ರಧಾನಿ ಮೋದಿಯವರ ರಷ್ಯಾ ಭೇಟಿ ಕೇವಲ ಚೀನಾ ಮಾತ್ರವಲ್ಲ, ಭಾರತವೂ ಕೂಡ ರಷ್ಯಾ ಜತೆಗಿನ ತನ್ನ ದಶಕಗಳ ಸಂಬಂಧವನ್ನು ಮುಂದುವರೆಸಲಿದೆ ಎಂಬ ಸ್ಪಷ್ಟ ಸಂದೇಶ ನೀಡಿದೆ. ಇದರೊಂದಿಗೆ 1983ರ ನಂತರ ಆಸ್ಟ್ರೀಯಾಕ್ಕೆ ಭಾರತದ ಪ್ರಧಾನಿಯ ಮೊದಲ ಭೇಟಿ, ಹೈಟೆಕ್ ಮೂಲಸೌಕರ್ಯ ತಂತ್ರಜ್ಞಾನಗಳು ಮತ್ತು ಚಳಿಗಾಲದ ಉಪಕರಣಗಳನ್ನು ಸಂಗ್ರಹಿಸಲು ಭಾರತವು ನ್ಯಾಟೋ ಗುಂಪಿನಲ್ಲಿಲ್ಲದ ದೇಶವನ್ನು ತನ್ನೊಡನೆ ತೊಡಗಿಸಿಕೊಳ್ಳಲು ಸಿದ್ಧವಿದೆ ಎಂಬುದರ ಸಂಕೇತವಾಗಿದೆ.

ಪಾಶ್ಚಿಮಾತ್ಯ ಮಾಧ್ಯಮಗಳು ಮೋದಿ ಮತ್ತು ಪುಟಿನ್ ಅಪ್ಪುಗೆಯನ್ನು ಭಾರತದ ಪಾಶ್ಚಿಮಾತ್ಯ ಸ್ನೇಹಿತರ ನಿರಾಕರಣೆ ಎಂದು ಲೇಬಲ್ ಮಾಡುವ ಬದಲು, ಮಾಸ್ಕೋದಲ್ಲಿ ನಡೆದ ದ್ವಿಪಕ್ಷೀಯ ಸಭೆಯನ್ನು ಭಾರತ ಮತ್ತು ರಷ್ಯಾ ದೇಶದ ನಡುವಿನ ದಶಕಗಳ ಹಿಂದಿನ ಪರಂಪರೆಯ ಹಿನ್ನೆಲೆಯಲ್ಲಿ ನೋಡಬೇಕು. ವಿಶೇಷವಾಗಿ ಪಶ್ಚಿಮದ ದೇಶಗಳು ಪಾಕಿಸ್ತಾನದಲ್ಲಿ ಪ್ರಜಾಸತ್ತಾತ್ಮಕ ನಾಯಕತ್ವಕ್ಕಿಂತ ಸರ್ವಾಧಿಕಾರಿಗಳನ್ನು ಹೆಚ್ಚಾಗಿ ಬೆಂಬಲಿಸುತ್ತಾ ಬಂದಿರುವ ಇತಿಹಾಸವಿದೆ. 1965 ಮತ್ತು 1971 ರ ಪಾಕಿಸ್ತಾನದ ವಿರುದ್ಧದ ಯುದ್ಧಗಳಲ್ಲಿ, 1980–2000 ರ ನಡುವಿನ ಖಲಿಸ್ತಾನ್ ಮತ್ತು ಕಾಶ್ಮೀರ ಪ್ರತ್ಯೇಕತಾವಾದಿಗಳ ಭಯೋತ್ಪಾದನೆಯಲ್ಲಿ, ಭಾರತದ ಪರವಾದ ಪಶ್ಚಿಮದ ಬೆಂಬಲ ಕಡಿಮೆಯಿತ್ತು. ಕೆನಡಾ ತನ್ನ ನೆಲದಲ್ಲಿ ಖಲೀಸ್ತಾನಿ ಹೋರಾಟಗಾರರಿಗೆ ನಿರಂತರವಾಗಿ ಬೆಂಬಲ ನೀಡುತ್ತಾ ಬಂದಿದೆ. ಕೆನಡಾ ನೆಲದಲ್ಲಿ ಭಾರತದ ಸಾರ್ವಭೌಮತ್ವಕ್ಕೆ ಧಕ್ಕೆ ತರುವಂತಹ ಹೋರಾಟಗಳು ನಡೆದಾಗ ಭಾರತ ಖಂಡಿಸಿದೆ. ಖಾಲಿಸ್ತಾನಿ ಬೆಂಬಲಿಗ 'ಪನ್ನು' ಬಹಿರಂಗವಾಗಿ ಭಾರತದ ಸಂಸತ್ತಿನ ಮೇಲೆ ದಾಳಿ ನಡೆಸುವುದಾಗಿ ಹೇಳಿದರೂ ಸಹ ಕೆನಡಾ ಸರಕಾರ ಆತನ ಮೇಲೆ ಕ್ರಮ ಕೈಗೊಳ್ಳುವುದಿಲ್ಲ. ಭಾರತವು ಸ್ವಾವಲಂಬಿಯಾಗುವ ನಿಟ್ಟಿನಲ್ಲಿ ಪ್ರಧಾನಿ ಮೋದಿಯವರು 'ಆತ್ಮನಿರ್ಭರ ಭಾರತ'ದ ಯೋಜನೆಗೆ ಸಂಪೂರ್ಣವಾಗಿ ಬದ್ಧರಾಗಿದ್ದಾರೆ ಮತ್ತು ಅಗ್ನಿವೀರ್ ಯೋಜನೆಯು 2047ರ ವಿಕಸಿತ ಭಾರತಕ್ಕೆ ರಾಷ್ಟ್ರೀಯತೆಯ ಅಡಿಪಾಯವನ್ನು ಹಾಕುತ್ತದೆ ಎಂದು ಬಲವಾಗಿ ನಂಬಿದ್ದಾರೆ. ಇದನ್ನರಿಯದ ಪ್ರತಿಪಕ್ಷಗಳು ಭಾರತದ ಭದ್ರತೆಯ ದೃಷ್ಟಿಯಿಂದ ಜಾರಿಗೆ ತಂದಂತಹ ಯೋಜನೆಯನ್ನು ಟೀಕಿಸುವಲ್ಲಿ ನಿರತವಾಗಿವೆ. ಪ್ರಧಾನಿ ಮೋದಿಯವರು ಭಾರತದ ಹಿತಾಸಕ್ತಿಯಲ್ಲಿ ದಿಟ್ಟ ರಾಜತಾಂತ್ರಿಕ ಕ್ರಮಗಳನ್ನು ಅನುಸರಿಸುತ್ತಿರುವ ಸಂದರ್ಭದಲ್ಲಿ, ಭಾರತ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಲು ಭಾರತದ ಅಗತ್ಯತೆಗಳಿಗೆ ತಕ್ಕಂತೆ ಭಾರತೀಯ ರಾಜತಾಂತ್ರಿಕತೆಯನ್ನು ಮುಂದುವರೆಸಬೇಕಿದೆ. ಪಾಶ್ಚಿಮಾತ್ಯ ದೇಶಗಳೊಂದಿಗೆ ಉತ್ತಮ ಸಂಬಂಧದೊಂದಿಗೆ, ಹಳೆಯ ಮಿತ್ರ ರಷ್ಯಾದ ಸಂಬಂಧವನ್ನೂ ಗಟ್ಟಿಗೊಳಿಸಬೇಕಿದೆ.

ಭಾರತದ ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ, ನೇಪಾಳ, ಬಾಂಗ್ಲಾದೇಶ, ಶ್ರೀಲಂಕಾ ಮತ್ತು ಮಾಲ್ಡೀವ್‌ಗಳ ಮೇಲೆ ಚೀನಾ ಆರ್ಥಿಕ ಮತ್ತು ಮಿಲಿಟರಿ ಹತೋಟಿ ಹೊಂದಿರುವುದರಿಂದ, ಅದರ ವಿರುದ್ಧ ಆರ್ಥಿಕ ಮತ್ತು ಮಿಲಿಟರಿ ಸಾಮರ್ಥ್ಯಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಮೋದಿ ಸರಕಾರ ಹೆಚ್ಚಿನ ಗಮನ ವಹಿಸಿದೆ. ಇದರ ಹೊರತಾಗಿ, ಕಾಶ್ಮೀರ, ಪಂಜಾಬ್ ಮತ್ತು ದೇಶದ ಇತರ ರಾಜ್ಯಗಳಲ್ಲಿ ಚೀನಾ ಮತ್ತು ಆಂತರಿಕ ಭಾರತ ವಿರೋಧಿಗಳ ಮಾಹಿತಿ ಸಂಗ್ರಹಿಸುವ ನಿಟ್ಟಿನಲ್ಲಿ ಆಂತರಿಕ ಭದ್ರತೆ ಮತ್ತು ಗುಪ್ತಚರವನ್ನು ಬಲಪಡಿಸಲಾಗುತ್ತಿದೆ. ಆದರೆ ಇದನ್ನರಿಯದ ಭಾರತದ ಪ್ರತಿಪಕ್ಷಗಳು ಮೋದಿಯವರ ವಿದೇಶಿ ನಾಯಕರ ಭೇಟಿಯನ್ನು ರಾಜಕೀಯವನ್ನಾಗಿಸಿ ಸಮಯ ವ್ಯರ್ಥ ಮಾಡುತ್ತಿವೆ.

ಭಾರತದ ವಿದೇಶಾಂಗ ಇಲಾಖೆ ಮತ್ತು ಪ್ರಧಾನಿ ಮೋದಿಯವರು ರಷ್ಯಾವನ್ನು ಭಾರತದ ಅತ್ಯಂತ ವಿಶ್ವಾಸಾರ್ಹ ಸ್ನೇಹಿತ ಎಂದು ಆಗಾಗ್ಗೆ ಹೇಳುತ್ತಿರುತ್ತಾರೆ. ಉಕ್ರೇನ್ ಮೇಲೆ ಮೇಲೆ ರಷ್ಯಾದ ಆಕ್ರಮಣದ ನಂತರ, ಪಾಶ್ಚಿಮಾತ್ಯ ನ್ಯಾಟೋ ದೇಶಗಳು ರಷ್ಯಾದೊಂದಿಗಿನ ವ್ಯಾಪಾರಕ್ಕೆ ನಿರ್ಬಂಧ ಹೇರಿದ್ದವು. ಆದರೆ ಭಾರತ ತನ್ನ ವಿಶ್ವಾಸಾರ್ಹ ಸ್ನೇಹಿತ ರಷ್ಯಾದಿಂದ ಕಚ್ಚಾತೈಲದ ಆಮದನ್ನು ಹೆಚ್ಚಿಸಿದೆ ಮತ್ತು ಮಾಸ್ಕೋದೊಂದಿಗೆ ರಕ್ಷಣಾ ವಲಯದಲ್ಲಿನ ಸಹಕಾರವನ್ನು ಗಟ್ಟಿಯಾಗಿ ಉಳಿಸಿಕೊಂಡಿದೆ. ಮೋದಿಯವರ ರಷ್ಯಾ ಭೇಟಿ ಎರಡೂ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧವನ್ನು ಮತ್ತಷ್ಟು ಬಲಪಡಿಸಿದ್ದು, ವಿಜ್ಞಾನ, ವ್ಯಾಪಾರ ಮತ್ತು ಹವಾಮಾನ ಬದಲಾವಣೆಯ ಉಪಕ್ರಮಗಳು ಸೇರಿದಂತೆ ಹಲವಾರು ಹೊಸ ಒಪ್ಪಂದಗಳ ಬಗ್ಗೆ ಚರ್ಚಿಸಲಾಗಿದೆ. ರಷ್ಯಾ ಭಾರತದ ಅತಿದೊಡ್ಡ ಶಸ್ತ್ರಾಸ್ತ್ರ ಪೂರೈಕೆದಾರನಾಗಿ ಇಂದಿಗೂ ಉಳಿದಿದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಪಶ್ಚಿಮದೊಂದಿಗಿನ ಸಂಬಂಧ ವೃದ್ಧಿಯ ಫಲವಾಗಿ ಅಮೆರಿಕ ದೇಶದಿಂದಲೂ ತನ್ನ ಪಾಲನ್ನು ಹೆಚ್ಚಿಸಿಕೊಂಡು, ರಷ್ಯಾದ ಶಸ್ತ್ರಾಸ್ತ್ರ ಆಮದುಗಳಲ್ಲಿ ತನ್ನ ಪಾಲನ್ನು ಕಡಿಮೆ ಮಾಡಿಕೊಂಡಿದೆ. ಇದರೊಂದಿಗೆ ಭಾರತವು ಫ್ರಾನ್ಸ್ ಮತ್ತು ಇಸ್ರೇಲ್‌ನೊಂದಿಗೆ ತನ್ನ ಶಸ್ತ್ರಾಸ್ತ್ರ ವ್ಯಾಪಾರವನ್ನು ಹೆಚ್ಚಿಸುವ ಮೂಲಕ ಶಸ್ತ್ರಾಸ್ತ್ರ ಪೂರೈಕೆದಾರರ ಸಮೂಹವನ್ನು ವಿಸ್ತರಿಸುತ್ತಿದೆ. ಮೋದಿಯವರ ಆಡಳಿತಾವಧಿಯಲ್ಲಿ ಭಾರತ ಕೇವಲ ಒಂದು ಅಥವಾ ಎರಡು ದೇಶಗಳೊಂದಿಗೆ ಮಾತ್ರ ಅವಲಂಬಿತವಾಗಿಲ್ಲ.

ನವದೆಹಲಿ ಅತ್ತ ಪಶ್ಚಿಮಕ್ಕೂ ಹತ್ತಿರವಾಗಿ, ವಾಷಿಂಗ್ಟನ್ ನೊಂದಿಗೆ ಅಭೂತಪೂರ್ವ ಮಟ್ಟದ ಭದ್ರತಾ ಸಹಕಾರವನ್ನು ಅನುಸರಿಸುತ್ತಿದೆ. ಇದಕ್ಕೆ ವ್ಯತಿರಿಕ್ತವಾಗಿ, ರಷ್ಯಾವು ಭಾರತದ ಪ್ರತಿಸ್ಪರ್ಧಿಯಾದ ಚೀನಾಕ್ಕೆ ನಿಧಾನವಾಗಿ ಹತ್ತಿರವಾಗುತ್ತಿದೆ ಮತ್ತು ಪಾಕಿಸ್ತಾನದೊಂದಿಗೆ ಆಗಾಗ್ಗ ಸಣ್ಣಮಟ್ಟದ ಮಾತುಕತೆ ನಡೆಸುತ್ತಿರುತ್ತದೆ. ಆದರೆ ಭಾರತ ತನ್ನ ದೀರ್ಘಕಾಲದ ವಿದೇಶಿ ನೀತಿಯ ಮೂಲಕ ಬ್ರಿಕ್ಸ್ ಮತ್ತು BRICS ಮತ್ತು ಇಂಡೋ-ಪೆಸಿಫಿಕ್ QUADಗೆ ಸೇರಿ ಜಾಗತಿಕ ದಕ್ಷಿಣದ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುವ ಗುರಿಯನ್ನು ಹೊಂದಿದೆ. ಆದರೆ ರಷ್ಯಾ ಉಕ್ರೇನ್ ನಲ್ಲಿ ಹೆಚ್ಚು ಸಿಲುಕಿಕೊಂಡಿರುವುದರಿಂದ ಮತ್ತು ಪಾಶ್ಚಿಮಾತ್ಯ ದೇಶಗಳಿಂದ ಪ್ರತ್ಯೇಕತೆಯನ್ನು ಎದುರಿಸುತ್ತಿರುವುದರಿಂದ, ಭಾರತ ರಷ್ಯಾವನ್ನು ಹೊರತುಪಡಿಸಿ ಜಾಗತಿಕ ಮಟ್ಟದಲ್ಲಿ ಹೆಚ್ಚಿನ ಅವಕಾಶಗಳನ್ನು ಕಂಡುಕೊಳ್ಳುತ್ತಿದೆ. ಉಕ್ರೇನ್‌ನಲ್ಲಿ ರಷ್ಯಾದ ಯುದ್ಧವನ್ನು ಭಾರತ ವಿರೋಧಿಸುತ್ತದೆ. ರಷ್ಯಾ ಚೀನಾಕ್ಕೆ ಹತ್ತಿರವಾಗಿರುವ ಪರಿಣಾಮ, ರಷ್ಯಾ ಮತ್ತು ಪಶ್ಚಿಮದ ದೇಶಗಳ ಜೊತೆಗಿನ ಭಾರತದ ಬಾಂಧವ್ಯವನ್ನು ಸಮತೋಲನಗೊಳಿಸುವ ನಿಟ್ಟಿನಲ್ಲಿ ಭಾರತದ ವಿದೇಶಾಂಗ ನೀತಿ ಪ್ರಮುಖ ಪಾತ್ರ ವಹಿಸುತ್ತಿದೆ. ನವದೆಹಲಿ ರಷ್ಯಾ ಮತ್ತು ಉಕ್ರೇನ್ ಯುದ್ಧ ಕೊನೆಗೊಳ್ಳಲು ಪದೇಪದೆ ಕರೆ ನೀಡಿದೆ. ಸಂಪೂರ್ಣ ಯುದ್ಧ ನಿಲ್ಲಿಸಲು ರಷ್ಯಾ ಒಪ್ಪದಿದ್ದರೂ ಸಹ ಮೋದಿಯವರ ಮನವಿ ಯುದ್ಧ ಮತ್ತಷ್ಟು ಉಲ್ಬಣಗೊಳ್ಳದಂತೆ ರಷ್ಯಾದ ಮೇಲೆ ಅಂತಾರಾಷ್ಟ್ರೀಯ ಒತ್ತಡವನ್ನು ಬಲಪಡಿಸಲು ಸಹಕಾರಿಯಾಗಿದೆ. ಭಾರತ ಮತ್ತು ರಷ್ಯಾ ಪಾಲುದಾರಿಕೆಯೂ ವಾಸ್ತವವಾಗಿ ಬೆಳೆಯುತ್ತಿರುವ ರಷ್ಯಾ ಮತ್ತು ಚೀನಾ ಸಂಬಂಧದ ಮೇಲೆ ಪರಿಶೀಲನೆಯಾಗಿ ಕಾರ್ಯನಿರ್ವಹಿಸುತ್ತಿದೆ. ಚೀನಾ ದೇಶಕ್ಕಿಂತಲೂ ಮೊದಲು ರಷ್ಯಾದ ಪ್ರಬಲ ಸ್ನೇಹಿತರಲ್ಲಿ ಭಾರತ ಒಂದಾಗಿದೆ, ಆರ್ಥಿಕ ಮತ್ತು ರಕ್ಷಣಾ ಬೆಂಬಲಕ್ಕಾಗಿ ರಷ್ಯಾ ಚೀನಾ ಮೇಲೆ ಅವಲಂಬಿತವಾಗಿದ್ದರೂ ಸಹ, ಮಾಸ್ಕೋ ದಶಕಗಳ ಕಾಲ ಭಾರತದೊಂದಿಗೆ ತನ್ನ ವಾಣಿಜ್ಯ ಮತ್ತು ರಕ್ಷಣಾ ಸಂಬಂಧಗಳನ್ನು ಪರಿಶೀಲಿಸಿದೆ. ಭಾರತ ಮತ್ತು ರಷ್ಯಾ ಜಾಗತಿಕ ಶೀತಲ ಸಮರದ ಕಾಲದಿಂದಲೂ ಉತ್ತಮ ಸ್ನೇಹಿತ ದೇಶಗಳಾಗಿವೆ. ಇಬ್ಬರ ನಡುವಿನ ವಾಣಿಜ್ಯ ಮತ್ತು ರಕ್ಷಣಾ ಸಂಬಂಧದಲ್ಲಿ ಒಮ್ಮೆಯೂ ಬಿರುಕು ಮೂಡಿಲ್ಲ, ಭಾರತದೊಂದಿಗೆ ರಷ್ಯಾದ ಸಂಬಂಧಕ್ಕೆ ಮಿತಿಯಿಲ್ಲ, ಆದರೆ ಮಾಸ್ಕೋ ಮತ್ತು ಬೀಜಿಂಗ್ ನಡುವಿನ ಸಂಬಂಧ ಹಲವು ಮಿತಿಗಳಿಗೆ ಸೀಮಿತವಾಗಿರುತ್ತದೆ. ಭಾರತ ಮತ್ತು ಚೀನಾ ನಡುವಿನ ಸಂಘರ್ಷದಲ್ಲಿ ಭಾರತವನ್ನು ರಷ್ಯಾ ಬೆಂಬಲಿಸಲು ಅನುಕೂಲವಾಗುವ ನಿಟ್ಟಿನಲ್ಲಿ ಮೋದಿ ಪುಟಿನ್ ಭೇಟಿ ಮಹತ್ವಪೂರ್ಣವಾಗಿದೆ.

ಅರುಂಧತಿ ಏನು ಮೇಲಿಂದ ಇಳಿದುಬಂದವರೇ?

ಬುಲೆಟ್ ಪ್ರೂಫ್

ವಿನಯ್ ಖಾನ್
vveditoped@gmail.com

ಇತ್ತೀಚೆಗೆ ಅರುಂಧತಿ ರಾಯ್‌ಗೆ ಪೆನ್ ಪಿಂಟರ್ ಎನ್ನುವ ಒಂದು ಪ್ರಶಸ್ತಿ ಬಂತು. ಆ ಪ್ರಶಸ್ತಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಲೇಖಕರಿಗೆ ಕೊಡುವಂತಹ ಪ್ರಶಸ್ತಿ. ಈ ಅರುಂಧತಿ ರಾಯ್ ಎಂದರೆ, ಕೆಲವೊಂದಿಷ್ಟು ಮಂದಿಗೆ ಗೊತ್ತಿರುವ ಹಾಗೆ ಓರ್ವ ಬರಹಗಾರ್ತಿ, 1999ರಲ್ಲಿ ಅವರಿಗೆ ಮ್ಯಾನ್ ಬೂಕರ್ ಸಹ ಬಂದಿದೆ. ಹಂಗೆ ಒಂದು ಪುಸ್ತಕ ಹಿಟ್ ಆಗಿ, ಪ್ರಶಸ್ತಿಗಳನ್ನೂ ಗಳಿಸಿ, ಅವರನ್ನು ಅಟ್ಟಕ್ಕೇರಿಸಿದಾಗ ಉಳಿದ ಹಲವು ಪುಸ್ತಕ ಮತ್ತು ಚಲನಚಿತ್ರಗಳು ಭಿಕರಿಯಾಗದೇ ಮೂಲೆಗೆ ತಳ್ಳಿದ್ದವು. ಆದರೂ, ಜನರ ಕಣ್ಣಲ್ಲಿ ಕಾಣಬೇಕು, ಜನರು ಅವರನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಎಂದು ಲೇಖನವನ್ನು ಬಿಟ್ಟು ಗನ್ ಹಿಡಿಯುವವರ ಕೈ ಹಿಡಿದಳು. ಇವರೂ ಗನ್ ಹಿಡಿದುಕೊಂಡು ಅವರ ಜತೆ ಹೋಗಲಿಲ್ಲ, (ಗನ್ ಅಲ್ಲ ಅದರ ಬುಲೆಟ್ ಅನ್ನು ಹೊರುವಷ್ಟು ಶಕ್ತಿ ಕೂಡ ಅವಳಲ್ಲಿ ಇಲ್ಲ.) ಬದಲಿಗೆ ಗನ್ ತೊಗೊಂಡು ಹೋಗುವಂತೆ ಜನರನ್ನು ಪ್ರೇರೇಪಿಸಿದರು.

ಬಡ, ನಿರ್ಗತಿಕ, ಆದಿವಾಸಿ, ಹಿಂದುಳಿದವರ ಮಕ್ಕಳ ತಲೆಯಲ್ಲಿ ನಕ್ಸಲಿಸಂ, ಭಯೋತ್ಪಾದಕತೆಯನ್ನು ತುಂಬಿ ಅವರನ್ನು ಕಾಡಿಗೆ ಸೇರಿಸಿ, ಇಡೀ ಭಾರತದ ಭದ್ರತೆಗೆ ಕಪ್ಪುಚುಕ್ಕೆಯಾಗುವ ಕೆಲಸವನ್ನು ಮಾಡಿದರು. ಅದೆಲ್ಲ ಏಕೆಂದರೆ, ಹೇಗಿದ್ದರೂ ಕೆಲಸ ಇರಲಿಲ್ಲ, ಪುಸ್ತಕಗಳೂ ಮಾರಾಟವಾಗುತ್ತಿರಲಿಲ್ಲ. ಹೇಗೆ, ಏನೇನೋ ಮಾಡಿಕೊಂಡು ದೇಶದ ಸಮಗ್ರತೆಯ ವಿರುದ್ಧ, ಸೈನಿಕರ ವಿರುದ್ಧ, ಶಾಂತಿಯ ವಿರುದ್ಧ, ಭಾರತೀಯರ ವಿರುದ್ಧ ಮಾತನಾಡುತ್ತಾ ಸಮಯ ಕಳೆಯುತ್ತಿದ್ದಳು. ಆದರೆ, ಅವಳು ಮಾತ್ರ ಎಂದಿಗೂ ಆಜಾದಿ ಎಂದೋ, ಲಾಲ್ ಸಲಾಂ ಎಂದೋ ಗನ್ ಹಿಡಿದುಕೊಂಡು ಹೋಗಲಿಲ್ಲ. ಆ ಜನರ ಮುಖವನ್ನು ತೋರಿಸಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೆಲವು ಹೆಸರು-ದುಡ್ಡು ಮಾಡಿಕೊಂಡು, ವಿಲಾಸಿ ಜೀವನ ಮಾಡಿ, ಜನರ ನೆಮ್ಮದಿಗೆ ಬೆಂಕಿ ಇಟ್ಟವರು. ಇವಳ ರೀತಿಯಲ್ಲೇ ಕನ್ನಡದಲ್ಲೂ ಕೆಲವು ಕೆಲಸಕಳೆದುಕೊಂಡಿದ್ದ ಲೇಖಕರು, ಪತ್ರಕರ್ತರು ಇದೇ ರೀತಿಯ ದೇಶದ್ರೋಹ ಕೆಲಸವನ್ನು ಮಾಡಿದ್ದರು. ಉದಾಹರಣೆಗೆ, ಗೌರಿ ಲಂಕೇಶ್, ಗಿರೀಶ್ ಕಾರ್ನಾಡ್ ಮತ್ತಿತರ ಬರಹಗಾರರು(?!).

ಇವಳು ಹಾಗೇ, ತನ್ನ ಪುಸ್ತಕಗಳಿಗಿಂತ ತನ್ನ ಮಾತುಗಳಿಗೇ ತುಂಬಾ ಹೆಸರಾದವರು. ಹಾಗಂತ ಅವಳು ಮೋಟಿವೇಷನ್ ಸ್ಪೀಕರ್ ಅಲ್ಲ. ಅಥವಾ ದೇಶವೇ ಮೆಚ್ಚುವಂತಹ ಮಾತುಗಳ ನ್ನಾಡುವ ವಾಗ್ಮಿ ಅಂತೂ ಅಲ್ಲವೇ ಅಲ್ಲ. ಅಥವಾ ದೇಶಕ್ಕಾಗಿ ಹೋರಾಟ ಮಾಡಿದ ಸ್ವಾತಂತ್ರ ಹೋರಾಟಗಾರ್ತಿಯೂ ಅಲ್ಲ. ಅವರು ಮಾಡಿದ್ದು ಇಷ್ಟೇ, ಕೆಲ ಅವಳದ್ದೇ ರೀತಿಯಲ್ಲಿ ಮಾಡೋಕೆ ಏನು ಕೆಲಸ ಇಲ್ಲದೇ, ಅಥವಾ ಕೆಲಸದಿಂದ ರಿಟೈರ್ ಆಗಿ ಮನೆನಲ್ಲಿ ಕುಳಿತಿರುವವರು, ವಿದ್ಯಾರ್ಥಿ ಹೆಸರಲ್ಲಿ 35 ವರ್ಷ ಮೀರಿದ್ದರೂ ಯಾವುದೋ ಕಾಲೇಜು ವಿಶ್ವವಿದ್ಯಾಲಯದಲ್ಲಿನ ವಿದ್ಯಾರ್ಥಿ ಹಾಗೂ ವಾತಾವರಣ ಹಾಳು ಮಾಡುತ್ತಿರುವ ಕೆಲವರು ಆಗಾಗ ಸೇರಿ ದೇಶವನ್ನು ಮುರಿಯುವುದರ ಬಗ್ಗೆ ಮಾತನಾಡುತ್ತಿದ್ದರು. ಅಂಥಲ್ಲೆಲ್ಲ ಹೋಗಿ ದೇಶ ಮುರಿಯುವುದರ ಬಗ್ಗೆ, ನಕ್ಸಲರು ಪೊಲೀಸರ ಕೊಂದಿದ್ದನ್ನು ಸಮರ್ಥಿಸಿಕೊಂಡು, ಭಯೋತ್ಪಾದಕರನ್ನು ಸಮರ್ಥಿಸಿಕೊಂಡು, ಮಾತನಾಡುತ್ತಿದ್ದಳು. ಅವರು ಮೊದಲೇ ಮಾತಾಡುವುದು ದೇಶ ಮುರಿಯುತ್ತಿದ್ದರ ಬಗ್ಗೆ ಆದ್ದರಿಂದ ಅದು ಆಗಾಗ ಮಾಧ್ಯಮಗಳಲ್ಲಿ ಸುದ್ದಿಯಾಗು ತ್ತಿತ್ತು. ಈಗ ಮತ್ತೆ ಅವರು ಸುದ್ದಿಯಲ್ಲಿದ್ದುದ್ದು ಪೆನ್ ಪಿಂಟರ್ ಪ್ರಶಸ್ತಿಗೆ ಭಾಜನಳಾಗಿದ್ದಕ್ಕಲ್ಲ! ಬದಲಿಗೆ 2010ರಲ್ಲಿ ಅವರು ಮಾಡಿದ್ದ ಒಂದು ಕರ್ಮಕಾಂಡಕ್ಕೆ. ಏನಾಗಿತ್ತು ಎಂದರೆ, ಇವರು ಹೀಗೆ ದೇಶದ ಜನರ ಮುಂದೆ ತನ್ನ ಹಳಸು ಭಾಷಣ, ವಿಚಾರವನ್ನು ಜನರ ಮುಂದೆ ಬಿಚ್ಚಿಡುತ್ತಾ ದಿನಗಳನ್ನು ನಡೆಸುತ್ತಿದ್ದ ಸಮಯದಲ್ಲಿ, ದೆಹಲಿಯಲ್ಲಿ ನಡೆದ 'ಅಜಾದಿ ಆನ್ ದಿ ವೇ' ಎಂಬ ಕಾರ್ಯಕ್ರಮದಲ್ಲಿ ಇವರು ಮಾಡಿದ್ದ ಭಾಷಣ. ಅದು ಸಣ್ಣ ಪುಟ್ಟ ಭಾಷಣ ಏನಲ್ಲ. ಆ ದಿನ 'ಕೆಲವು ಜನ' ಕಾಶ್ಮೀರವನ್ನು ಭಾರತದಿಂದ ಮುಕ್ತಿ ಪಡಿಸುವಂತೆ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಆ ಕಾರ್ಯಕ್ರಮದಲ್ಲಿ ಇವಳೂ ಭಾಗ ವಹಿಸಿದ್ದರು, ಆ ಕಾರ್ಯಕ್ರಮವೇನು ದೇಶ ಭಕ್ತರ ಕಾರ್ಯ ಕ್ರಮವಲ್ಲ. ಬದಲಿಗೆ ಅಲ್ಲಿ ಇದ್ದಿದ್ದು ದೇಶವನ್ನು ತುಂಡು ಮಾಡುವವರು ಸೇರಿದ್ದ ಕೂಟ. ಅಲ್ಲಿ ಆಡುವ ಮಾತುಗಳೂ ಅಷ್ಟೇ! ದೇಶವನ್ನು ತುಂಡು ಮಾಡೋದು ಹೇಗೆ? ಇಲ್ಲಿನ ಜನರಲ್ಲಿ ಅಶಾಂತಿಯನ್ನು ಬೆಳೆಸುವುದು ಹೇಗೆ?

ಅಷ್ಟಕ್ಕೂ ಅರುಂಧತಿ ರಾಯ್ ಏನು ಮೇಲಿಂದ ಬಂದವರೇ? ಕಳೆದ ಒಂದು ತಿಂಗಳಿಂದ ಕೆಲವು ಪತ್ರಿಕೆಗಳಲ್ಲಿ ಅವಳ ಬಗ್ಗೆ ಪುಂಖಾನುಪುಂಖವಾಗಿ ಜನರು ಬರೆಯುತ್ತಲೇ ಬಂದಿದ್ದಾರೆ. ಕಾಂಗ್ರೆಸ್ಸಿನ ಶಶಿ ತರೂರ್ ಅಂತೂ ಎರಡು ಮೂರು ಪತ್ರಿಕೆಗಳಿಗೆ ಉದ್ದುದ್ದ ಅಂಕಣಗಳನ್ನೂ ಬರೆಯುತ್ತಿದ್ದಾರೆ. ಹಾಗೇ ಇನ್ನಿತರ ಕಡೆಗಳಲ್ಲಿ, ಕೆಲ ಜನ ಅವರನ್ನು ಜೈಲಿಗೆ ಹಾಕಬಾರದೆಂದು, ಸ್ವಲ್ಪ ಸಮಯ ಹೋರಾಟ(?!) ಮಾಡಿ, ಮೀಡಿಯಾದವರು ಬರುವವರೆಗೂ ನಿಂತು, ಫೋಟೋ ಸೆಸನ್‌ಗೆ ಪೋಸ್ ಕೊಟ್ಟು ಮನೆಗೆ ಹೋದವರೆಲ್ಲ ಸೇರಿ ಇವಳ ಉಪಾಧ್ಯಾಪತನಕ್ಕೆ ಕೇಂದ್ರ ಸರಕಾರವನ್ನು ದೂರುತ್ತಿದ್ದಾರೆ. ಸರಿ, ಅವರ ಮಾತನ್ನು ಎಲ್ಲರೂ ಒಪ್ಪುವಂಥದ್ದೇ! ಏಕೆಂದರೆ ಅವರ ಈ ಶಿಕ್ಷೆಯನ್ನು 14 ವರ್ಷಗಳ ನಂತರ ಮೇಲೆ ಕೊಡುವುದನ್ನು ಬಿಟ್ಟು, ಅವಳು ಭಾರತ ಮತ್ತು ಕಾಶ್ಮೀರಕ್ಕೆ ಯಾವುದೇ ಸಂಬಂಧ ಇಲ್ಲ, ಕಾಶ್ಮೀರ ಬೇರೇಯದ್ದೇ ದೇಶವಾಗಿ ಉಳಿಯಬೇಕು ಎಂದಾಗಲೇ ಪೊಲೀಸರ ಅವಳಿಗೆ ಲಾಠಿಯ ರುಚಿ ತೋರಿಸಬೇಕಾಗಿತ್ತು. ಆದರೆ, ಆಗಿನ ಸರಕಾರದ ವಿಳಂಬ ಧೋರಣೆಯಿಂದ ಇತ್ತೀಚೆಗೆ ಅವರಿಗೆ ಶಿಕ್ಷೆ ದೊರಕುತ್ತಿದೆ. ಅದು ಮೊದಲೇ ಆಗ ಬೇಕಾಗಿತ್ತು. ಅವರು ಪುಸ್ತಕಗಳನ್ನು ಬರೆದು ಸ್ವಲ್ಪ ಹೆಸರು ಮಾಡಿದ ಮಾತ್ರಕ್ಕೆ ಅವಳಿಗೆ ಭಾರತ ರತ್ನ ಪ್ರಶಸ್ತಿ ಕೊಟ್ಟು ಸನ್ಮಾನಿಸಬೇಕಿತ್ತೇ? ನಮ್ಮ ದೇಶದ ಕಾನೂನಿನ ಮುಂದೆ ಯಾರು ದೊಡ್ಡವರು? ಇಂದಿರಾ ಗಾಂಧಿ ಚುನಾವಣೆಯಲ್ಲಿ ಅಧಿಕಾರವನ್ನು ಬಳಸಿ ಗೆದ್ದಿದ್ದರ ಪರಿಣಾಮ ಅವರನ್ನು ಸುಪ್ರೀಂ ಕೋರ್ಟ್ 6 ವರ್ಷ ಸಂಸತ್ ಸದಸ್ಯ ಸ್ಥಾನದಿಂದ ವಜಾ ಮಾಡುವಂತಹ ತೀರ್ಪು ನೀಡಿತ್ತು. ಹಾಗೇ, ನರೇಂದ್ರ ಮೋದಿ ಅವರು ಮೊದಮೊದಲಿಗೆ ಗುಜರಾತ್ ಮುಖ್ಯಮಂತ್ರಿ ಆದಂತಹ ಸಮಯದಲ್ಲಿ ನಡೆದ ಗೋಧ್ರಾ ಹತ್ಯಾಕಾಂಡದ ವಿರುದ್ಧ ಅವರು ಪ್ರಧಾನ ಮಂತ್ರಿ ಆದಮೇಲೂ ಅವರ ಮೇಲೆ ಪ್ರಕರಣಗಳೂ ಇದ್ದೇ ಇದ್ದವು. ಈ ದೇಶದಲ್ಲಿ ಯಾರು ಕಾನೂನಿಗಿಂತ ಮೇಲಿದ್ದಾರೆ? ನಮ್ಮ ದೇಶದ ಮೊದಲ ಪ್ರಧಾನಿ ಜವಾಹರ್‌ಲಾಲ್ ನೆಹರೂನಿಂದ ಎಷ್ಟೋ ಜನ ರಾಷ್ಟ್ರೀಯ ನಾಯಕರು, ಪ್ರಥಃಸ್ಮರಣೀಯರು ಜೈಲಿಗೆ ಹೋಗಿ ಬಂದವರೇ, ಅವರ ಮುಂದೆ ಅರುಂಧತಿ ದೊಡ್ಡವಳಾದರೇ? ಹಾಗಾದರೆ, ಮ್ಯಾನ್ಮಾರ್‌ನ ನಾಯಕಿ ಆಂಗ್ ಸಾನ್ ಸೂಕಿ 33 ವರ್ಷಗಳಿಗಿಂತಲೂ ಹೆಚ್ಚು ವರ್ಷ ಜೈಲುವಾಸ ಮಾಡಿದರು, ಅವರು ಮಾಡಿದ ತಪ್ಪೇನು? ಅವರ ದೇಶದ ಪರವಾಗಿ, ಅವರ ಜನರ ಪರವಾಗಿ ಹೋರಾಡಿದ್ದು. ಅವರಿಗೆ ನೊಬೆಲ್ ಪ್ರಶಸ್ತಿ ಸಹ ಬಂತು. ಆದರೆ, ಅರುಂಧತಿ ಹೋರಾಡಿದ್ದು ಯಾರ ಪರವಾಗಿ? ಪೊಲೀಸರನ್ನು, ನಾಗರಿಕರನ್ನು ಕೊಲ್ಲುತ್ತಿದ್ದ ನಕ್ಸಲರ ಪರವಾಗಿ, ಭಾರತದ ನಾಗರಿಕರನ್ನು ಕೊಲ್ಲುವ ಭಯೋತ್ಪಾದಕರ ಪರವಾಗಿ. ಕಾಶ್ಮೀರದ ಪಂಡಿತರನ್ನು ರಾತ್ರೋ ರಾತ್ರಿ ತಮ್ಮದೇ ಮನೆಯಿಂದ ಓಡಿಸಿದ ಭಯೋತ್ಪಾದಕರ ಪರವಾಗಿ, ಭಾರತದ ಏರ್ ಫೋರ್ಸಿನ ಹಲವು ಸೈನಿಕರನ್ನು ಕೊಂದ ಯಾಸೀನ್ ಮಲಿಕ್ ಪರವಾಗಿ, 2001ರ ಪಾರ್ಲಿಮೆಂಟ್ ಮೇಲೆ ದಾಳಿ ಮಾಡಿ 9ಕ್ಕೂ ಹೆಚ್ಚು ಜನರ ಮಾರಣಹೋಮಕ್ಕೆ ಕಾರಣವಾಗಿದ್ದ ಅಫ್ಜಲ್ ಗುರು ಪರವಾಗಿ. ನಾಳೆ ನಮ್ಮ-ನಿಮ್ಮ ಮನೆಯವರನ್ನೋ, ಸ್ನೇಹಿತರನ್ನೋ ಭಯೋತ್ಪಾದಕರನ್ನು ಕೊಂದರೆ, ಆ ಭಯೋತ್ಪಾದಕರ ಪರ ನಿಲ್ಲುವ ಮಾನಸಿಕತೆ ಹೊಂದಿದ ಅರುಂಧತಿ ರಾಯ್‌ರನ್ನು ಸುಮ್ಮನೆ ಬಿಡುವುದು ಏತಕ್ಕೆ?

ಅಷ್ಟಕ್ಕೂ ಅರುಂಧತಿಗೆ ದೊರಕಿದ ಪ್ರಶಸ್ತಿಗಳಿಂದ ಅವರನ್ನು ಶಿಕ್ಷೆಗೆ ಗುರಿಪಡಿಸಬಾರದೆಂದರೆ, ಅಡಾಲ್ಫ್ ಹಿಟ್ಲರ್ ಸಹ ನೋಬೆಲ್ ಶಾಂತಿ ಪುರಸ್ಕಾರಕ್ಕೆ ನಾಮನಿರ್ದೇಶಿತಗೊಂಡಿದ್ದರು. ಹಾಗೆಂದ ಮಾತ್ರಕ್ಕೆ ಅವರು ಮಾಡಿದ್ದೆಲ್ಲ ಒಳ್ಳೆಯದೇ? ಹಿಟ್ಲರ್‌ನಿಂದ ಸತ್ತಂತಹ ಎರಡೂವರೆ ಲಕ್ಷ ನಾಜಿಗಳ ಮಾರಣ ಹೋಮವು ನಡೆದಿದ್ದು ಇಡೀ ಪ್ರಪಂಚಕ್ಕೆ ಒಳ್ಳೆಯದೇ? ಅದರ ಜತೆಗೆ ಸ್ಟಾಲಿನ್ ಸಹ ಎಷ್ಟೋ ಬಾರಿ ನೊಬೆಲ್ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದ, ಹಾಗೆಂದ ಮಾತ್ರಕ್ಕೆ ಅವನು ಸಾಚಾನೇ, ಸಾಧುನೇ? ಯಾವುದೇ ಒಂದು ಪ್ರಶಸ್ತಿಯನ್ನು ಪಡೆದ ಮಾತ್ರಕ್ಕೆ ಅವರು ಒಂದು ದೇಶದ ಸಮಗ್ರತೆ, ಭದ್ರತೆಗಿಂತ ಅವಳೇ ಹೆಚ್ಚಾದರೇ? ಯಾವುದೇ ಒಂದು ಪ್ರಶಸ್ತಿ ಬಂತು ಎಂದ ಮಾತ್ರಕ್ಕೆ ಅವರು ಹೇಗೆ ಒಂದು ದೇಶಕ್ಕಿಂತ ಹೆಚ್ಚಾಗುತ್ತಾರೆ? ಎಲ್ಲದರ ಜತೆಗೆ ವಿಶ್ವಸಂಸ್ಥೆಯ ಮಾನವ ಹಕ್ಕು ಕಚೇರಿಯಿಂದಲೂ ಅವರಿಗೆ ಬೆಂಬಲ ನೀಡುತ್ತಿದ್ದಾರೆ.

ವಿಶ್ವಸಂಸ್ಥೆಗೆ ಈ ಉಸಾಬರಿ ಏಕೆ ಬೇಕಾಗಿತ್ತು? ಕಾಶ್ಮೀರದಿಂದ ಅಲ್ಲಿನ ಜನರನ್ನು ಓಡಿಸುವಾಗ, ಭಯೋತ್ಪಾದಕರು ಎಷ್ಟೋ ದೇಶಗಳ ಜನರನ್ನು ಅಮಾನುಷವಾಗಿ ಕೊಲ್ಲುತ್ತಿದ್ದಾಗ, ಜಿಹಾದ್‌ನ ಹೆಸರಿನಲ್ಲಿ ಕೋಟ್ಯಾಂತರ ಜನರನ್ನು ಭಯೋತ್ಪಾದಕರು ಕೊಲ್ಲುವಾಗ, ಮಲಗಿದ್ದ ವಿಶ್ವಸಂಸ್ಥೆಗೆ ಇದೆಲ್ಲ ಏಕೆ ಬೇಕಾಗಿತ್ತು? ಸರಿ, ಕಾಶ್ಮೀರದಿಂದ ಓಡಿಸಿದ ಪಂಡಿತರ ನೆರವಿಗೆ ವಿಶ್ವಸಂಸ್ಥೆ ಎಂದಾದರೂ ನೆರವಿಗೆ ಬಂತೆ? ಊಹೂ ಇಲ್ಲ. ಕಾಶ್ಮೀರ ಪಂಡಿತರ ನರಮೇಧವಾದಾಗ, ಪಶ್ಚಿಮ ಬಂಗಾಳದಲ್ಲಿ ಹಿಂದೂಗಳ ನರಮೇಧವಾಗುತ್ತಿರುವಾಗ ಎಂದು ಬಾರದ ಸ್ವಯಂಘೋಷಿತ ಪ್ರಗತಿಪರ ಚಿಂತಕರನ್ನು ಕಾನೂನಿಗಿಂತ ಹೆಚ್ಚಿನ ಸವಲತ್ತನ್ನು ಏಕೆ ಕೊಡಬೇಕು? ಯಾರೋ ಕೆಲವು ಜನರ ಮಾತನ್ನು ಕೇಳಿ ಸರಕಾರ ಅವಳಿಗೆ ಶಿಕ್ಷೆ ವಿಧಿಸದಿದ್ದರೆ, ಅದು ಕಾನೂನಿಗೆ ಮಾಡಿದ ಬಹುದೊಡ್ಡ ಅಪಮಾನ. ಹಾಗೇ, ಪ್ರಶಸ್ತಿಗಳನ್ನು ಪಡೆದ ಮಾತ್ರಕ್ಕೆ ಯಾರೂ ದೇಶದ ಮುಂದೆ ದೊಡ್ಡವರಾಗುವುದಿಲ್ಲ. ಹಾಗೇ ಪ್ರಶಸ್ತಿ ಪಡೆದರಿಗೆಲ್ಲ ಶಿಕ್ಷೆಯಿಂದ ಪಾರುಮಾಡಬೇಕಾಗಿ ಬರುವುದಾದರೆ, ಕಾನೂನಿಗೂ ಮಹತ್ವ ಬರುವುದಿಲ್ಲ. ಅಲ್ಲವೇ?

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಅಭಿಜಾತ ಕಲಾವಿದೆ ಅಪರ್ಣಾ ಅಜರಾಮರ

ಅದು 90 ದಶಕ ದೂರದರ್ಶನದಲ್ಲಿ ಸ್ಪಷ್ಟವಾಗಿ ಕನ್ನಡ ಪದಗಳನ್ನು ಉಚ್ಚರಿಸುತ್ತಾ ಕರ್ನಾಟಕವನ್ನು ತಮ್ಮ ಕಡೆಗೆ ತಿರುಗಿ ನೊಡುವಂತೆ ಮಾಡಿದ ಅಭಿಜಾತ ಕಲಾವಿದೆ ಅಪರ್ಣಾ ನಮ್ಮನ್ನಗಲಿರುವುದು ಕರ್ನಾಟಕ ರಾಜ್ಯ, ಕನ್ನಡ ಭಾಷೆಗೆ ತುಂಬಲಾರದ ನಷ್ಟವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಮೂಲತಃ ಚಿಕ್ಕಮಗಳೂರಿನ ಪಂಚನಹಳ್ಳಿ ಗ್ರಾಮದವರಾದ ಅರ್ಪಣಾ ತಮ್ಮ ಸುಮಧುರ ಮಾತುಗಳಿಂದ ಕರ್ನಾಟಕದ ಮನೆಮಾತಾದರು. 1984ರಲ್ಲಿ ತೆರೆಕಂಡ ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ಮಸಣದ ಹೂವು' ಸಿನಿಮಾದಲ್ಲಿ ಪಾರ್ವತಿ ಎಂಬ ಪಾತ್ರ ಮಾಡುವ ಮೂಲಕ ಬಣ್ಣದ ಲೋಕಕ್ಕೆ ಅಪರ್ಣಾ ಪ್ರವೇಶ ಮಾಡಿದರು , ನಂತರ ಸಂಗ್ರಾಮ, ನಮ್ಮೂರ ರಾಜ, ಸಾಹಸ ವೀರ, ಇನ್ಸ್‌ಪೆಕ್ಟರ್ ವಿಕ್ರಂ, ಡಾಕ್ಟರ್ ಕೃಷ್ಣ ಮುಂತಾದ ಸಿನಿಮಾಗಳಲ್ಲಿ ನಟಿಸಿದರು. ಅರ್ಪಣಾರವರು 1993ರಲ್ಲಿ ಆಲ್ ಇಂಡಿಯಾ ರೇಡಿಯೊದಲ್ಲಿ ರೇಡಿಯೊ ಜಾಕಿಯಾಗಿ ಕೆಲಸ ಶುರು ಮಾಡಿದ್ದರು. 1998ರಲ್ಲಿ ದೀಪಾವಳಿ ಪ್ರಯುಕ್ತ ಅಪರ್ಣಾ ಅವರು ನಿರಂತರ ಎಂಟು ಗಂಟೆಗಳ ಕಾಲ ಕೆಲಸ ನಿರೂಪಣೆ ಮಾಡಿ ದಾಖಲೆ ಮಾಡಿದ್ದರು. ಇಲ್ಲಿಯವರೆಗೆ ಅವರು 7000ಕ್ಕೂ ಅಧಿಕ ಕಾರ್ಯಕ್ರಮಗಳ ನಿರೂಪಣೆ ಮಾಡಿದ್ದರು , 10 ಸಿನಿಮಾಗಳಲ್ಲಿ ನಟಿಸಿದ್ದಾರೆ. ನಂತರ 2003ರಲ್ಲಿ ಪ್ರಸಾರವಾಗುತ್ತಿದ್ದ ಜನಪ್ರಿಯ ಧಾರಾವಾಹಿ 'ಮೂಡಲ ಮನೆ'ಯ ದಾರವಾಹಿಯ ಮೂಲಕ ಕಿರುತೆರೆಗೆ ಪ್ರವೇಶಿಸಿ , ನಂತರ ಅಪರ್ಣಾ ಅವರು ಟಿ.ಎನ್ ಸೀತಾರಾಮ್ ಅವರ 'ಮುಕ್ತ' ಸೇರಿದಂತೆ ಕೆಲ ಧಾರಾವಾಹಿಗಳಲ್ಲಿ ಕಾಣಿಸಿಕೊಂಡಿ ದ್ದರು ಮತ್ತು 'ಬಿಗ್ ಬಾಸ್ ಕನ್ನಡ' ಮೊದಲ ಸೀಸನ್‌ನಲ್ಲಿ ಸ್ಪರ್ಧಿಯಾಗಿ ಎಂಟ್ರಿ ಕೊಟ್ಟಿದ್ದು ವಿಶೇಷ ಹಾಗೂ ಆನಂತರ 'ಮಜಾ ಟಾಕೀಸ್' ಕಾಮಿಡಿ ಶೋನಲ್ಲಿ ಅಪರ್ಣಾ ಹಲವು ವರ್ಷಗಳ ಕಾಲ ಕಾಣಿಸಿಕೊಂಡರು. ಶ್ವಾಸಕೋಶದ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅಪರ್ಣಾ ತಮ್ಮ 58 ವಯಸ್ಸಿನಲ್ಲಿ ನಮ್ಮನ್ನು ಅಗಲಿದ್ದಾರೆ. ಅದರೆ ತಮ್ಮ ಮಧುರ ಧ್ವನಿಯ ಮೂಲಕ ಸದಾ ಅಮರರಾಗಿರುತ್ತಾರೆ, ರಾಜ್ಯದ ಸಮಸ್ತ ಜನತೆಯ ಪರವಾಗಿ ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಆಶಿಸೋಣ.

– ರಾಸುಮ ಭಟ್, ಚಿಕ್ಕಮಗಳೂರು.

ಡೆಂಘೀ ಸೋಂಕು: ಆರೋಗ್ಯ ಇಲಾಖೆಯ ನಿರ್ಲಕ್ಷ್ಯ ಸಲ್ಲ

ರಾಜ್ಯದಲ್ಲಿ ಡೆಂಘೀ ಜ್ವರ ಸೋಂಕು ತೀವ್ರಗತಿಯಲ್ಲಿ ಹರಡುತ್ತಿದೆ. ಬಹುತೇಕ ಎಲ್ಲ ತಾಲೂಕುಗಳಲ್ಲಿ ಖಾಸಗಿ ಆಸ್ಪತ್ರೆಗಳಲ್ಲೂ ಡೆಂಘೀ ಸೋಂಕಿತರಿಗೆ ಬೆಡ್ ಸಿಗುತ್ತಿಲ್ಲ. ಆರೋಗ್ಯ ಇಲಾಖೆ ಇದರ ಬಗ್ಗೆ ಗಮನಹರಿಸಿ ಅತಿ ಶೀಘ್ರವಾಗಿ ಸೂಕ್ತ ಕ್ರಮ ಕೈಗೊಳ್ಳಬೇಕು. ಈ ವರ್ಷ ಡೆಂಘೀ ಸೋಂಕು ಹರಡು ಏಕೆ ತೀವ್ರವಾಗಿದೆ ಮತ್ತು ಅದಕ್ಕೆ ತಕ್ಕಂತೆ ಆಡಳಿತ ವ್ಯವಸ್ಥೆ ಯಿಂದ ಸ್ಪಂದನೆ ಕಾಣಿಸುತ್ತಿಲ್ಲ ಎಂಬುದು ಆತಂಕಕಾರಿ. ಇನ್ನೂ ಡೆಂಘೀ ಸೋಂಕಿನ ಬಗ್ಗೆ ಜನರಲ್ಲಿ ಅರಿವು ಮೂಡಿಸು ವುದು, ಡೆಂಘೀ ಸೋಂಕಿತರಿಗೆ ಸೂಕ್ತ ಚಿಕಿತ್ಸೆ ಹಾಗೂ ಔಷಧ ಸಿಗುವಂತೆ ನೋಡಿಕೊಳ್ಳುವುದು, ಪ್ಲೇಟ್ ಲೆಟ್ಸ್ ಸರಬರಾಜು, ಸೊಳ್ಳೆಗಳ ನಾಶಕ್ಕೆ ಔಷಧಿ ಮುಂತಾದ ಕ್ರಮಗಳು ಆರೋಗ್ಯ ಇಲಾಖೆ ಆದೇಶ ಹೊರಡಿಸಿ ಸ್ಥಳೀಯ ಆಡಳಿತಗಳ ಮುಖೇನ ಮಾಡಿಸಬೇಕಿದೆ. ಡೆಂಘೀ ಬೆನ್ನಲ್ಲೇ ಇನ್ನು ಚಿಕನ್‌ಗುನ್ಯಾ ಕೂಡ ಕಾಣಿಸಿಕೊಳ್ಳಬಹುದು ಎಂದು ಅಂದಾಜಿಸಲಾಗಿದೆ.ಅದಕ್ಕೂ ಔಷಧ ಮತ್ತು ಚಿಕಿತ್ಸೆಗೆ ಸಿದ್ಧತೆ ಸರ್ಕಾರ ಮಾ ಡಿಕೊಂಡಿಲ್ಲ, ಬಡವರು, ಅನಕ್ಷರಸ್ಥರು ಹಾಗೂ ಆರೋಗ್ಯದ ವಿಷಯದಲ್ಲಿ ಸಾಕಷ್ಟು ಮಾಹಿತಿ ಇಲ್ಲದವರು ಇರುವ ಕಡೆ ಸ್ಥಳೀಯ ಆಡಳಿತಗಳು ಹೆಚ್ಚಿನ ಮುತುವರ್ಜಿ ವಹಿಸಿ ಈ ಡೆಂಘೀ ಸೋಂಕನ್ನು ಎದುರಿಸಲು ಜನರನ್ನು ಸಜ್ಜುಗೊಳಿಸುವ ಅಗತ್ಯವಿದೆ.

– ಡಾ.ವಿಜಯಕುಮಾರ್ ಎಚ್.ಕೆ. ರಾಯಚೂರು

ಅತಿ ವೇಗದ ವಾಹನ ಚಾಲನೆಗೆ ಕಡಿವಾಣವೆಂದು?

ಮನುಷ್ಯನ ಐಷಾರಾಮಿ ಜೀವನಕ್ಕೆ ಮಿತಿಯೇ ! ಇಲ್ಲ, ಹಣ, ಜನ, ಅಧಿಕಾರ ವಯಸ್ಸಿನ ಬಲವಿದ್ದರೆ ಮುಗಿಯಿತು, ಆ ಇಂದ್ರನ ಸಾಮ್ರಾಜ್ಯದ ಅಧಿಪತಿಯಂತೆ ಮೆರೆದಾಡುವರು.

ಇಂತಹ ಶ್ರೀಮಂತರ ವಿಲಾಸಿ ಜೀವನದ ಅಡಿಯಲ್ಲಿ ಸಿಕ್ಕು ಸಾಯುವ ಸಾಮಾನ್ಯ ಜನರ ಜೀವಕ್ಕೆ ತೃಣ ಬೆಲೆಯೂ ಇಲ್ಲ. ಇತ್ತೀಚಿನ ದಿನಗಳಲ್ಲಿ ನಾವು ದ್ವಿಚಕ್ರ ಹಾಗೂ ನಾಲ್ಕು ಚಕ್ರದ ಅತ್ಯಂತ ದುಬಾರಿವಾಹನಗಳ ಖರೀದಿ ಹಾಗೂ ವೇಗ ಮಿತಿ ಅಳವಡಿಸಿಕೊಳ್ಳದೆ ವಾಹನ ಚಲಾಯಿಸುವುದು ಒಂದು ಶೋಕಿಯಾಗಿದೆ ಮೇಲಿನ ವರ್ಗದವರಲ್ಲಿ. ಸುದ್ದಿ ಮಾಧ್ಯಮಗಳಲ್ಲಿ ವೀಕ್ಷಿಸಿದಂತೆ ಈ ಹಿಂದೆ ಪುಣೆಯಲ್ಲಿ ನಡೆದ ಪೋರ್ಶೆ ಕಾರಿನಿಂದಾದ ಅಪಘಾತ, ಮುಂದುವರೆದು ಮುಂಬೈಯಲ್ಲಿ ನಡೆದ ಬಿಎಂಡಬ್ಲ್ಯೂ ಕಾರಿನಿಂದದ ಅಪಘಾತಗಳು ರಸ್ತೆಯಲ್ಲಿ ಓಡಾಡುವ ಸಾಮಾನ್ಯ ಜನರ ಜೀವನದ ಜೊತೆ ಚೆಲ್ಲಾಟವಾಡಿರುವುದನ್ನು ನೋಡಿದರೆ ಮನಸ್ಸು ಕ್ರೋಧಿತವಾಗುತ್ತದೆ. ವಿಲಾಸಿ ಜೀವನಕ್ಕೆ ಹಾಗೂ ಮೋಜು, ಮಸ್ತಿಗೆ ಮೊರೆ ಹೋದ ಇಂದಿನ ಪೀಳಿಗೆಯು ಅಪಾಯದ ದಾರಿ ಹಿಡಿಯುತ್ತಲಿವೆ ಮದ್ಯಪಾನ ಮಾಡಿ ವಾಹನ ಚಲಾಯಿಸುವುದು, ಧ್ವನಿವರ್ಧಕಗಳನ್ನು ಬಳಸಿ ವಾಹನ ಚಲಾಯಿಸುವುದು, ಅಲ್ಲದೆ ಅತ್ಯಂತ ವೇಗವಾಗಿ (ವೇಗಮಿತಿ ರಹಿತ)ವಾಹನ ಚಾಲನೆ ಮಾಡುವುದರ ಮೂಲಕ ತಮ್ಮ ಜೀವದ ಜೊತೆಗೆ ಇನ್ನಿತರ ವಾಹನ ಸವಾರರ ಜೀವನಕ್ಕೂ ಅಪಾಯ ತಂದೊಡ್ಡುತ್ತಿದ್ದಾರೆ. ಇದರಿಂದಾಗಿ ಸಾಮಾಜಿಕ ಮೌಲ್ಯಗಳಿಗೆ ಕಂಟಕ ಬರುವುದು ಖೇದಕರ ಸಂಗತಿಯಾಗಿದೆ.

ಆದ್ದರಿಂದ ವಾಹನ ಚಾಲನಾ ನಿಯಮಗಳು ಕಟ್ಟುನಿಟ್ಟಾಗಿ ಜಾರಿಗೆ ಬರಬೇಕು ಅಲ್ಲದೆ ನಿಯಮ ಉಲ್ಲಂಘಿಸಿದವರು ಎಂತಹ ಪ್ರಭಾವಿ ವ್ಯಕ್ತಿಯಾಗಿದ್ದರು ಅವರ ತಪ್ಪಿಗೆ ತಕ್ಕ ಶಿಕ್ಷೆ ನೀಡುವ ಪಾರದರ್ಶಕ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು,ಅಪರಾಧಿಯು ತಾನು ಮಾಡಿದ ತಪ್ಪಿಗೆ ತಕ್ಕ ಶಿಕ್ಷೆಯನ್ನು ಅನುಭವಿಸಲೇ ಬೇಕು. ಹೀಗಿದ್ದಾಗ ಮಾತ್ರ ಮುಂದೆ ಇಂತಹ ಅಹಿತಕರ ಘಟನೆಗಳು ಜರುಗದಂತೆ ಮುನ್ನೆಚ್ಚರಿಕೆ ನೀಡಬಹುದಾಗಿದೆ. ವೇಗಮಿತಿ ರಹಿತ ಚಾಲನೆ ಮಾಡುವ ಪ್ರತಿಯೊಬ್ಬರಿಗೂ ಕಠಿಣ ಕ್ರಮ ಕೈಗೊಂಡು ಮುಗ್ಧ ಪ್ರಾಣಿ ಹಾಗೂ ಮನುಷ್ಯರ ಜೀವಕ್ಕೆ ರಕ್ಷಣೆ ಒದಗಿಸಬೇಕಾಗಿದೆ.

– ಅಶ್ವಿನಿ ಅಂಗಡಿ, ಬದಾಮಿ

ಕರಗಿದ ಕಂಚಿನ ಕಂಠ

ಅಪರ್ಣಾ....
ಹೆಸರಾಯಿತು ಕನ್ನಡಕ್ಕೆ ಅರ್ಪಣೆ.
ಕನ್ನಡ ವಾಗ್ದೇವಿಯ ಸಿರಿನುಡಿ ಕಂಠ.
ಸಭಾ ವೇದಿಕೆಯೇ ಬೆರಗಾಗಿ ಸೆಳೆವ,
ಮನಮೋಹಕ ನುಡಿ.
ಸುಸ್ಪಷ್ಟ ವ್ಯಾಕರಣವೇ ಮೆತ್ತಂತ
ಸಿರಿಕಂಠ.
ಅಪರೂಪದ ಅಪರ್ಣಾ ಒಂದೇ
ಕನ್ನಡಕ್ಕೆ ಸಿರಿಮುತ್ತು.
ಕನ್ನಡಮ್ಮನ ಮಡಿಲು ಸೇರಿದ
ಓ ಚೇತನವೇ,
ನಿನಗಿದೋ ಅಶ್ರು ತರ್ಪಣ.

– ದೇವರಹಳ್ಳಿ ಲೋಕೇಶ್ ಪಾಂಡವಪುರ.

ಓದುಗರ ಓಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

● ವಿನಯ ಗುಣವಂತೆ (ಇಮೇಲ್ ಮೂಲಕ)
ಭಟ್ರೇ, ನೀವು ಕೂಡ ಬೆಂಗಳೂರಿನ ರಾಜರಾಜೇಶ್ವರಿನಗರದಲ್ಲಿಯೇ ವಾಸಿಸುತ್ತೀರಂತೆ?
- ಹೂಂ.. ಕರೆಕ್ಟಾಗಿ ಹೇಳಬೇಕು ಅಂದ್ರೆ ಶೆಡ್ಡಿನಿಂದ ಅರ್ಧ ಮೈಲಿ!

● ರಾಜೇಶ್ ಕೆ., (ಇಮೇಲ್ ಮೂಲಕ)
ಭಟ್ರೇ, ವಿದೇಶ ಪ್ರಯಾಣದಿಂದ ನೀವು ಬಹಳ ಸುಸ್ತಾದೀರಿ ಅಂತಾಳಲ್ಲ ಇಲ್ಲೊಬ್ಬಳು?
- ವಿದೇಶ ಪ್ರಯಾಣ ಹೋಗಿದ್ದಿದ್ದರೆ ಎದೆ ನೋವು ಕಾಣಿಸಿಕೊಳ್ಳುತ್ತಿರಲಿಲ್ಲವೇನೋ?!

● ರವೀಶ ಜೋಶಿ, ಬೆಂಗಳೂರು
ಭಟ್ರೇ, ನಿಮ್ಮ ಅನಾರೋಗ್ಯದಿಂದ ಹಾನಿಯಾಗಿದ್ದು ಯಾರಿಗೆ?
- ಏರ್ ಲೈನ್ಸ್ ಕಂಪನಿಗಳಿಗೆ!

● ಸಂಗೀತಾ ಮಾನ್ವಿ, ಮಾನ್ವಿ
ಸಾರ್, 'ನನಗೆ ಎದೆನೋವು ಬಂದಿತ್ತು' ಎಂಬ ಪುಸ್ತಕವನ್ನು ನಿಮ್ಮಿಂದ ನಿರೀಕ್ಷಿಸಬಹುದಾ?
- 'ಎದೆನೋವು : ಆಳ-ಅಗಲ' ಎಂಬ ಶೀರ್ಷಿಕೆ ಹೇಗೆ?!

● ಆರ್. ಶ್ರೀಧರ, ಕೋಣನಕುಂಟೆ
ಭಟ್ರೇ, ನಿಮಗೆ ಮಾಡಲು ಬೇರೆ ಕೆಲಸ ಇದೆಯಾ?
- ನಿಮಗೆ ಮಾಡಲು ಬೇರೆ ಕೆಲಸ ಇಲ್ಲವಾ ಅಂತ ಕೇಳಿದ್ದರೆ, ಶೆಡ್ಡಿಗೆ ಬಾ ಅಂತ ಅಂತಿದ್ದೆ!

● ಕೃಷ್ಣ ಕುಮಾರ್ ಎ., (ಇಮೇಲ್ ಮೂಲಕ)
ಭಟ್ರೇ, ನಾನು ದಿನಪತ್ರಿಕೆ ಆಗಿ ಹುಟ್ಟಬೇಕಿತ್ತು, ಅಗ ನಿಮ್ಮ ಕೈಯೆಲ್ಲೇ ಇರ್ತಿದ್ದೆ ಅಂತಾಳಲ್ಲ?
- ಪ್ರತಿದಿನ ಬದಲಿಸಬೇಕಾಗುತ್ತೆ ಅನ್ನೋದು ಗೊತ್ತಿಲ್ಲ ಅಂತ ಕಾಣುತ್ತೆ!

● ಸಿದ್ದೇಶ ತುಮಕೂರು, (ಇಮೇಲ್ ಮೂಲಕ)
ಭಟ್ರೇ, ಎದೆನೋವಿನ ನಂತರ ನಿಮ್ಮ ಎದೆ ಮತ್ತಷ್ಟು ವಿಶಾಲವಾಗಿದೆಯಂತೆ?
- ಎದೆನೋವಿಗೆ ಕಾರಣವಾಗಿದ್ದೂ ಅದೇ!

● ರವಿ ಕಣವಿ, ಧಾರವಾಡ
ಭಟ್ರೇ, ನೋಡಲು ಅಮಾಯಕವಾಗಿರುವ ಗಂಡಸರನ್ನು ಹೆಂಗಸರು ಇಷ್ಟಪಡ್ತಾರಂತೆ?
- ನನ್ನ ಸಮಸ್ಯೆಯನ್ನು ನಿನಗೆ ಹೇಳೋದು ಗೊತ್ತಾಗ್ತಾ ಇಲ್ಲ!

● ಲಿಂಗೇಶ, (ಇಮೇಲ್ ಮೂಲಕ)
ಭಟ್ರೇ, ಲವ್ವರುಗಳು ಯಾವ ಭಾಷೆಯಲ್ಲಿ ಮಾತಾಡುತ್ತಾರೆ?
- ಅದು ಎಂಡ್ -ಟು-ಎಂಡ್ ಎನ್ಕ್ರಿಪ್ಟ್ ಆಗಿರುತ್ತದೆ!

● ರಮೇಶ ಗೌಡ, ಮಳವಳ್ಳಿ
ಭಟ್ರೇ, ಜಯಪ್ರಕಾಶ ಶೆಟ್ಟರ ಒಂದು ಮಾತು ಈ ಪರಿ ಪ್ರಸಿದ್ಧ ಆಗೋದಾ?
- ಅಷ್ಟು ಫೇಮಸ್ ಆಗುತ್ತೆ ಅಂತ ಗೊತ್ತಿದ್ದಿದ್ದರೆ 'ನಿಮಗೆ ಮಾಡಲು ಬೇರೆ ಕೆಲಸ ಇಲ್ಲವಾ?' ಎಂದು ಬಿಜೆಪಿ ನಾಯಕರಿಗೆ ಹೇಳ್ತಾ ಇದ್ದೆ ಅಂದ್ರಂತೆ ಸಿದ್ದರಾಮಯ್ಯ!

ಡೆಂಘೀ ಜ್ವರದಲ್ಲಿ ಆಯುರ್ವೇದೋಕ್ತ ಉಪಚಾರ

ಮಳೆಗಾಲದಲ್ಲಿ ಜ್ವರದ ಸೋಂಕು ಹಲವರನ್ನು ಕಾಡುತ್ತಿರುವುದನ್ನು ನಾವು ಗಮನಿಸುತ್ತೇವೆ. ಡೆಂಘೀ ಸಹ ಅಂತಹ ಜ್ವರಗಳಲ್ಲಿ ಒಂದು.ಮಳೆಗಾಲದಲ್ಲಿಯೇ ಈ ಸೋಂಕು ಹೆಚ್ಚಾಗುವ ಸಂಭವ ಏಕೆ ಎಂದರೆ ಈ ಕಾಲದಲ್ಲಿ ನಮ್ಮ ಜೀರ್ಣಶಕ್ತಿ, ದೈಹಿಕ ಬಲ ಹಾಗೂ ರೋಗನಿರೋಧಕ ಶಕ್ತಿ ಕಡಿಮೆ ಇರುತ್ತದೆ. ವಾತಾವರಣದ ಪ್ರಭಾವದಿಂದ ನಾವು ಸೇವಿಸುವ ಆಹಾರವು ಹುಳಿಗೊಂಡು ಅದರಿಂದ ದೇಹದಲ್ಲಿ ರಕ್ತ ಮತ್ತು ಪಿತ್ತ-ವಾತಗಳ ಅಸಮತೋಲನ ಕಂಡುಬರುತ್ತದೆ.

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ

ಡಾ.ಸಾಧನಶ್ರೀ
vveditoped@gmail.com

ಆಯುರ್ವೇದದಲ್ಲಿ ಜ್ವರವನ್ನು ರೋಗಪತಿ ಎಂದು ಕರೆಯಲಾಗಿದೆ. ಏಕೆಂದರೆ, ರೋಗಗಳಲ್ಲಿ ಜ್ವರಕ್ಕೆ ಅತ್ಯಂತ ಪ್ರಾಧಾನ್ಯತೆಯನ್ನು ನೀಡಿದೆ. ಅಲ್ಲದೆ, ರೋಗದ ತೀವ್ರತೆಯನ್ನೂ ಅದು ಸೂಚಿಸುತ್ತದೆ. ಲೋಕದಲ್ಲಿ ಯಾರನ್ನೂ ಬಿಡದ ಈ ಜ್ವರವು ಮೊಟ್ಟ ಮೊದಲ ಬಾರಿಗೆ ಹೇಗೆ ಉತ್ಪತ್ತಿಯಾಯಿತು ಎಂಬ ಪ್ರಶ್ನೆಗೆ ಒಂದು ಸ್ವಾರಸ್ಯಕರವಾದ ಘಟನೆಯ ಉತ್ತರವಿದೆ.

'ದಕ್ಷ ಯಜ್ಞ' ಎಂಬ ಕಥೆಯನ್ನು ಬಹುಶಃ ನಾವೆಲ್ಲರೂ ಕೇಳಿರುತ್ತೇವೆ. ಈ ಒಂದು ರೋಮಾಂಚಕ ಪ್ರಸಂಗದಲ್ಲಿಯೇ ಜ್ವರದ ಉತ್ಪತ್ತಿಯ ಕಥೆಯೂ ಅಡಗಿದೆ. ದಕ್ಷ ಪ್ರಜಾಪತಿಯು ಶಿವನನ್ನು ಅವಮಾನಿಸಲೆಂದೇ ದಕ್ಷ ಯಜ್ಞವನ್ನು ಆಯೋಜಿಸುತ್ತಾನೆ. ತನ್ನ ಮಗಳು ಸತಿ ಮತ್ತು ಅಳಿಯ ಶಿವನಿಗೆ ಈ ಯಜ್ಞಕ್ಕೆ ಆಮಂತ್ರಣ ನೀಡುವುದಿಲ್ಲ. ಆದರೂ ತವರು ಮನೆಯ ವ್ಯಾಮೋಹ ಸತಿಯನ್ನು ಯಜ್ಞಕ್ಕೆ ಸೆಳೆದೊಯ್ಯುತ್ತದೆ. ಶಿವನ ಒಪ್ಪಿಗೆ ಇಲ್ಲದಿದ್ದರೂ ಸತಿ ತಾನೊಬ್ಬಳೇ ತಂದೆಯ ಮನೆಗೆ ಹೋಗಲು ನಿರ್ಧರಿಸುತ್ತಾಳೆ. ಕರೆಯದ ಮಗಳು ಯಜ್ಞಕ್ಕೆ ಬಂದಿದ್ದನ್ನು ಕಂಡು ದಕ್ಷಪ್ರಜಾಪತಿಯು ಅವಳಿಗೆ ಹಾಗೂ ಅವಳ ಪತಿಯಾದ ಶಿವನಿಗೆ ಹೀನಾಯವಾಗಿ ಬೈದು ಅವಮಾನಿಸುತ್ತಾನೆ. ಇಂತಹ ಸ್ಥಿತಿಯಲ್ಲಿ ಒಂದು ಕಡೆ ಪತಿಯ ಮಾತನ್ನು ಕೇಳದೆ ಬಂದಿದ್ದರಿಂದ ಸತಿಯು ಶಿವನ ಬಳಿ ಹಿಂದಿರುಗಿ ಹೋಗುವಂತೆಯೂ ಇರಲಿಲ್ಲ. ಇನ್ನೊಂದು ಕಡೆ ತಂದೆಯ ಕಠೋರವಾದ ಮಾತುಗಳನ್ನು ಹಾಗೂ ಪತಿಗೆ ಆಗುತ್ತಿದ್ದ ಅವಮಾನವನ್ನು ಕೇಳಲು ಅವಳಿಗೆ ಸಾಧ್ಯವಾಗುತ್ತಿರಲಿಲ್ಲ. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಸತಿಗೆ ತನ್ನ ಮುಂದಿನ ಹೆಜ್ಜೆ ಏನಿರಬೇಕು ಎಂಬುದು ತೋಚುತ್ತಿರಲಿಲ್ಲ. ಯಜ್ಞದ ಸಮಯದಲ್ಲಿ ದಕ್ಷಪ್ರಜಾಪತಿಯು ಎಲ್ಲ ದೇವತೆಗಳಿಗೂ ಹವಿಸ್ಸನ್ನು ಕೊಟ್ಟು ರುದ್ರನಿಗೆ ಮಾತ್ರ ರುದ್ರ ಭಾಗವನ್ನು ಕೊಡುವುದಿಲ್ಲ. ಇದನ್ನು ಗಮನಿಸಿದ ಸತಿಯು ಯೋಚಿಸುತ್ತಾಳೆ, ಯಜ್ಞದಲ್ಲಿ ರುದ್ರ ಭಾಗವನ್ನು ಕೊಡದೆ ಹೋದರೆ ಯಜ್ಞ ಸಂಪೂರ್ಣವಾಗುವುದಿಲ್ಲ. ಹಾಗೆಯೇ ಯಜ್ಞ ಕರ್ತೃವಿಗೂ ದೋಷ ಉಂಟಾಗುತ್ತದೆ. ಯಜ್ಞವು ಸಂಪನ್ನವಾಗಬೇಕು ಹಾಗೆಯೇ ತಂದೆಗೂ ದೋಷ ಬರಬಾರದು ಮತ್ತು ಪತಿಯ ಮಾತನ್ನು ಕೇಳದ ತಪ್ಪಿಗೆ ಪ್ರಾಯಶ್ಚಿತ್ತವೂ ಆಗಬೇಕು ಎಂದು ಸತಿಯು ಯೋಚಿಸಿ ಯಜ್ಞಕುಂಡಕ್ಕೆ ಹಾರಿಬಿಡುತ್ತಾಳೆ. ಇದನ್ನು ಅರಿತ ಶಿವನು ಅತ್ಯಂತ ಕ್ರೋಧಿತನಾಗಿ ತನ್ನ ಅಂಶದಿಂದ ವೀರಭದ್ರ ಎಂಬುವನನ್ನು ಸೃಷ್ಟಿ ಮಾಡುತ್ತಾನೆ. ಇಡೀ ದಕ್ಷಯಜ್ಞವನ್ನು ಧ್ವಂಸ ಮಾಡಲು ಅವನನ್ನು ಕಳಿಸುತ್ತಾನೆ. ವೀರಭದ್ರನು ದಕ್ಷ ಯಜ್ಞದ ಸ್ಥಳಕ್ಕೆ ಧಾವಿಸಿ, ಅಲ್ಲಿದ್ದವರನ್ನೆಲ್ಲಾ ಧ್ವಂಸ ಮಾಡಿ ಇಡೀ ಯಜ್ಞವನ್ನೇ ಚೆಲ್ಲಾಪಿಲ್ಲಿ ಮಾಡುತ್ತಾನೆ. ನಂತರ ಶಿವನ ಬಳಿ ಮರಳಿ ಬಂದು ನೀವು ಹೇಳಿದ ಕೆಲಸವನ್ನು ಮುಗಿಸಿದ್ದೇನೆ, ಇನ್ನು ಮುಂದೆ ನನಗೇನು ಕೆಲಸ ಎಂದು ಕೇಳುತ್ತಾನೆ. ಆಗ ಶಿವನು ಇನ್ನು ಮುಂದೆ ತಪ್ಪು ಮಾಡಿದವರಿಗೆಲ್ಲಾ ಶಿಕ್ಷೆಯನ್ನು ನೀಡಲು ನೀನು 'ಜ್ವರ' ಎಂಬ ರೂಪವನ್ನು ತಾಳು ಎಂದು ಅವನಿಗೆ ಹೇಳುತ್ತಾನೆ. ಈ ರೀತಿಯಾಗಿ ಜ್ವರ ಎಂಬ ಮಹಾರೋಗವು ದಕ್ಷ ಯಜ್ಞದ ಧ್ವಂಸದ ಸಂದರ್ಭದಲ್ಲಿ, ತಪ್ಪು ಮಾಡಿದವರಿಗೆ ಶಿಕ್ಷೆಯ ರೂಪದಲ್ಲಿ ಮೊದಲು ಉಂಟಾಗಿ, ನಂತರ ಎಲ್ಲ ಕಾಲದಲ್ಲಿಯೂ ಯಾವುದೇ ಪ್ರಕಾರದ ಜ್ವರ ಬರಬೇಕಾದರೂ ನಮ್ಮ ಆಹಾರ-ವಿಹಾರ-ವಿಚಾರಗಳಲ್ಲಿ ನಮಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಆಗುವ ತಪ್ಪುಗಳೇ ಕಾರಣವಾಗುತ್ತದೆ.

ಶರೀರ-ಇಂದ್ರಿಯ-ಮನಸ್ಸುಗಳು ಒಟ್ಟೊಟ್ಟಿಗೆ ತಾಪ ಹಾಗೂ ಚಡಪಡಿಕೆಗೆ ಒಳಗಾಗುವುದನ್ನು 'ಜ್ವರ' ಎನ್ನಲಾಗುತ್ತದೆ. ಆಯುರ್ವೇದದಲ್ಲಿ ಜ್ವರ ರೋಗವನ್ನು ಅತ್ಯಂತ ದೀರ್ಘವಾಗಿ ಹಾಗೂ ಸವಿವರವಾಗಿ ಉಲ್ಲೇಖಿಸಿದ್ದಾರೆ. ಹಲವಾರು ರೀತಿಯ ಜ್ವರಗಳ ಬಗ್ಗೆ ಹೇಳಿ ಅದರ ಸೂಕ್ತವಾದ ಚಿಕಿತ್ಸೆಗಳನ್ನು ಸಹ ತಿಳಿಸಿಕೊಟ್ಟಿದ್ದಾರೆ. ಈ ಅನೇಕ ವಿಧವಾದ ಜ್ವರಗಳಲ್ಲಿ ಈಗ ಅತ್ಯಂತ ಚರ್ಚೆಯಲ್ಲಿರುವುದು ಹಾಗೂ ತುಂಬಾ ಜನರನ್ನು ಕಾಡುತ್ತಿರುವುದು ಡೆಂಘೀ ಜ್ವರ. ಇದು ಹೊಸದೇನಲ್ಲ. ಆಯುರ್ವೇದ ಗ್ರಂಥಗಳು ಈ ರೀತಿಯ ಸಾಂಕ್ರಾಮಿಕ ಜ್ವರದ ಬಗ್ಗೆ ವಿವರವಾಗಿ ತಿಳಿಸಿಕೊಟ್ಟಿವೆ. ಆಯುರ್ವೇದದ ಚೌಕಟ್ಟಿನಲ್ಲಿ ಈ ಒಂದು ರೋಗದ ಬಗ್ಗೆ ಕೆಲವು ವಿಷಯಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡೋಣ.

ಮಳೆಗಾಲದಲ್ಲಿ ಜ್ವರದ ಸೋಂಕು ಹಲವರನ್ನು ಕಾಡುತ್ತಿರುವುದನ್ನು ನಾವು ಗಮನಿಸುತ್ತೇವೆ. ಡೆಂಘೀ ಸಹ ಅಂತಹ ಜ್ವರಗಳಲ್ಲಿ ಒಂದು. ಮಳೆಗಾಲದಲ್ಲಿಯೇ ಈ ಸೋಂಕು ಹೆಚ್ಚಾಗುವ ಸಂಭವ ಏಕೆ ಎಂದರೆ ಈ ಕಾಲದಲ್ಲಿ ನಮ್ಮ ಜೀರ್ಣಶಕ್ತಿ, ದೈಹಿಕ ಬಲ ಹಾಗೂ ರೋಗನಿರೋಧಕ ಶಕ್ತಿ ಅತ್ಯಂತ ಕಡಿಮೆ ಇರುತ್ತದೆ. ವಾತಾವರಣದ ಪ್ರಭಾವದಿಂದ ನಾವು ಸೇವಿಸುವ ಆಹಾರವು ಹುಳಿಗೊಂಡು ಅದರಿಂದ ದೇಹದಲ್ಲಿ ರಕ್ತ ಮತ್ತು ಪಿತ್ತ-ವಾತಗಳ ಅಸಮತೋಲನ ಸಹ ಕಂಡುಬರುತ್ತದೆ. ಈ ಆಂತರಿಕ ಬದಲಾವಣೆಯಿಂದ ಮಳೆಗಾಲದಲ್ಲಿ ಡೆಂಘೀ ಜ್ವರ ಹೆಚ್ಚುತ್ತದೆ. ಉಷ್ಣವಲಯ ಮತ್ತು ಅರೆ ಉಷ್ಣವಲಯದ ಪ್ರದೇಶಗಳಲ್ಲಿ ಈ ಡೆಂಘೀ ಜ್ವರ ಜಾಸ್ತಿ. ಏಡಿಸ್ ಈಜಿಪ್ಟಿ ಎಂಬ ಸೊಳ್ಳೆಯ ಜಾತಿಯು ಈ ಡೆಂಘೀ ವೈರಸ್ಸುಗಳ ವಾಹಕಗಳು. ಒಬ್ಬ ಸೋಂಕಿತ ವ್ಯಕ್ತಿಯನ್ನು ಈ ಸೊಳ್ಳೆ ಕಚ್ಚಿ ನಂತರ ಒಬ್ಬ ಆರೋಗ್ಯವಂತನನ್ನು ಪುನಃ ಕಚ್ಚಿದಾಗ ಈ ಸೋಂಕು ಹರಡುತ್ತದೆ.

ಸಾಮಾನ್ಯವಾಗಿ ಈ ಜ್ವರ ನಮ್ಮನ್ನು ಆವರಿಸಲು ನಾವು ಮಾಡುವ ತಪ್ಪುಗಳಾವುವು?

ಜೀರ್ಣಕ್ಕೆ ಜಡವಾದ ಆಹಾರ ಸೇವನೆಯ ಅಭ್ಯಾಸ, ಅಜೀರ್ಣವನ್ನು ನಿರ್ಲಕ್ಷಿಸಿ ತಿನ್ನುವುದು, ಹಸಿವೆ ಇಲ್ಲದಿದ್ದಾಗಲೂ ಮನಬಂದಂತೆ ಆಹಾರ ಸೇವಿಸುವುದು, ಹುಳಿತೇಗು-ಎದೆ ಉರಿ-ಹೊಟ್ಟೆ ಉಬ್ಬರದಂತಹ ಅಜೀರ್ಣ ಲಕ್ಷಣಗಳು ಇದ್ದಾಗಲೂ ಎಂದಿನಂತೆ ಆಹಾರ ಸೇವನೆ ಮುಂದುವರಿಸುವುದು, ತಡರಾತ್ರಿ ನಿದ್ರೆ ಅಥವಾ ರಾತ್ರಿ ಜಾಗರಣೆ ಮಾಡುವುದು, ಹಗಲು ನಿದ್ರಿಸುವುದು, ತಂಗಳು ಮತ್ತು ತಂಪಾದ ಆಹಾರ ಸೇವನೆ, ಶಾರೀರಿಕ ಶಕ್ತಿಯ ಅರಿವಿಲ್ಲದೆ ವ್ಯಾಯಾಮ, ಕೆಲಸ ಮಾಡುವುದು, ಗಾಳಿ, ಮಳೆ, ಶೀತಕ್ಕೆ ಮೈಯೊಡ್ಡಿ ಪ್ರಯಾಣ ಮಾಡುವುದು, ಅತಿಯಾದ ಉಪ್ಪು-ಖಾರ-ಹುಳಿ ಇರುವ ಪದಾರ್ಥಗಳನ್ನು ಸದಾ ಸೇವಿಸುವುದು, ಅತಿಯಾದ ಚಿಂತೆ, ಕೋಪ ಮತ್ತು ಅಸೂಯೆಯಲ್ಲಿ ತೊಡಗಿರುವುದು.

ಡೆಂಗೀ ಜ್ವರದ ಸಾಮಾನ್ಯ ಲಕ್ಷಣಗಳೇನು?

ಅತಿಯಾದ ತೀವ್ರ ತಾಪದ ಜ್ವರ, ಬೆನ್ನುಹುರಿ ನೋವು, ತಲೆ ನೋವು, ಸೊಂಟ ಮೊದಲಾದ ಸಂಧಿಗಳ ನೋವು, ಕಣ್ಣು ಗುಡ್ಡೆಯ ಹಿಂದೆ ನೋವು, ಮಾಂಸಖಂಡ ಮತ್ತು ಸ್ನಾಯುಗಳ ಸೆಳೆತ, ಹಸಿವೆ ಇಲ್ಲದಿರುವುದು, ಹೊಟ್ಟೆ ನೋವು, ವಾಂತಿ ಬೇಧಿ, ಮೈಯಲ್ಲಿ ತುರಿಕೆ ಮತ್ತು ಸುಸ್ತಾಗುವುದು. ಜ್ವರವು ತೀವ್ರವಾದಂತೆ ವಸಡು-ಮೂಗುಗಳಿಂದ ರಕ್ತಸ್ರಾವ, ಮೈ ಮೇಲೆ ದದ್ದು, ಗುಳ್ಳೆಗಳು ಏಳುವುದು, ಅತಿಯಾದ ತುರಿಕೆ, ರಕ್ತಸ್ರಾವದ ನಿಯಂತ್ರಣ ಕಷ್ಟವಾಗುವುದು.

ಈ ರೋಗಕ್ಕೆ ಚಿಕಿತ್ಸೆ ಏನು?

ಸೊಳ್ಳೆ ಕಚ್ಚಿದವರಿಗೆಲ್ಲ ಈ ಜ್ವರ ಬರಬೇಕೆಂದಿಲ್ಲ, ಶರೀರದ ಆಂತರಿಕ ವ್ಯವಸ್ಥೆ ಸರಿ ಇದ್ದು, ಜೀರ್ಣಕ್ರಿಯೆ, ರೋಗ ನಿರೋಧಕ ಶಕ್ತಿ ಉತ್ತಮವಾಗಿದ್ದು, ಬಲ ಚೆನ್ನಾಗಿದ್ದಲ್ಲಿ ಈ ಸೋಂಕು ಬಂದರೂ ಹೆಚ್ಚು ತೊಂದರೆ ಕೊಡದೆ ನಿವಾರಣೆ ಆಗುತ್ತದೆ. ನಿಮ್ಮ ಒಳಗೆ ದೋಷಗಳ ವಿಷಮತೆ ಎಷ್ಟಿದೆ ಅನ್ನುವುದರ ಮೇಲೆ ನಿಮಗೆ ಕಾಣಿಸಿಕೊಳ್ಳುವ ಲಕ್ಷಣಗಳ ತೀವ್ರತೆ ನಿರ್ಧಾರವಾಗುತ್ತದೆ. ಸಕ್ರಮ-ಸಕಾಲ ಆಹಾರ-ವಿಹಾರ-ಔಷಧಗಳಿಂದ ಈ ಜ್ವರದಿಂದ ಅತ್ಯಂತ ಶೀಘ್ರವಾಗಿ ಮುಕ್ತಿ ಪಡೆಯಬಹುದು. ಜ್ವರ ಬಂದ ಕೂಡಲೇ ಆರೋಗ್ಯವನ್ನು ಆದ್ಯತೆಯನ್ನಾಗಿಸಿಕೊಂಡು ಸಂಪೂರ್ಣ ವಿಶ್ರಾಂತಿ ಪಡೆಯಬೇಕು. ದೇಹಕ್ಕಷ್ಟೇ ಅಲ್ಲದೆ ಇಂದ್ರಿಯ ಮತ್ತು ಮನಸ್ಸುಗಳಿಗೂ ವಿಶ್ರಾಂತಿ ಕೊಡಬೇಕು . ಮೊಬೈಲ್ ಫೋನ್, ಲ್ಯಾಪ್‌ಟಾಪ್, ಟಿವಿಗಳನ್ನು ತ್ಯಜಿಸಿ ಮನಸ್ಸಿಗೆ ಮುದ ನೀಡುವಂತಹ ಸಂಗೀತದ ಶ್ರವಣ ಅಥವಾ ಜ್ವರನಿವಾರಕ ಶಕ್ತಿ ಇರುವ ವಿಷ್ಣು ಸಹಸ್ರನಾಮವನ್ನು ಆಲಿಸುವುದು ಒಳ್ಳೆಯದು. ಜ್ವರವಿದ್ದಾಗ ಸ್ನಾನ ಬೇಡ, ಬೆಚ್ಚಗಿನ ನೀರಿನಿಂದ ಅದ್ದಿದ ಮೃದು ಬಟ್ಟೆಯಿಂದ ಮೈಯನ್ನು ಒರೆಸಬಹುದು. ತಲೆಗೆ ತುಪ್ಪ ಅದ್ದಿದ ಹತ್ತಿಯನ್ನು (ಪಿಚು) ಸದಾ ಕಟ್ಟಬೇಕು ಅಥವಾ ನೆಲ್ಲಿಕಾಯಿ ಪುಡಿಯನ್ನು ಮಜ್ಜಿಗೆಯೊಂದಿಗೆ ಕಲಸಿ ತಲೆಗೆ ಲೇಪನ ಮಾಡಿದಾಗ, ಇದು ತಾಪವನ್ನು ಇಳಿಸುವುದರ ಜತೆಗೆ ಜ್ವರಕಾರಕ ದೋಷಗಳನ್ನು ಜೀರ್ಣಾಂಗಕ್ಕೆ ತಂದು ಮಲಮೂತ್ರದ ಮೂಲಕ ದೇಹದಿಂದ ಹೊರ ಹಾಕುತ್ತದೆ. ಹಣೆಗೆ ಸದಾ ತಣ್ಣೀರಿನ ಬಟ್ಟೆ ಅಥವಾ ಶ್ರೀಗಂಧದ ಶೀತ ಲೇಪವನ್ನು ಹಾಕುವುದು ಒಳ್ಳೆಯದು. ವೈದ್ಯರ ಸಲಹೆ ಪಡೆದು ಜ್ವರಹರ, ವಿಷಹರ ಔಷಧಗಳನ್ನು ಅತ್ಯಂತ ಕಡಿಮೆ ಪ್ರಮಾಣದಲ್ಲಿ ತೆಗೆದುಕೊಳ್ಳುವುದರಿಂದ ಸಾಮಾನ್ಯವಾಗಿ ಒಂದೆರಡು ದಿನಗಳಲ್ಲಿ ಜ್ವರ ಇಳಿಯುತ್ತದೆ, ಜತೆಗೆ ರಕ್ತಸ್ರಾವ ಸೋರಿಕೆ, ಪ್ಲೇಟ್ಲೆಟ್‌ಗಳ ಇಳಿಕೆ, ಸುಸ್ತು ಇವುಗಳು ಸಹ ಬೇಗ ಚೇತರಿಕೆ ಆಗುತ್ತದೆ. ವಿವಿಧ ಪಂಚಕರ್ಮ ಚಿಕಿತ್ಸೆ ಹಾಗೂ ರಸಾಯನ ಚಿಕಿತ್ಸೆಗಳನ್ನು ಸಹ ಕೊಟ್ಟು ದೇಹವನ್ನು ಸಹಜ ಸ್ಥಿತಿಗೆ ತಂದು ಪುಷ್ಟಿಯನ್ನು ಹಾಗೂ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲಾಗುತ್ತದೆ.

ಜ್ವರ ಬಂದಾಗ ನಾವು ನಿತ್ಯ ಸೇವಿಸುವ ಆಹಾರವನ್ನೇ ಸೇವಿಸಿದರೆ ಜೀರ್ಣ ಆಗದು. ಆದ್ದರಿಂದ ಇಂತಹ ಸಮಯದಲ್ಲಿ ನಮ್ಮ ಹಸಿವೆಯನ್ನು ಗಮನಿಸಿ ಹಗುರವಾಗಿ ಜೀರ್ಣವಾಗುವ, ಬೇಗ ಬಲವನ್ನು ನೀಡುವ ಆಹಾರ ಸೇವಿಸಬೇಕು. 'ಲಂಘನಂ ಪರಮೌಷಧಮ್' ಎಂದು ಹೇಳುವ ಹಾಗೆ, ಹಸಿವೆಯು ಅತ್ಯಂತ ಕಡಿಮೆ ಇದ್ದಾಗ, ಜ್ವರದಲ್ಲಿ ಉಪವಾಸ ಮಾಡುವುದೇ ಮುಖ್ಯ ಚಿಕಿತ್ಸೆಯಾಗುತ್ತದೆ. ಸ್ವಲ್ಪ ಹಸಿವು ಕಾಣಿಸಿಕೊಂಡಾಗ ಭತ್ತದ ಅರಳಿನ ಪುಡಿ, ಜೋಳದ ಪುಡಿ, ರವೆಯನ್ನು ಗಂಜಿಯಂತೆ ಮಾಡಿ ಸೇವಿಸಬೇಕು. ಅಕ್ಕಿ ಮತ್ತು ಹೆಸರುಬೇಳೆಯ ಹುರಿದ ಗಂಜಿಯನ್ನು ಸಹ ನೀಡಬಹುದು. ಅರಳನ್ನು ಪುಡಿ ಮಾಡಿ ಅದಕ್ಕೆ ದಾಳಿಂಬೆ ರಸವನ್ನು (ಬೀಜ ತೆಗೆದ) ಹಾಕಿ ಕುಡಿಯಬಹುದು. ಹೆಸರುಬೇಳೆ ಬೇಯಿಸಿದ ನೀರಿಗೆ ಚಿಟಿಕೆ ಸೈಂಧವ ಲವಣ ಸೇರಿಸಿ ಕುಡಿಯಲು ಕೊಡಬಹುದು. ನಂತರ, ಹಸಿವೆ ಹೆಚ್ಚಾದಂತೆ ಹುರಿದ ಅಕ್ಕಿಯ ಮೆತ್ತಗಿನ ಅನ್ನಕ್ಕೆ, ಕಟ್ಟು ಸಾರುಗಳನ್ನು ಬೆರೆಸಿ ಕೊಡಬಹುದು. ಅನ್ನದ ಜತೆ ನೆಲ್ಲಿಕಾಯಿ ಸಾರು, ದಾಳಿಂಬೆ ಸಾರು, ಹೆಸರುಬೇಳೆ ಕಟ್ಟು ಸಾರು ಒಳ್ಳೆಯದು. ಮತ್ತಷ್ಟು ಜೀರ್ಣಶಕ್ತಿ ಹೆಚ್ಚಾದಾಗ ಆಹಾರದೊಂದಿಗೆ ಸ್ವಲ್ಪ ಬೆಣ್ಣೆಯನ್ನು ಬಳಸುವುದರಿಂದ ರಕ್ತ ಪಿತ್ತಗಳು ಶಮನವಾಗಿ ಜೀರ್ಣಶಕ್ತಿ ವೃದ್ಧಿಯಾಗುತ್ತದೆ ಹಾಗೂ ದೇಹ ಬಲವೂ ಹೆಚ್ಚುತ್ತದೆ. ಜ್ವರ ಬಂದಾಗ ಕುಡಿಯಲು ಜೀರ್ಣಕ್ರಿಯೆ ಹೆಚ್ಚಿಸುವ ಹಾಗೂ ಬಾಯಾರಿಕೆಯನ್ನು ಶಮನ ಮಾಡುವ, ರಕ್ತವನ್ನು ಸಹ ತಂಪು ಮಾಡುವ ಧನಿಯಾ, ಶ್ರೀಗಂಧ, ನಾಗರ ರಹಿತ ಷಡಂಗ ಚೂರ್ಣ, ಲಾವಂಚ, ಒಣದ್ರಾಕ್ಷಿ, ಮುಸ್ತ ಇತ್ಯಾದಿಗಳನ್ನು ಹಾಕಿ ಕುದಿಸಿ ಆರಿಸಿದ ನೀರನ್ನು ಸೇವಿಸಬಹುದು.

ಉಪ್ಪು-ಖಾರ-ಹುಳಿ ಹೆಚ್ಚಿರುವ ಪದಾರ್ಥಗಳು, ಎಣ್ಣೆಯ ಖಾದ್ಯಗಳು, ಮೊಸರು, ಉದ್ದಿನ ಪದಾರ್ಥಗಳು, ಹಸಿ ತರಕಾರಿ, ಫ್ರೂಟ್ ಜ್ಯೂಸ್, ಬ್ರೆಡ್, ಮೊಳಕೆ ಕಾಳುಗಳು ಖಂಡಿತ ಬೇಡ. ಗೂಗಲ್ ಅನ್ನು ನೋಡಿ ಬ್ರೊಕೋಲಿ, ಪಪ್ಪಾಯ, ಪಪ್ಪಾಯ ಎಲೆ, ಅತಿಯಾದ ನೀರು ಸೇವನೆ, ಹುಳಿ ಹಣ್ಣುಗಳ ರಸಗಳನ್ನು ಸೇವಿಸುವುದು-ಇವೆಲ್ಲಾ ಮತ್ತಷ್ಟು ರಕ್ತವನ್ನು ಕೆಡಿಸಿ ಜ್ವರವನ್ನು ಉಲ್ಬಣಗೊಳಿಸುತ್ತದೆ. ಆಯುರ್ವೇದ ಗ್ರಂಥಗಳು ಈ ರೀತಿಯ ಹಸಿಯಾದ ಪದಾರ್ಥಗಳನ್ನು ಜ್ವರದಲ್ಲಿ ಆಹಾರವಾಗಿ ಹೇಳಿಲ್ಲ. ನೆನಪಿರಲಿ, ಜ್ವರವಿದ್ದಾಗ ದಾಳಿಂಬೆ ಹಣ್ಣು ಮತ್ತು ಒಣದ್ರಾಕ್ಷಿ ಸೇವಿಸಬಹುದೇ ಹೊರತು ಮತ್ತಾವ ಹಣ್ಣುಗಳನ್ನು ಸಹ ಸೇವಿಸುವ ಹಾಗೆ ಇಲ್ಲ. ಬಳ್ಳಿ ತರಕಾರಿಗಳಾದ ಪಡವಲಕಾಯಿ, ಸೋರೆಕಾಯಿ, ಹೀರೆಕಾಯಿ, ನೆಲ್ಲಿಕಾಯಿ, ಬೂದುಗುಂಬಳಕಾಯಿಗಳನ್ನು ಜೀರ್ಣಶಕ್ತಿಗೆ ಅನುಗುಣವಾಗಿ ಬಳಸಬಹುದು. ಗೆಡ್ಡೆ ತರಕಾರಿಗಳು, ಸೊಪ್ಪುಗಳು ಸುತರಾಂ ವರ್ಜ್ಯ.

ಇದರ ಜತೆಗೆ ಸೊಳ್ಳೆಗಳಿಂದಲೂ ರಕ್ಷಿಸಿಕೊಳ್ಳುವುದು ಬಹಳ ಮುಖ್ಯವಾಗುತ್ತದೆ. ಮನೆಯ ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿರಿಸಿಕೊಂಡು, ಸೊಳ್ಳೆ ಪರದೆಗಳನ್ನು ಬಳಸುವುದು ಒಳ್ಳೆಯದು. ಹಾಗೆಯೇ ನಿತ್ಯವೂ ಬೆಳಗ್ಗೆ ಹಾಗೂ ಸಂಜೆ ವೇಳೆ ಮನೆಗಳಿಗೆ ಔಷಧೀಯ ಧೂಪನವನ್ನು ಮಾಡುವುದು ಲಾಭಕಾರಿ.

ಈ ಜ್ವರವೇ ಬಾರದ ಹಾಗೆ ನಮ್ಮನ್ನು ರಕ್ಷಿಸಿಕೊಳ್ಳುವುದು ಹೇಗೆ?

ಮೂರು ಆಹಾರ ಕಾಲವನ್ನು ನಿಯಮಿತಗೊಳಿಸಿಕೊಂಡು ಆ ಸಮಯದಲ್ಲಷ್ಟೇ ಹಿತ ಆಹಾರವನ್ನು, ತಾಜಾ ಆಹಾರವನ್ನು, ಬಿಸಿ ಇದ್ದಾಗ ತುಪ್ಪವನ್ನು ಹಾಕಿಕೊಂಡು, ಜತೆಗೆ ಕುದಿಸಿದ ನೀರನ್ನು ಆಹಾರದೊಟ್ಟಿಗೆ ಗುಟುಕು ಗುಟುಕಾಗಿ ಸೇವಿಸಬೇಕು. ರಾತ್ರಿ ಬೇಗ ಮಲಗಿ, ಸೂರ್ಯೋದಯದ ಮುಂಚೆ ಏಳುವ ಅಭ್ಯಾಸವನ್ನು ಮಾಡಿಕೊಳ್ಳಬೇಕು. ಖಾಲಿ ಹೊಟ್ಟೆಯಲ್ಲಿ ಮಿತವಾಗಿ ವ್ಯಾಯಾಮ ಮಾಡುವುದು ಮತ್ತು ಬೆಚ್ಚಗಿನ ಎಳ್ಳೆಣ್ಣೆ ಅಥವಾ ಕೊಬ್ಬರಿ ಎಣ್ಣೆ ಹಚ್ಚಿಕೊಂಡು ಸ್ನಾನ ಮಾಡುವುದು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವುದಲ್ಲದೆ ಸೊಳ್ಳೆಯಂತಹ ವಾಹಕಗಳು ಚರ್ಮದ ಮೂಲಕ ವೈರಾಣುಗಳನ್ನು ದೇಹದ ಒಳಗೆ ತಲುಪಿಸುವುದನ್ನು ತಡೆಯುತ್ತದೆ. ಮಾನಸಿಕ ನೆಮ್ಮದಿಯ ಕಡೆ ಗಮನ ಹರಿಸಿ ನಿತ್ಯ ಸಂತೋಷವಾಗಿ ಇರುವುದನ್ನು ಅಭ್ಯಾಸ ಮಾಡಿಕೊಳ್ಳುವುದು ಸಹ ರೋಗ ನಿವಾರಕವಾಗಿ ಪರಿಣಮಿಸಲ್ಪಡುತ್ತದೆ.

ಸ್ನೇಹಿತರೆ, ಒಂದು ದೀಪವು ನಿರಂತರವಾಗಿ ಉರಿಯಬೇಕಾದರೆ ಎರಡು ವಿಚಾರಗಳು ಅತ್ಯವಶ್ಯಕ. ಒಂದು-ಹುಳಹುಪ್ಪಟೆಗಳಿಂದ, ಜೋರಾಗಿ ಬೀಸುವ ಗಾಳಿ ಮಳೆಗಳಿಂದ ಅದನ್ನು ರಕ್ಷಿಸಬೇಕು. ಹಾಗೆಯೇ, ಎರಡನೆಯದಾಗಿ ದೀಪದಲ್ಲಿ ಯಾವಾಗಲೂ ಎಣ್ಣೆ ಬತ್ತಿಗಳು ಸಾಕಷ್ಟು ಇರುವಂತೆ ನೋಡಿಕೊಳ್ಳಬೇಕು. ದೀಪದಂತೆಯೇ ನಮ್ಮ ದೇಹವು ಸಹ. ಅನೇಕ ಪ್ರಕಾರದ ಬ್ಯಾಕ್ಟೀರಿಯಾಗಳು, ವೈರಸ್‌ಗಳು ಸಾಂಕ್ರಾಮಿಕ ಜ್ವರಗಳಿಗೆ ಕಾರಣ ಅಂತ ಹೇಳುತ್ತೇವೆ. ದೀಪದ ಉರಿಯನ್ನು ಹಾಳು ಮಾಡುವ ಒಂದು ಹುಳವನ್ನು ಓಡಿಸಿದರೆ, ಸ್ವಲ್ಪ ಹೊತ್ತಿಗೆ ಇನ್ನೊಂದು ಯಾವುದೋ ಹುಳ ಬರಬಹುದು. ಹೀಗೆ, ಎಷ್ಟು ಹೊತ್ತು, ಎಷ್ಟು ಬಾರಿ ಈ ಕ್ರಿಮಿಕೀಟಗಳನ್ನು ದೀಪದಿಂದ ಓಡಿಸಲು ಸಾಧ್ಯ? ಅದರ ಬದಲಿಗೆ, ಯಾವ ಕ್ರಿಮಿ-ಕೀಟವು ಸಹ ದೀಪದ ಬಳಿ ಬರದಂತೆ ಗಾಜಿನಂತಹ ಒಂದು ರಕ್ಷಾಕವಚ ಇದ್ದರೆ ಅದು ದೀಪವನ್ನು ಸದಾ ರಕ್ಷಿಸುತ್ತದೆ. ಇದೇ ರೀತಿ, ನಮ್ಮ ಸುತ್ತಲೂ ಅನೇಕ ಸೂಕ್ಷ್ಮಜೀವಿಗಳು ಇರುವುದರಲ್ಲಿ ಯಾವ ಸಂಶಯವೂ ಇಲ್ಲ. ಒಂದೊಂದನ್ನೇ ಓಡಿಸುತ್ತಾ ಕೂರುವುದು ಅಸಾಧ್ಯದ ಕೆಲಸ. ಅದರ ಬದಲಿಗೆ ಅವುಗಳು ಶರೀರದ ಒಳಗೆ ಬರದಂತೆ ನೋಡಿಕೊಳ್ಳುವುದು ಜಾಣತನ. ಹಾಗೆಯೇ, ದೀಪದಲ್ಲಿ ಎಣ್ಣೆಯೂ ಖಾಲಿಯಾಗದಂತೆ ನೋಡಿಕೊಳ್ಳಬೇಕು. ನಮ್ಮ ಆರೋಗ್ಯದ ವಿಷಯದಲ್ಲಿಯೂ ಉತ್ತಮವಾದ ಜೀವನ ಶೈಲಿಯಿಂದ ದೇಹವನ್ನು ಸದೃಢವಾಗಿ ಸದಾ ಇರುವಂತೆ ಕಾಪಾಡಿಕೊಂಡು, ಉತ್ತಮವಾದ ಆಂತರಿಕ ಪೋಷಣೆಯನ್ನು ಆಹಾರದ ಮೂಲಕ, ವಿಚಾರದ ಮೂಲಕ ನೀಡುತ್ತಾ ಹೋದರೆ ಯಾವ ಸೂಕ್ಷ್ಮಜೀವಿಗಳು ಒಳಕ್ಕೆ ಬಂದರೂ ಏನೂ ಮಾಡಲಾರವು. ಈ ಎರಡನ್ನು ಸರಿಯಾದ ರೀತಿಯಲ್ಲಿ ನಾವು ಮಾಡಿದರೆ ಡೆಂಘೀ ಅಲ್ಲದೆ ಮುಂದೆ ಬರಬಹುದಾದ ಎಂತಹ ಭಯಾನಕ ಜ್ವರಗಳನ್ನು ಸಹ ತಡೆಗಟ್ಟಬಹುದು. This is the best Health insurance!

ವಿಶ್ವಕಪ್ ಮುಡಿಗೇರಲು ಆ ಕ್ಯಾಚ್ ಮಾತ್ರ ಕಾರಣವೇ?

ಗ್ರೌಂಡ್ ರಿಪೋರ್ಟ್

ಪೃಥ್ವಿರಾಜ್ ಕುಲ್ಕರ್ಣಿ
vveditoped@gmail.com

1983ರ ವಿಶ್ವಕಪ್ ಪೂರ್ವದಲ್ಲಿ ಭಾರತಕ್ಕೆ ಕ್ರಿಕೆಟ್‌ನಲ್ಲಿ ಇದ್ದ ಗೌರವ ಕ್ರಿಕೆಟ್ ಅಭಿಮಾನಿಗಳಿಗೆ ಕಹಿ ನೆನಪು ಎನ್ನಬಹುದು. ಅದನ್ನು ಯಾರು ಬಲ್ಲರು, ಭಾರತ ದೇಶದಲ್ಲಿ ಕ್ರಿಕೆಟ್‌ನಲ್ಲಿ ಅಲ್ಪ ಯಶಸ್ಸು ಕಂಡರೆ ಸಾಕು, ಕೆಲವು ದೇಶಗಳ ಕಣ್ಣು ಕೆಂಪಾಗಿಬಿಡುತ್ತದೆ. ಇದು ಈಗಿನ ಸಂಪ್ರದಾಯ ಅಲ್ಲ. 1983ರಿಂದಲೂ ಅದೇ ಪದ್ಧತಿ. ಭಾರತ ತನ್ನ ಪ್ರಥಮ ವಿಶ್ವಕಪ್ ಗೆಲ್ಲುವ ಮೊದಲು ನಾವು ವಿಶ್ವಕಪ್ ಗೆಲ್ಲುತ್ತೇವೆ ಎಂಬ ವಿಷಯ ನಮ್ಮ ದೇಶದ ಅಭಿಮಾನಿಗಳು ಅಲ್ಲ, ಗೆದ್ದ ಆಟಗಾರರೇ ನಂಬುತ್ತಿರಲಿಲ್ಲ. ಅದನ್ನು ಖ್ಯಾತ ಕಪಿಲ್ ಶರ್ಮ ಶೋನಲ್ಲಿ 83 ರ ತಂಡದ ಆಟಗಾರರೇ ಹೇಳಿದ್ದಾರೆ.

ಬೇರೆ ದೇಶದವರಂತೂ ಬಿಡಿ ಭಾರತೀಯರು ಬ್ಯಾಟು-ಬಾಲು ಹಿಡಿದರೆ ನಗುತ್ತಿದ್ದರು. ಇಂಗ್ಲೆಂಡ್, ಆಸ್ಟ್ರೇಲಿಯಾ ಪತ್ರಕರ್ತರು ಭಾರತವನ್ನು ಅಪಹಾಸ್ಯ ಮಾಡುತ್ತಿದ್ದರು. 83ರ ವಿಶ್ವಕಪ್ ಸಂದರ್ಭದಲ್ಲಿ ಇಂಗ್ಲೆಂಡ್‌ನ ಖ್ಯಾತ ಕ್ರಿಕೆಟ್ ಪತ್ರಕರ್ತ ಡೇವಿಡ್ ಫ್ರಿತ್ ಒಂದು ವೇಳೆ ಭಾರತ ಈ ಬಾರಿ ವಿಶ್ವಕಪ್ ಗೆದ್ದರೆ, ನಾನು ಬರೆದ ಲೇಖನವನ್ನು ತಿನ್ನುತ್ತೇನೆ ಎಂದು ಬರೆದುಕೊಂಡಿದ್ದರು. ಅದರಂತೆ ವಿಶ್ವಕಪ್ ಗೆದ್ದ ಮೇಲೆ ತಿಂದಿದ್ದರು. ಈಗಲೂ ಆಗುತ್ತಿರುವುದು ಅದೇ! ಭಾರತ ಟಿ20 ವಿಶ್ವಕಪ್ ಗೆದ್ದಿದ್ದೇ ಸರಿ ಗೆಲುವಿನ ಬಗ್ಗೆ ಅನುಮಾನ, ತಗಾದೆ ತೆಗೆಯಲು ಆರಂಭಿಸಿದ್ದಾರೆ. ಪಾಕಿಸ್ತಾನ ಪತ್ರಕರ್ತರೊಬ್ಬ ವೇಗಿ ಬುಮ್ರಾ, ಅವರ ಬೌಲಿಂಗ್ ಶೈಲಿಯ ಬಗ್ಗೆ ಕ್ಯಾತೆ ತೆಗೆದಿದ್ದಾನೆ. ಅದು ಪಾಕಿಸ್ತಾನದ ಚಟಾ! ವಿಷಯ ಏನೆಂದರೆ ಆಸ್ಟ್ರೇಲಿಯಾದ ಕೆಲವರೂ ಸಹ ಅಂತಹ ಹುಚ್ಚು ಕಲ್ಪನೆಗೆ ಬಿದ್ದಿದ್ದಾರೆ.

ಫೈನಲ್ ಪಂದ್ಯದಲ್ಲಿ ಕೊನೆಯಲ್ಲಿ ಸೂರ್ಯಕುಮಾರ್ ಹಿಡಿದಿದ್ದ ಗೇಮ್ ಚೆಂಜಿಂಗ್ ಕ್ಯಾಚ್ ಬಗ್ಗೆ ಸುಳ್ಳು ಅನುಮಾನ ಒಂದನ್ನು ಒಡ್ಡುತ್ತಿದ್ದಾರೆ. ಹೌದು ವಿಷಯ ಅಲ್ಪ ವಿವಾದಾತ್ಮಕವಾಗಿತ್ತು. ಆದರೆ ಮೈದಾನದಲ್ಲಿದ್ದ ಕ್ಯಾಮೆರಾಗಳು ಕ್ಯಾಚ್ ಬಗ್ಗೆ ಇದ್ದ ಅನುಮಾನಗಳನ್ನು ದೂರು ಮಾಡುವಂತೆ ತೋರಿಸಿವೆ. ಆದರೆ ಕೆಲವರು ಮಾತ್ರ ಭಾರತವನ್ನು ವಿರೋಧಿಸುವ ಭರದಲ್ಲಿ ಅದನ್ನೂ ಸಹ ಸುಳ್ಳು ಅಥವಾ ಸತ್ಯ ಕಂಡಿಲ್ಲ ಎನ್ನುತ್ತಿದ್ದಾರೆ. ಆದರೆ ಅದನ್ನು ಗಂಭಿರವಾಗಿ ಗಮನಿಸಿದಾಗ ಸೂರ್ಯಕುಮಾರ್ ಯಾದವ್ ಅವರು ಆ ಕ್ಯಾಚ್ ಅನ್ನು ವಿವಾದವಾಗದಂತೆ ಹಿಡಿದಿದ್ದಾರೆ. ಆದರೂ ಕೆಲವರು ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಸೂರ್ಯಕುಮಾರ್ ಯಾದವ್ ಅವರ ಕಾಲು ಬೌಂಡರಿ ಲೈನ್‌ಗೆ ಮುಟ್ಟಿರುವ ವಿಡಿಯೊ ಒಂದನ್ನು ಹಾಕಿ ತಗಾದೆ ತೆಗೆಯಲಾರಂಭಿಸಿದ್ದಾರೆ. ಅದರಲ್ಲೂ ಆಸ್ಟ್ರೇಲಿಯಾದ ಪತ್ರಕರ್ತರು ಭಾರತ ವಿಶ್ವಕಪ್ ಅನ್ನು ಮೋಸ ಮಾಡಿ ಗೆದ್ದಿದೆ ಎನ್ನುವಂತೆ ಹೇಳುತ್ತಿದ್ದಾರೆ. ಆದರೆ ಸ್ವತಃ ಡೇವಿಡ್ ಮಿಲ್ಲರ್ ಅವರೇ ಈ ನಿರ್ಣಾಯದ ಬಗ್ಗೆ ಬೇಸರವಿಲ್ಲದೇ ಮರಳಿದ್ದರು. ಪ್ರಮುಖವಾಗಿ ಫೈನಲ್ ಪಂದ್ಯವಾಡಿದ್ದ ದಕ್ಷಿಣಾ ಆಫ್ರಿಕಾದಿಂದ ಇಂತಹ ತಗಾದೆ ಬಂದಿಲ್ಲ. ಈ ತಗಾದೆಗೆ ವಿಷಯವೆಂದರೆ, ಆಸ್ಟ್ರೇಲಿಯಾಗೆ ಭಾರತದ ಕ್ರಿಕೆಟ್ ಯಶಸ್ಸನ್ನು ಸಹಿಸಿಕೊಳ್ಳಲು ಆಗುತ್ತಿಲ್ಲ. ಇದಕ್ಕೆ ಉದಾಹರಣೆ ಏನೆಂದರೆ, ಭಾರತ ಏನಾದರೂ ಸಾಧಿಸಿದಾಗ ಯಾವುದಾದರೂ ಒಂದು ತಗಾದೆ ಬಂದೆ ಬಂದಿರುತ್ತದೆ. ಒಂದು ಕಾಲದಲ್ಲಿ ಎಲ್ಲಿ ಇದ್ದ ಭಾರತ ಈಗ ಯಾವ ಮಟ್ಟಿಗೆ ಬೆಳೆದು ನಿಂತಿದೆ ಎಂಬ ಸತ್ಯ ಆಸ್ಟ್ರೇಲಿಯಾದ ಕ್ರಿಕೆಟ್ ಅಭಿಮಾನಿಗಳಿಗೆ ನಂಬಲು ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದಲೇ ಅವರು ಇಂತಹ ತಗಾದೆ ತೆಗೆಯುತ್ತಾ ಕೂತಿದ್ದಾರೆ.

1983ರ ಪೂರ್ವದಲ್ಲಿ ಭಾರತದ ಸೋಲಿಗೆ ನಗುತ್ತಿದ್ದ ಆಸ್ಟ್ರೇಲಿಯಾ ಇದೀಗ ತಗಾದೆ ತೆಗೆಯುತ್ತಿದೆ. 83ರ ಪೂರ್ವದಲ್ಲಿ ಭಾರತಕ್ಕೆ ಕ್ರಿಕೆಟ್‌ನಲ್ಲಿ ಅವಮಾನಿಸಲಾಗುತ್ತಿತ್ತು. ಆದರೆ 2011ರ ಏಕದಿನ ವಿಶ್ವಕಪ್ ಗೆದ್ದ ಮೇಲೆ ಭಾರತಕ್ಕೆ ಅದೆಲ್ಲಿಲ್ಲದ ಗೌರವ ಸಿಕ್ಕಿತು. 83ರ ವಿಶ್ವಕಪ್ ಭಾರತಕ್ಕೆ ಬರೀ ವಿಶ್ವಕಪ್ ಆಗಿರಲಿಲ್ಲ ಅದು ಸೋಲಿನ ಸುಳಿಯಲ್ಲಿ ಸಿಲುಕಿ ಅವಮಾನ ತಿಂದಿದ್ದ ಭಾರತಕ್ಕೆ ಹೆಡೆ ಎತ್ತಿ ನಿಲ್ಲುವಂತೆ ಮಾಡಿದ್ದ ಗೆಲುವಾಗಿತ್ತು. ಭಾರತದ ಕ್ರಿಕೆಟ್ ಬಗ್ಗೆ ನೋಡುವಾಗ ಅಥವಾ ಇತಿಹಾಸದ ಬಗ್ಗೆ ಮಾತನಾಡುವಾಗ, ಮಹಾರಾಜ ಪಟಿಯಾಲಾ ಅವರ ಹೆಸರನ್ನು ಪ್ರಸ್ತಾಪಿಸಲೇಬೇಕು. ಬ್ರಿಟೀಷರ ಆಳ್ವಿಕೆಯಲ್ಲಿ ಭಾರತಕ್ಕೆ ತನ್ನದೇ ಕ್ರಿಕೆಟ್ ತಂಡವನ್ನು ಕಟ್ಟುವ ಶಕ್ತಿ ಇದ್ದರೂ, ಆರ್ಥಿಕ ಶಕ್ತಿ ಇರಲಿಲ್ಲ ಎನ್ನಬಹುದು. ಆದರೆ ಮಹಾರಾಜ ಪಟಿಯಾಲಾ ಅವರು ಪಟಿಯಾಲಾ 11 ಎಂಬ ತಂಡವನ್ನು ನಿರ್ಮಿಸಿ ಸ್ವಂತ ಖರ್ಚಿನಿಂದ ತಂಡವನ್ನು ಹಲವಾರು ಪ್ರವಾಸಕ್ಕೆ ಕರೆದುಕೊಂಡು ಹೋಗಿ ಆಡಿದ್ದರು. ಆದರೆ, ಭಾರತ ತಂಡ ಪ್ರಥಮ ಅಧಿಕೃತ ಟೆಸ್ಟ್ ಪಂದ್ಯವನ್ನು ಆಡಲು 1932ರವರೆಗೂ ಕಾಯಬೇಕಾಯಿತು. ಅದರಂತೆ ಭಾರತ ತನ್ನ ಪ್ರಥಮ ಪಂದ್ಯ ಗೆಲ್ಲಲು 1952ರ ವರೆಗೂ ಕಾಯಬೇಕಾಯಿತು. ಭಾರತ ಕ್ರಿಕೆಟ್ ತಂಡವನ್ನು ಮುಂದೆ ಕಪಿಲ್ ದೇವ್, ಸುನಿಲ್ ಗವಸ್ಕರ್ ಹಾಗೂ ಇನ್ನಿತರ ಆಟಗಾರರು ಬಲಿಷ್ಠಗೊಳಿಸಿದರು. ಆದರೂ ಭಾರತ ಒಂದೇ ಒಂದು ವಿಶ್ವಕಪ್ ಪಂದ್ಯವು ಕೂಡ ಗೆದ್ದಿರಲಿಲ್ಲ. ಅದನ್ನು ನೋಡಿ ನಗುತ್ತಿದ್ದ ಆಸ್ಟ್ರೇಲಿಯಾಗೆ ಭಾರತ ನಿರ್ಮಿಸಿರುವ ದಾಖಲೆ ಮತ್ತು ಯಶಸ್ಸುಗಳನ್ನು ಅರಗಿಸಿಕೊಳ್ಳಲು ಆಗುತ್ತಿಲ್ಲ.

1983ರ ವಿಶ್ವಕಪ್ ಸಂದರ್ಭದಲ್ಲಿ ಸೋಲಿನ ಸುಳಿಯಲ್ಲಿ ಸಿಲುಕಿದ್ದ ಭಾರತ ಕ್ರಿಕೆಟ್ ತಂಡಕ್ಕೆ ಅಪಹಾಸ್ಯ ಮಾಡಲಾಗುತ್ತಿತ್ತು. ಭಾರತ ಬಳಿ ಬಲಿಷ್ಠ ಆಟಗಾರರು ಇದ್ದರೂ, ಸಹ ವೆಸ್ಟ್ ಇಂಡೀಸ್‌ದಂತಹ ವಿಶ್ವ ಚಾಂಪಿಯನ್ ವಿರುದ್ಧ ಆಡುವ ಸಾಮರ್ಥ್ಯ ಇಲ್ಲವೆಂಬ ವದಂತಿ ಇತ್ತು. ಅದರಲ್ಲೂ ವಿಶ್ವಕಪ್‌ನಲ್ಲಿ ಒಂದು ಪಂದ್ಯವನ್ನು ಭಾರತ ಗೆದ್ದಿರಲಿಲ್ಲ. ನಾಯಕ ಕಪಿಲ್ ದೇವ್ ಲಾರ್ಡ್ಸ್‌ನಲ್ಲಿ, (ವಿ ಆರ್ ಹಿಯರ್ ಟು ವಿನ್) ಎಂದುಬಿಟ್ಟಿದ್ದರು. ಇದನ್ನು ಕೇಳಿದ ಅಲ್ಲಿದ್ದ ಪತ್ರಕರ್ತರು ನಕ್ಕು ಬಿಟ್ಟಿದ್ದರು. ಅದಲ್ಲದೆ ಖ್ಯಾತ ಕ್ರಿಕೆಟ್ ಪತ್ರಕರ್ತ ಡೇವಿಡ್ ಫ್ರೀಥ್ ಒಂದು ವೇಳೆ ಭಾರತ ವಿಶ್ವಕಪ್ ಗೆದ್ದರೆ ನಾನು ಬರೆದ ಲೇಖನ ತಿನ್ನುತ್ತೇನೆ ಎಂದು ಬರೆದುಕೊಂಡಿದ್ದರು. ಆದರೆ ಚಾಣಾಕ್ಷ ಆಟದಿಂದ ಭಾರತ ಪ್ಲೇ ಆಫ್ ತಲುಪಿಬಿಟ್ಟಿತು. ಯಾವ ವಿಶ್ವ ಚಾಂಪಿಯನ್ ಎನಿಸಿಕೊಂಡಿದ್ದ ವೆಸ್ಟ್ ಇಂಡೀಸ್ ವಿರುದ್ಧ ಫೈನಲ್‌ನಲ್ಲಿ ಅತಿ ಕಡಿಮೆ ರನ್ ಡಿಫೆಂಡ್ ಮಾಡಿಕೊಂಡು ಗೆದ್ದು ಬಿಗಿತ್ತು. ಅದಾದ ಮೇಲೆ ಭಾರತ ಕ್ರಿಕೆಟ್ ಲೋಕದಲ್ಲಿ ಅಚ್ಚಳಿಯದ ಇತಿಹಾಸಗಳನ್ನು ಸೃಷ್ಟಿ ಮಾಡುತ್ತಲೇ ಬಂದಿದೆ. 83ರ ವಿಶ್ವಕಪ್ ನಂತರ ಭಾರತ ತಂಡಕ್ಕೆ ಪ್ರಭಾವಿ ನಾಯಕ ಸೌರವ್ ಗಂಗೂಲಿ ಅವರು ಭಾರತ ತಂಡವನ್ನು ಬಲಿಷ್ಠವಾಗಿ ಕಟ್ಟಿ ಆಗಿನ ಸೋಲಿನ ಸುಳಿಯಲ್ಲಿ ಸಿಲುಕಿದ ಭಾರತ ತಂಡವನ್ನು ಸೋಲಿಸುವುದೇ ವಿಶ್ವ ಚಾಂಪಿಯನ್ ತಂಡಗಳಿಗೆ ಸವಾಲಾಗುವಂತೆ ಮಾಡಿದ್ದರು. ಕ್ರಿಕೆಟ್ ದೇವರು ಸಚಿನ್ ತೆಂಡೂಲ್ಕರ್ ಅವರ ಆಟ ಇಡೀ ವಿಶ್ವವನ್ನೇ ಭಾರತದತ್ತ ಸೆಳೆದಿತ್ತು. ಇನ್ನು 2004ರಲ್ಲಿ ಪದಾರ್ಪಣೆ ಮಾಡಿದ್ದ ಪ್ರಭಾವಿ ಆಟಗಾರ ಕ್ಯಾಪ್ಟನ್ ಕೂಲ್ ಮಹೇಂದ್ರ ಸಿಂಗ್ ಧೋನಿ ಕ್ರಿಕೆಟ್ ಜಗತ್ತಿನ ಇತಿಹಾಸವನ್ನೇ ಬದಲಾಯಿಸಿಬಿಟ್ಟರು. ಯಾವ ಭಾರತ ತಂಡಕ್ಕೆ ಅಪಹಾಸ್ಯ ಮಾಡುತ್ತಿದ್ದರೋ ಅದೇ ಭಾರತ ತಂಡವನ್ನು ಗಗನದೆತ್ತರ ಬೆಳಿಸಿಬಿಟ್ಟರು.

ಧೋನಿ ನಾಯಕರಾಗಿದ್ದಾಗ ಆಸ್ಟ್ರೇಲಿಯಾ, ಭಾರತ ಟೆಸ್ಟ್ ಸರಣಿಯೊಂದರಲ್ಲಿ ಭಾರತ ಗೆಲುವು ಸಾಧಿಸಿತ್ತು. ಆಗ ಇಡೀ ವಿಶ್ವವೇ ಈ ಸಾಧನೆಗೆ ಶ್ಲಾಘಿಸಿತ್ತು. ಆದರೆ ಧೋನಿ ಮಾತ್ರ ಏನೂ ಆಗಿಲ್ಲ ಎಂಬಂತೆ ಸುಮ್ಮನಿದ್ದರು. ಅದಲ್ಲದೇ, ತಂಡದ ಆಟಗಾರರನ್ನೂ ಸಹ ಯಾವುದೇ ಸಂಭ್ರಮಾಚರಣೆ ಮಾಡದಂತೆ ಹೇಳಿದ್ದರು. ಇದರ ಸಂದೇಶ ಭಾರತದ ಪಾಲಿಗೆ ಆಸ್ಟ್ರೇಲಿಯಾ ದೊಡ್ಡ ಹೆಮ್ಮರವೇನಲ್ಲ ಎಂಬಂತೆ ಇತ್ತು. ಅದಲ್ಲದೇ ಗಾಬಾ ಕ್ರೀಡಾಂಗಣದಲ್ಲಿ ಭಾರತ ಆಸಿಸ್‌ಗೆ ಇದ್ದ 32 ವರ್ಷಗಳ ಸೊಕ್ಕನ್ನು 2021ರಲ್ಲಿ ಮುರಿದು ಹಾಕಿತ್ತು. ಆ ಕಾರಣಕ್ಕೆ ಆಸ್ಟ್ರೇಲಿಯಾ ಭಾರತದ ಯಶಸ್ಸಿಗೆ ತಗಾದೆ ತೆಗೆಯುತ್ತಾ ಬಂದಿದೆ.

ಈ ಬಾರಿ ವಿಶ್ವಕಪ್‌ನಲ್ಲಿ ಭಾರತ ಭರ್ಜರಿ ಪ್ರದರ್ಶನ ತೋರುವ ಮೂಲಕ ಗೆಲುವು ಸಾಧಿಸಿದೆ. ಸೂರ್ಯಕುಮಾರ್ ಯಾದವ್ ಅವರ ಕ್ಯಾಚ್ ಅನ್ನು ಒಂದು ಬಾರಿ ಅಲ್ಲ 10 ಬಾರಿ ನೋಡಿದರೂ ಆ ನಿರ್ಣಯ ಸರಿಯಾಗೇ ಇದೆ ಎನ್ನಿಸುತ್ತದೆ. ಮೈದಾನದಲ್ಲಿ ಇದ್ದ ಕ್ಯಾಮೆರಾಗಳನ್ನು ಬಿಟ್ಟರೂ, ಅಲ್ಲಿದ್ದ ಅಭಿಮಾನಿಗಳು ಮಾಡಿದ್ದ ವಿಡಿಯೊಗಳೂ ಸಹ ಕ್ಯಾಚ್ ಬಗ್ಗೆ ಸ್ಪಷ್ಟತೆ ಕೊಟ್ಟಿವೆ. ಇಷ್ಟಾದರೂ ತಗಾದೆ ತೆಗೆದರೆ ಅದು ಮೂರ್ಖತನ ಎನ್ನಬಹುದು. ಅಷ್ಟಕ್ಕೂ ಆ ಕ್ಯಾಚ್ ಬಿಟ್ಟಿದ್ದರೆ, ದಕ್ಷಿಣಾ ಆಫ್ರಿಕಾ ವಿಶ್ವಕಪ್ ಗೆದ್ದೇ ಗೆಲ್ಲುತ್ತಿತ್ತು ಎಂದು ಹೇಳಲು ಸಾಧ್ಯವೆ? ಭಾರತ ವಿಶ್ವಕಪ್ ಫೈನಲ್‌ನಲ್ಲಿ ಭರ್ಜರಿ ಪ್ರದರ್ಶನ ನೀಡಿದೆ. ಆ ಕ್ಯಾಚ್ ಬಿಟ್ಟಿದ್ದರೆ ಗೆಲ್ಲುತ್ತಿತ್ತು ಎಂಬುವುದಾದರೆ, 30 ಎಸೆತಗಳಲ್ಲಿ 30 ರನ್ ಬೇಕಿದ್ದ ಸ್ಕೋರ್ ಅನ್ನು ಭಾರತ 6 ಬಾಲ್‌ಗಳಲ್ಲಿ 16 ರನ್‌ಗೆ ತಂದಿದ್ದರು. ಈ ಮಟ್ಟದಲ್ಲಿ ಕಮ್‌ಬ್ಯಾಕ್ ಮಾಡಿದ್ದ ಭಾರತ 5 ಎಸೆತಗಳಲ್ಲಿ 10 ರನ್ ಡಿಫೆಂಡ್ ಮಾಡುತ್ತಿರಲಿಲ್ಲವೇ? ಇಡೀ ಟೂರ್ನಿಯಲ್ಲಿ ಒಂದೂ ಪಂದ್ಯ ಸೋಲದೆ ಭರ್ಜರಿ ಪ್ರದಶನ ನೀಡಿ ಭಾರತ ಫೈನಲ್‌ಗೆ ಬಂದಿತ್ತು. ಆಸ್ಟ್ರೇಲಿಯಾ, ಪಾಕಿಸ್ತಾನದಂತಹ ತಂಡಗಳನ್ನು ಭಾರತ ಹೀನಾಯವಾಗಿ ಸೋಲಿಸಿತ್ತು. ಹಾಗಾಗಿಯೇ, ಈ ಗೆಲುವಿನ ನಂತರ ತಗಾದೆ ತೆಗೆಯುತ್ತಿದ್ದಾರೆ. ಅಸಲಿಯತ್ತಾಗಿ, ಆಸ್ಟ್ರೇಲಿಯಾ ಅಥವಾ ಪಾಕಿಸ್ತಾನದಂತ ಕ್ರಿಕೆಟ್ ಅಭಿಮಾನಿಗಳಿಗೆ ಭಾರತದ ಯಶಸ್ಸು ವಿವಾದವಾಗಿತ್ತೇ ಹೊರತು ಆ ಕ್ಯಾಚ್ ಅಲ್ಲ. ಏಕೆಂದರೆ ಭಾರತದ ಆಟಗಾರರು ಎಂದಿಗೂ ಮೋಸ ಮಾಡಿ ಗೆದ್ದಿದ್ದು ಇಲ್ಲ. ಮತ್ತು ಎಂದಿಗೂ ಆಸ್ಟ್ರೇಲಿಯಾದ ಆಟಗಾರರಂತೆ ಬಾಲ್ ಟ್ಯಾಂಪಿಂಗ್ ಮಾಡಿ ಸಿಗಿಬಿದ್ದಲ್ಲ.

ಪ್ರಚಲಿತ

ವಿಜಯಾ, ಉಡುಪಿ
vveditoped@gmail.com

ಹೊರಗುತ್ತಿಗೆ ನೌಕರರಿಗೆ ಏಕಿಲ್ಲ ಪರಿಷ್ಕೃತ ವೇತನದ ಸೌಲಭ್ಯ

ಏಳನೇ ವೇತನ ಆಯೋಗದ ಶಿಫಾರಸ್ಸು ಜಾರಿಗೆ ಆಗ್ರಹ ಪ್ರತಿದಿನ ಕೇಳಿಬರುತ್ತಿದೆ. ಇತ್ತ ಸರಕಾರವು ಪರಿಷ್ಕೃತ ವೇತನ ಜಾರಿಗೊಂಡರೆ ರಾಜ್ಯ ಬೊಕ್ಕಸಕ್ಕೆ ಸಾವಿರಾರು ಕೋಟಿ ಹೊರೆ ಬೀಳಲಿದ್ದು, ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಸಂಪನ್ಮೂಲದ ಮುಗ್ಗಟ್ಟು ಎದುರಾಗಲಿದೆ ಎನ್ನುತ್ತಿದೆ. ಇದಕ್ಕೆ ಸರಕಾರಿ ನೌಕರರು ಸಂಪನ್ಮೂಲ ಕ್ರೋಢೀಕರಣದಲ್ಲಿ ಸರಕಾರಿ ನೌಕರರ ಪಾಲೂ ಇದೆ ಎಂದು ಹೇಳಿದೆ.

ಆದರೆ ಇತ್ತ ಸರಕಾರಿ ಕಚೇರಿಗಳಲ್ಲಿ ಸುಮಾರು ಅರ್ಧದಷ್ಟು ಮಂದಿ ಹೊರಗುತ್ತಿಗೆ ಸಿಬ್ಬಂದಿಗಳು ಕಂಡುಬರುತ್ತಾರೆ. ಈ ಸಿಬ್ಬಂದಿಗಳು ಅತ್ಯಂತ ಕನಿಷ್ಠ ವೇತನದಲ್ಲಿ,

ಯಾವುದೇ ಭತ್ಯೆ ಇನ್ನಿತರ ಸೌಲಭ್ಯಗಳಿಲ್ಲದೆಯೂ ವಿಶೇಷವಾಗಿ ಶ್ರಮಿಸುತ್ತಿರುವುದನ್ನು ಕಾಣಬಹುದು. ಆದರೆ ಅವರ ವೇತನ-ಸೌಲಭ್ಯಗಳ ಬಗ್ಗೆ ಯಾರೂ ಧ್ವನಿ ಎತ್ತುವವರಿಲ್ಲ. ಇವರಲ್ಲಿ ಬಹುತೇಕ ಮಂದಿ ಪದವೀಧರರು! ಅವರಿಗೆ ಸಿಗುವ ವೇತನ ಎಷ್ಟು ಎಂದು ನೋಡಿದರೆ, ಡಿ-ದರ್ಜೆಯ ಕಾಯಂ ನೌಕರರ ವೇತನಕ್ಕಿಂತಲೂ ತುಂಬಾ ಕಡಿಮೆ. ಉದ್ಯೋಗದ ಭದ್ರತೆಯಂತೂ ಇಲ್ಲವೇ ಇಲ್ಲ. ಇವರಿಂದಾಗಿ ಕಾಯಂ ನೌಕರರ ಕೆಲಸದ ಹೊರೆ ಬಹಳಷ್ಟು ತಗ್ಗುತ್ತಿದೆ, ಸಾರ್ವಜನಿಕರಿಗೆ ಇವರ ಸೇವೆ ವಿಶೇಷವಾಗಿ ಸಲ್ಲುತ್ತಿದೆ. ಆದರೆ ಯಾವ ಕ್ಷಣದಲ್ಲಾದರೂ ಇವರು ತಮ್ಮ ಉದ್ಯೋಗ ಕಳೆದುಕೊಳ್ಳಲು ಸಿದ್ಧರಿರಬೇಕು!

ಈ ಹೊರಗುತ್ತಿಗೆ ನೌಕರರ ಉದ್ಯೋಗ ಭದ್ರತೆಯ ಬಗ್ಗೆಯಾಗಲೀ, ಅವರ ವೇತನ-ಸೌಲಭ್ಯಗಳ ಹೆಚ್ಚಳದ ಬಗ್ಗೆಯಾಗಲೀ ಎಲ್ಲಿಯೂ ಧ್ವನಿ ಮೂಡದಿರುವುದು ವಿಷಾದಕರ. ಹೊರಗುತ್ತಿಗೆ ಸಿಬ್ಬಂದಿಗಳು ಗರಿಷ್ಠ ಸೇವೆ ಸಲ್ಲಿಸಿದರೂ ಈ ವೇತನ-ಸೌಲಭ್ಯಗಳ ಹೆಚ್ಚಳದ ವಿಚಾರ ಬಂದಾಗ ಅವರೆಲ್ಲ ಹೊರಗುಳಿಯಬೇಕೇ? ಕಾಯಂ ನೌಕರರ ಬೇಡಿಕೆ ಈಡೇರಿಕೆಯ ಬಗ್ಗೆ ಆಗ್ರಹ ವ್ಯಕ್ತವಾಗುವಾಗ ಹೊರಗುತ್ತಿಗೆ ನೌಕರರಿಗೂ ಸಂಸಾರವಿದೆ, ಕಷ್ಟವಿದೆ ಎಂಬ ಅರಿವು ಯಾರಿಗೂ ಮೂಡದಿರುವುದು ಖೇದಕರ.

ನೌಕರರ ಸಂಘದ ಅಧ್ಯಕ್ಷರೂ ಇದನ್ನು ಅರ್ಥಮಾಡಿಕೊಳ್ಳಬೇಕು. ಎಲ್ಲ ರೀತಿಯ ಸೌಲಭ್ಯಗಳ ಹೆಚ್ಚಳದ ಬಗ್ಗೆ ಆಗ್ರಹಿಸುವಾಗ ತಮ್ಮೊಂದಿಗೆ ಸೇವೆ ಸಲ್ಲಿಸುತ್ತಿರುವ ಹೊರಗುತ್ತಿಗೆ ನೌಕರರ ಹಂತ-ಹಂತವಾಗಿ ಕಾಯಂಗೊಳಿಸಲು ಮತ್ತು ಅವರಿಗೂ ವೇತನ-ಭತ್ಯೆ-ರಜಾ ಸೌಲಭ್ಯ ಇತ್ಯಾದಿಗಳ ಹೆಚ್ಚಳದ ಬಗ್ಗೆ ಆಗ್ರಹ ಮೂಡಿಬರಬೇಕಲ್ಲವೇ? ತಮ್ಮೊಂದಿಗೇ ದುಡಿಯುವ ಸಹೋದ್ಯೋಗಿಗಳ ಬಗ್ಗೆ ಯಾಕಿಷ್ಟು ತಾತ್ಸಾರ? ಸಾರ್ವಜನಿಕರೂ ಈ ಬಗ್ಗೆ ಮಾನವೀಯ ಅನುಕಂಪದ ನೆಲೆಯಲ್ಲಿ ಸರಕಾರದ ಗಮನ ಸೆಳೆಯುವುದು ಸೂಕ್ತವಲ್ಲವೇ? ತನ್ಮೂಲಕ ಅವರ ಬದುಕೂ ಕೂಡ ಸ್ವಲ್ಪವಾದರೂ ಚೇತರಿಸಿಕೊಳ್ಳಲು ಅನುವು ಮಾಡಿಕೊಡುವ ಅವಶ್ಯವಿದೆ.

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು:
ಬೆಂಗಳೂರು, ಹುಬ್ಬಳ್ಳಿ
ಮಂಗಳೂರು, ಬೆಳಗಾವಿ
ಕಲಬುರಗಿ, ದಾವಣಗೆರೆ
Vol:67, Issue: 68

ಸಮಾಚಾರ ಸಣ್ಣದಲ್ಲ

ಕಾಳಗಿ: ಸಹಾಯಧನಕ್ಕೆ ಅರ್ಜಿ ಆಹ್ವಾನ

ಕಲಬುರಗಿ: ಕಾಳಗಿ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಬರುವ 2024-25ನೇ ಸಾಲಿನ ಎಸ್.ಎಫ್.ಸಿ. (ಮುಕ್ತ ನಿಧಿ) ಶೇ. 7.25, ಶೇ. 24.10 ಮತ್ತು ಶೇ. 5 ಯೋಜನೆಯಡಿ ಕಾಳಗಿ ಪಟ್ಟಣದ ಇತರೆ ಹಿಂದುಳಿದ ಪಂಗಡದ ಉನ್ನತ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸಹಯಾಧನ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉನ್ನತ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸಹಾಯಧನ ನೀಡಲಾಗುತ್ತಿದ್ದು, ಇದಕ್ಕಾಗಿ ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಾಳಗಿ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ. ಅರ್ಹ ಫಲಾನುಭವಿಗಳು ಭರ್ತಿ ಮಾಡಿದ ಅರ್ಜಿಯೊಂದಿಗೆ ಅವಶ್ಯಕ ದಾಖಲೆಗಳಾದ ಆಧಾರ್ ಕಾರ್ಡ್, ರೇಷನ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣಪತ್ರ, ಉನ್ನತ ವ್ಯಾಸಂಗ ಮಾಡುತ್ತಿರುವ ಕಾಲೇಜಿನಲ್ಲಿ ಉತ್ತೀರ್ಣರಾಗಿರುವ ಅಂಕಪಟ್ಟಿ, ಉನ್ನತ ವ್ಯಾಸಂಗ ಮಾಡುತ್ತಿರುವ ಕಾಲೇಜಿನ ಧೃಢೀಕರಣ, ಬ್ಯಾಂಕ್ ಪಾಸ್‌ಬುಕ್, ಪಾಸ್‌ಪೋರ್ಟ್ ಅಳತೆಯ ಫೋಟೋದೊಂದಿಗೆ 2024ರ ಜುಲೈ 24 ರೊಳಗಾಗಿ ಕಾಳಗಿ ಪಟ್ಟಣ ಪಂಚಾಯತ್ ಕಚೇರಿಯಲ್ಲಿ ಅರ್ಜಿ ಸಲ್ಲಿಸಬೇಕು. ಈ ಹಿಂದೆ ಯಾವುದಾದರು ಯೋಜನೆಯಡಿ ಸಹಾಯಧನ ಪಡೆದಿದ್ದರೆ ಅಂತಹ ಅರ್ಜಿಗಳನ್ನು ಈ ಯೋಜನೆಯಡಿ ಪರಿಗಣಿಸಲಾಗುವುದಿಲ್ಲ ಎಂದು ಅವರು ತಿಳಿಸಿದ್ದಾರೆ.

ವಿದ್ಯಾರ್ಥಿಗಳಿಗಾಗಿ ಸಂಪರ್ಕ ಕಾರ್ಯಕ್ರಮ

ಕಲಬುರಗಿ: 2023-24ನೇ ಸಾಲಿನ ಜನವರಿ ಆವೃತ್ತಿಗೆ ಕರಾಮುವಿ ಪ್ರಾದೇಶಿಕ ಕೇಂದ್ರ, ಕಲಬುರಗಿ ವ್ಯಾಪ್ತಿಯಲ್ಲಿ ಪ್ರವೇಶಾತಿ ಪಡೆದಿರುವ ಎಂ.ಎ. ಇಂಗ್ಲಿಷ್, ರಾಜ್ಯಶಾಸ್ತ್ರ ಹಾಗೂ ಇತಿಹಾಸ ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಈ ಕೆಳಕಂಡ ಸ್ಥಳದಲ್ಲಿ ಆರು ದಿನಗಳ ಸಂಪರ್ಕ ಕಾರ್ಯಕ್ರಮವನ್ನು ಪ್ರಾರಂಭಿಸಲಾಗುತ್ತಿದ್ದು, ವಿದ್ಯಾರ್ಥಿಗಳು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕಲಬುರಗಿ ಪ್ರಾದೇಶಿಕ ನಿರ್ದೇಶಕರು ತಿಳಿಸಿದ್ದಾರೆ. ಕಲಬುರಗಿ ರೇಷ್ಮಿ ಪದವಿ ಕಾಲೇಜಿನಲ್ಲಿ ಎಂ.ಎ. ಇಂಗ್ಲೀಷ, ರಾಜ್ಯಶಾಸ್ತ್ರ ಮತ್ತು ಇತಿಹಾಸ ವಿಷಯಗಳಿಗೆ ಇದೇ ಜುಲೈ 13 ರಿಂದ 18 ರವರೆಗೆ ಆರು ದಿನಗಳ ಕಾಲ ಪ್ರತಿದಿನ ಬೆಳಿಗ್ಗೆ 11 ಗಂಟೆಯಿಂದ ಸಂಪರ್ಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 99167-83555ಗೆ ಸಂಪರ್ಕಿಸಲು ಕೋರಲಾಗಿದೆ.

ಕಡಗಂಚಿ ಇಂದು ವಿದ್ಯುತ್ ವ್ಯತ್ಯಯ

ಕಲಬುರಗಿ: ಕಡಗಂಚಿ ಉಪ ವಿಭಾಗದ 11ಕೆವಿ ಫೀಡರಗಳ ನಿರ್ವಹಣಾ ಕೆಲಸ ಕೈಗೊಂಡಿರುವ ಪ್ರಯುಕ್ತ ಇದೇ ಜುಲೈ 13 ರಂದು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ಸದರಿ ಫೀಡರಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳು ಮತ್ತು ಇತರೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಕಾರಣ ಎಲ್ಲಾ ಗ್ರಾಹಕರು ಇದಕ್ಕೆ ಸಹಕರಿಸಬೇಕೆಂದು ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗ-1ರ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ. 33/11ಕೆವಿ ಜಂಬಗಾ ವಿತರಣಾ ಕೇಂದ್ರ, ಕಲಬುರಗಿ ವಿದ್ಯುತ್ ವಿತರಣಾ ಕೇಂದ್ರ: ಎಫ್-1 ಚಿಂಚನಸೂರ ಎನ್.ಜೇ.ವಾಯ್ ಫೀಡರ್, ಎಫ್-3 ಕಲ್ಲಹಂಗರಗಾ ಐಪಿ, ಎಫ್-4 ಸಂಗೋಳಗಿ ಐಪಿ ಫೀಡರಿನ ಕಲ್ಲಹಂಗರಗಾ, ಸಂಗೋಳಗಿ, ಕೊಟ್ಟರಗಾ, ಜವಳಗಾ, ರಿಕ್ಕಿನ ಆಲೂರ, ಕೆರಿ ಅಂಬಲಗಾ, ಚಿಂಚನಸೂರ ಹಾಗೂ ಮಲ್ಲಪ್ಪನವಾಡಿ ಗ್ರಾಮಗಳು.

ಸಹಾಯಕ ಆಯುಕ್ತ ಮನೆ ಮೇಲೆ ಲೋಕಾ ದಾಳಿ

ಕಲಬುರಗಿ: ಗುರುವಾರ ಬಿಬಿಎಂಪಿ ಮಹದೇವಪುರ ವಿಭಾಗದ ಸಹಾಯಕ ಆಯುಕ್ತ ಬಸವರಾಜ್ ಮಾಗಿ ಮನೆ ಮೇಲೆ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ದಾಳಿ ನಡೆಸಿ, ಸಾಕಷ್ಟು ದಾಖಲೆ ಹಾಗೂ ಕ್ಯಾಸಿನನೋ ಕಾಯಿನ್ಸ್ ವಶಕ್ಕೆ ಪಡೆದಿದ್ದರು. ಶುಕ್ರವಾರ ಸಹ ಲೋಕಾಯುಕ್ತ ಪೊಲೀಸರು ಬಸವರಾಜ್ ಮಾಗಿಯ ಪಾಳಾದ ಮನೆಯಲ್ಲಿ ಎರಡನೆ ದಿನ ಶೋಧ ಕಾರ್ಯ ಮುಂದುವರೆಸಿದ್ದಾರೆ. ಕಲಬುರಗಿ ತಾಲೂಕಿನ ಪಾಳಾದ ಮನೆಯಲ್ಲಿ 23 ಲಕ್ಷದ ಚಿನ್ನಾಭರಣ ಪತ್ತೆ ಯಾಗಿದೆ. ಬೆಂಗಳೂರಿನಿಂದ ಬಸವರಾಜ್ ತಾಯಿ ಮನೆ ಬೀಗ ತಂದು ಪಾಳಾದ ಮನೆಯಲ್ಲಿರುವ ಅಲಮೆರಾ ಓಪನ್ ಮಾಡಿದ ಲೋಕಾಯುಕ್ತ ಅಧಿಕಾರಿಗಳಿಗೆ ಚಿನ್ನಭರಣ ಸಿಕ್ಕಿದೆ. ಅಲಮೆರಾದಲ್ಲಿ ಸುಮಾರು 352 ಗ್ರಾಂ ಚಿನ್ನ, 4.87 ಕೆ.ಜಿ ಬೆಳ್ಳಿ ಆಭರಣಗಳು ಪತ್ತೆಯಾಗಿವೆ ಎಂದು ಮೂಲಗಳು ತಿಳಿಸಿವೆ.

ನಂಬಿಕೆ ಜಗದಂಬಿಕೆ
ಗುರು
ಪ್ರತಿ ಗುರುವಾರ

{ಸತೀಶ್ ಜಾರಕಿಹೊಳಿ} ಬೆಳಗಾವಿ ಉಸ್ತುವಾರಿ ಸಚಿವ

ಶೈಕ್ಷಣಿಕ ಪ್ರಗತಿಗಾಗಿ ಶೀಘ್ರವೇ ಬೆಳಗಾವಿ ಹಾಗೂ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಗಳಿಗೆ ಪ್ರತ್ಯೇಕವಾಗಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರನ್ನು ನೇಮಿಸಲಾಗುವುದು. ಶಾಲಾ ಮಕ್ಕಳಿಗೆ ಡೆಸ್ಕ್‌ಗಳ ಖರೀದಿಗೆ ಲಭ್ಯವಿರುವ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಂಡು ಜಿಲ್ಲೆಯಾದ್ಯಂತ ಅಗತ್ಯವಿರುವ ಶಾಲೆಗಳಿಗೆ ಡೆಸ್ಕ್ ಒದಗಿಸಲು ಸೂಚಿಸಲಾಗಿದೆ.

ವಿ

ಮೇಯರ್, ಉಪಮೇಯರ್ ಚುನಾವಣೆಗೆ ಮುಹೂರ್ತ ನಿಗದಿ

ಜುಲೈ 30ರಂದು ಕಲಬುರಗಿ ಪ್ರಥಮ ಪ್ರಜೆ ಆಯ್ಕೆ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಕಲಬುರಗಿ ಮಹಾನಗರ ಪಾಲಿಕೆಯ 21ನೇ ಅವಧಿಯ ಮೇಯರ್ ಹಾಗೂ ಉಪ ಮೇಯರ್ ಸ್ಥಾನಗಳ ಅಧಿಕಾರಾವಧಿ ಮಾರ್ಚ್ 22ರಂದೇ ಮುಕ್ತಾಯವಾಗಿದ್ದು, 22ನೇ ಅವಧಿಯ ಚುನಾವಣೆಗೆ ಜುಲೈ 30ಕ್ಕೆ ಮುಹೂರ್ತ ನಿಗದಿಯಾಗಿದೆ. ಈ ಮೂಲಕ ಕಲಬುರಗಿಯ ಪ್ರಥಮ ಪ್ರಜೆಯಾಗಿ ಯಾರು ಆಯ್ಕೆಯಾಗಲಿದ್ದಾರೆ ಎನ್ನುವ ಕುತೂಹಲ ಸಾರ್ವಜನಿಕರಲ್ಲಿ ಮೂಡಿಸಿದೆ.

ಈಗಾಗಲೇ, ಹೊಸ ಮೀಸಲಾತಿ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಮೇಯರ್ ಸ್ಥಾನ ಎಸ್‌ಟಿ ಸಮುದಾಯಕ್ಕೆ ಮೀಸಲಾಗಿದೆ. ಉಪಮೇಯರ್ ಬಿಸಿಎ(2ಎ) ವರ್ಗಕ್ಕೆ ಸ್ಥಾನಕ್ಕೆ ಮೀಸಲಾಗಿದೆ ಎಂದು ಸರಕಾರ ಆದೇಶ ಹೊರಡಿಸಿದ್ದು, ವಿಧಾನ ಮಂಡಲ ಅಧಿವೇಶನ ಬಳಿಕ ಕಲಬುರಗಿ ಮಹಾನಗರ ಪಾಲಿಕೆಯ ಮೇಯರ್ ಹಾಗೂ ಉಪ ಮೇಯರ್ ಹಾಗೂ ನಾಲ್ಕು ಸ್ಥಾಯಿ ಸಮಿತಿಗಳಿಗೆ ಚುನಾವಣೆ ನಡೆಯುವುದು ಬಹುತೇಕ ಖಚಿತವಾಗಿದೆ.

21ನೇ ಪಾಲಿಕೆಯ ಅವಧಿ ಮುಕ್ತಾಯವಾದ ಹಿನ್ನೆಲೆಯಲ್ಲಿ ನೂತನ ಮೇಯರ್, ಉಪಮೇಯರ್ ಆಯ್ಕೆಗೆ ಚುನಾವಣೆ ನಡೆಯಲಿದೆ. ಸದ್ಯ ಪಾಲಿಕೆಯ 55 ವಾರ್ಡ್‌ಗಳ ಪೈಕಿ ಬಿಜೆಪಿಯ 22 ಸದಸ್ಯರಿದ್ದರೇ, ಕಾಂಗ್ರೆಸ್ 27 ಸದಸ್ಯರು ಮತ್ತು ನಾಲ್ಕು ಜೆಡಿಎಸ್ ಸದಸ್ಯರಿದ್ದಾರೆ. ಇನ್ನೂ ಇಬ್ಬರು ಸದಸ್ಯರು ಅನರ್ಹಗೊಂಡ ಹಿನ್ನಲೆ ಕೇವಲ 53 ಸದಸ್ಯರು ಮಾತ್ರ ಮತದಾನ ಮಾಡಲು ಅರ್ಹರಾಗಿದ್ದಾರೆ. ಇದೇ ಜುಲೈ 30ಕ್ಕೆ ನಡೆಯುವ ಚುನಾವಣೆಯಲ್ಲಿ ಮತ್ತೊಮ್ಮೆ ಕಾಂಗ್ರೆಸ್ ಪಾಲಿಕೆಯಲ್ಲಿ ಮತ್ತೆ ತನ್ನ ಪಾರುಪತ್ಯವನ್ನು ಸಾಧಿಸುವುದು ಖಚಿತ ಎನ್ನಲಾಗುತ್ತಿದೆ.

ಕಳೆದ ಮೇಯರ್ ಆಯ್ಕೆಯಲ್ಲಿ ಅತಿ ಹೆಚ್ಚು 27 ಸ್ಥಾನ ಗಳಿಸಿದ ಕಾಂಗ್ರೆಸ್ ಮತ ಲೆಕ್ಕಾಚಾರದಲ್ಲಿ ಎಡವಿದರಿಂದ ಅಧಿಕಾರದಿಂದ ದೂರ ಉಳಿಯಬೇಕಾಗಿತ್ತು. ಆದರೆ, ಬಿಜೆಪಿಯ ರಾಜಕೀಯ ಲೆಕ್ಕಾಚಾರ ಹಾಗೂ ಮೈತ್ರಿಯಿಂದ ಪಾಲಿಕೆ ಗದ್ದುಗೆ ಹಿಡಿಯಲು ಸಾಧ್ಯವಾಗಿತ್ತು. ಪ್ರಸ್ತುತ ಸನ್ನಿವೇಶದಲ್ಲಿ ಎಲ್ಲವೂ ಬದಲಾವಣೆಯಾಗಿದ್ದು, ಈ ಬಾರಿ ಪಾಲಿಕೆ ಖುರ್ಚಿ ಕೈಗೆ ಸಿಗುವುದು ಪಕ್ಕಾ ಎನ್ನಲಾಗುತ್ತಿದೆ.

ಜು.30ರಂದು ಚುನಾವಣೆ ಪ್ರಕ್ರಿಯೆ ನಡೆಯಲಿದ್ದು, ಅಂದೇ ನಾಮಪತ್ರ ಸಲ್ಲಿಕೆ, ಮತದಾನ ನಡೆಯಲಿದೆ. ಮೇಯರ್, ಉಪಮೇಯರ್, ತೆರಿಗೆ ನಿರ್ವಹಣೆ ಹಣಕಾಸು ಮತ್ತು ಅಪಿಲುಗಳ ಸ್ಥಾಯಿ ಸಮಿತಿ, ಆರೋಗ್ಯ ಶಿಕ್ಷಣ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ, ನಗರ ಯೋಜನೆ ಸುಧಾರಣೆ ಸ್ಥಾಯಿ ಸಮಿತಿ, ಲೆಕ್ಕಪತ್ರ ಸ್ಥಾಯಿ ಸಮಿತಿಗಳಿಗೆ ಸದಸ್ಯರ ಸ್ಥಾನಕ್ಕೆ ಚುನಾವಣೆ ನಡೆಯಲಿದೆ.

ಬಿಜೆಪಿಗೆ ಹಿನ್ನಡೆ

ವಿಧಾನಸಭೆ ಮತ್ತು ಲೋಕಸಭೆ ಚುನಾವಣೆ ನಂತರ ಬಿಜೆಪಿ ಬಲ ಕುಗ್ಗಿದೆ. ಪಾಲಿಕೆಯಲ್ಲಿ 23 ಜನ ಚುನಾಯಿತ ಸದಸ್ಯರನ್ನು ಹೊಂದಿದೆ. ಆದರೆ, ಇದರಲ್ಲಿ ಇಬ್ಬರು ಮತ ಚಲಾಯಿಸುವ ಹಕ್ಕು ಕಳೆದುಕೊಂಡಿದ್ದಾರೆ. ಇದು ಒಂದು ರೀತಿಯಲ್ಲಿ ಬಿಜೆಪಿಗೆ ತಲೆನೋವಾಗಿ ಪರಿಣಮಿಸಿದೆ. ಇದರ ಜತೆಗೆ ಜೆಡಿಎಸ್ ನಾಲ್ವರ ಸದಸ್ಯರ ಬೆಂಬಲ ನೀಡಿದರೆ ಅಧಿಕಾರ ಹಿಡಿಯಲು ಪ್ರಯತ್ನ ಮಾಡಬಹುದಾಗಿದೆ.

ವರ್ಕೌಟ್ ಆಗುತ್ತಾ ಬಿಜೆಪಿ-ಜೆಡಿಎಸ್ ಮೈತ್ರಿ..?

ಬಿಜೆಪಿ-ಜೆಡಿಎಸ್ ನಡುವೆ ರಾಷ್ಟ್ರ ಮಟ್ಟದಲ್ಲಿ ಮೈತ್ರಿಯಾಗಿದೆ. ಲೋಕಸಭೆ, ವಿಧಾನ ಪರಿಷತ್ ಚುನಾವಣೆ ಸೇರಿ ಇತರೆ ಕಡೆಗೆಲ್ಲ ಮೈತ್ರಿ ಮಾಡಿಕೊಂಡಿದ್ದು, ಸದ್ಯಕ್ಕೆ ದೋಸ್ತಿಗಳ ಜುಗಲ್ಬಂದಿ ಜೋರಾಗಿ ನಡೆದಿದೆ. ಆದರೆ, ಕಲಬುರಗಿ ಮಹಾನಗರ ಪಾಲಿಕೆ ಮೇಯರ್ ಹಾಗೂ ಉಪ ಮೇಯರ್ ಚುನಾವಣೆಯಲ್ಲಿ ಈ ದೋಸ್ತಿಗಳ ನಂಟು ಮುಂದುವರೆಯುತ್ತಾ ಎನ್ನುವುದೇ ಪ್ರಶ್ನೆಯಾಗಿದೆ. ಬಿಜೆಪಿ 22 ಹಾಗೂ ಜೆಡಿಎಸ್ 4 ಸೇರಿ ಒಟ್ಟು 26 ಸದಸ್ಯರ ಸಂಖ್ಯಾಬಲ ಮೈತ್ರಿ ಪಕ್ಷಗಳು ಹೊಂದಿವೆ. ಆದರೆ, ಜೆಡಿಎಸ್ ನ ಸದಸ್ಯರು ಪಾಲಿಕೆ ಮೇಯರ್ ಚುನಾವಣೆಯಲ್ಲಿ ಮೈತ್ರಿಗೆ ಜೈ ಎನ್ನುತ್ತಾರೋ ಇಲ್ಲವೋ ಎನ್ನುವುದನ್ನು ಕಾದುನೋಡಬೇಕಾಗಿದೆ.

ಹತ್ತು ಪ್ರತಿನಿಧಿಗಳಿಗೆ ಮತದಾನದ ಹಕ್ಕು

ರಾಜ್ಯಸಭೆ ವಿರೋಧ ಪಕ್ಷದ ನಾಯಕ ಡಾ. ಮಲ್ಲಿಕಾರ್ಜುನ ಖರ್ಗೆ, ಸಂಸದ ರಾಧಾಕೃಷ್ಣ ದೊಡ್ಡಮನಿ, ಶಾಸಕರಾದ ಖನೀಜ್ ಫಾತಿಮಾ, ಅಲ್ಲಮಪ್ರಭು ಪಾಟೀಲ್, ಬಸವರಾಜ್ ಮತ್ತಿಮಡು, ವಿಪ ಸದಸ್ಯರಾದ ಶಶೀಲ್ ನಮೋಶಿ, ಸುನೀಲ್ ವಲ್ಲ್ಯಾಪುರೇ, ಬಿ.ಜಿ ಪಾಟೀಲ್ ಚಂದ್ರಶೇಖರ ಪಾಟೀಲ್ ಹಾಗೂ ತಿಪ್ಪಣ್ಣಪ್ಪ ಕಮಕನೂರ್ ಅವರು ಸಹ ಪಾಲಿಕೆ ಮೇಯರ್ ಹಾಗೂ ಉಪ ಮೇಯರ್ ಚುನಾವಣೆಯಲ್ಲಿ ಮತದಾನ ಮಾಡುವ ಹಕ್ಕನ್ನು ಪಡೆದಿದ್ದಾರೆ. ಎಲ್ಲಾ ಮತದಾರರಿಗೆ ಸೂಚನಾ ಪತ್ರ ನೀಡಲಾಗಿದೆ. ಇನ್ನೂ, ವಾರ್ಡ್ ಸಂಖ್ಯೆ 36ರ ಪಕ್ಷೇತರ ಅಭ್ಯರ್ಥಿ ಶಂಭುಲಿಂಗ ಬಳಬಟ್ಟಿ ಸದಸ್ಯತ್ವ ಇದ್ದರು ಮತದಾನದ ಹಕ್ಕು ಪಡೆದಿಲ್ಲ. ವಾರ್ಡ್ 24ರ ಪ್ರಿಯಾಂಕ್ ಭೂವಿ ಸದಸ್ಯತ್ವ ಕುರಿತು ತಡೆಯಾಜ್ಞೆ ಇರುವುದರಿಂದ ಮತ ಚಲಾಯಿಸುವಂತಿಲ್ಲ.

ಸದಸ್ಯರ ಸಂಖ್ಯಾಬಲ

ಕಾಂಗ್ರೆಸ್
ಸದಸ್ಯರು 27
ಜನಪ್ರತಿನಿದಿನಗಳು 6
ಒಟ್ಟು 33

ಬಿಜೆಪಿ
ಸದಸ್ಯರು 22
ಜನಪ್ರತಿನಿದಿನಗಳು 4
ಒಟ್ಟು 26

ಜೆಡಿಎಸ್
ಸದಸ್ಯರು 4
ಜನಪ್ರತಿನಿದಿನಗಳು 0
ಒಟ್ಟು 4

ಒಟ್ಟು ಸದಸ್ಯರು 53
ಜನಪ್ರತಿನಿದಿನಗಳು 10
ಒಟ್ಟು 63

ಯಲ್ಲಪ್ಪ ಏಕೈಕ ಸದಸ್ಯ

ಸದ್ಯದ ಮೂಲಗಳ ಮಾಹಿತಿ ಪ್ರಕಾರ, ವಾರ್ಡ್ 53ರ ಕಾಂಗ್ರೆಸ್ ಸದಸ್ಯ ಯಲ್ಲಪ್ಪ ನಾಯಿಕೋಡಿ ಎಸ್‌ಟಿ ಸಮುದಾಯಕೆ ಸೇರಿದ್ದು, ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಪಕ್ಷದಲ್ಲಿರುವ ಈ ಸಮುದಾಯದ ಏಕೈಕ ಸದಸ್ಯರಾಗಿದ್ದಾರೆ. ಹೀಗಾಗಿ ಇವರು ಮೇಯರ್ ಆಗುವುದು ಬಹುತೇಕ ಖಚಿತ ಎಂಬ ಮಾತುಗಳು ಜಿಲ್ಲೆಯಲ್ಲಿ ಚರ್ಚಿತವಾಗುತ್ತಿದೆ.

ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ಈ ಬಾರಿ ಕಾಂಗ್ರೆಸ್ ಮೇಯರ್ ಸ್ಥಾನ ಪಡೆಯುವುದು ಖಚಿತ. ಕಳೆದ ಬಾರಿಗಿಂತ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್‌ನಲ್ಲಿದ್ದೇವೆ. ಮೇಯರ್ ಸ್ಥಾನಕ್ಕೆ ಎಸ್.ಟಿ ಅಭ್ಯರ್ಥಿ ಒಬ್ಬರೇ ಇದ್ದು, 100ಕ್ಕೆ 100 ಕಾಂಗ್ರೆಸ್ ಗೆಲುವು ಪಕ್ಕಾ. ಮೇಯರ್, ಉಪ ಮೇಯರ್ ಎರಡು ನಮ್ದೇ.

– ಡಾ. ಶರಣಪ್ರಕಾಶ್ ಪಾಟೀಲ್
ವೈದ್ಯಕೀಯ ಶಿಕ್ಷಣ ಸಚಿವ

ಅಪರೂಪದ ಮದುವೆಗೆ ಜಿಲ್ಲಾಧಿಕಾರಿ ಸಾಕ್ಷಿ

ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ನವ ವಧು-ವರರಿಗೆ ಉಡುಗೊರೆ ನೀಡಿ ಶುಭ ಕೋರಿದರು.

ಕಲಬುರಗಿ: ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಅನಾಥೆಯರ ಅಪರೂಪದ ಮದುವೆಗೆ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರು ಸಾಕ್ಷಿಯಾಗಿ ನವ ವಧು-ವರರಿಗೆ ಉಡುಗೊರೆಯೊಂದು ನೀಡಿ ಶುಭ ಕೋರಿದರು.

ಜಿಲ್ಲಾಧಿಕಾರಿಗಳ ಗೃಹ ಕಚೇರಿಯಲ್ಲಿ ಗುತ್ತಿಗೆ ಮೇಲೆ ಗ್ರೂಪ್ 'ಡಿ' ನೌಕರರಾಗಿ ಕಾರ್ಯನಿರ್ವಹಿಸುತ್ತಿರುವ ಕಲಬುರಗಿ ನಗರದ ಬಾಪು ನಗರ ನಿವಾಸಿ ಶರಣಮ್ಮ ತಂದೆ ಲಕ್ಷ್ಮಣ ಅವರಿಗೆ ವಾಡಿ ಪಟ್ಟಣದ ನಿವಾಸಿ ಮೌನೇಶ ಅವರು ತಾಳಿ ಕಟ್ಟುವ ಮೂಲಕ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿಯೇ ನೂತನ ಬದುಕಿಗೆ ಹೆಜ್ಜೆ ಇಟ್ಟರು. ತಂದೆ-ತಾಯಿ ಇಲ್ಲದ ಮೌನೇಶ ಸ್ಥಳೀಯ ಸರಕಾರಿ ಕಚೇರಿಯಲ್ಲಿ ಗುತ್ತಿಗೆ ವಾಹನ ಚಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದು ಬಾಡಿಗೆ ಮನೆ ಪಡೆದು ವಾಸವಾಗಿದ್ದಾರೆ. ಅದೇ ರೀತಿ ಚಿಕ್ಕ ವಯಸ್ಸಿನಲ್ಲಿ ಹೆತ್ತವರನ್ನು ಕಳೆದುಕೊಂಡ ಶರಣಮ್ಮ ಸಹ ಇಲ್ಲಿನ ಬಾಡಿಗೆ ಮನೆಯೊಂದರಲ್ಲಿ ವಾಸವಿದ್ದು, ಡಿ.ಸಿ. ಅವರ ಮನೆಯಲ್ಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಸಹೋದರಿ ಮದುವೆ ಮಾಡಿಕೊಂಡು ರಾಯಚೂರಿಗೆ ಹೋಗಿದ್ದರಿಂದ ಇವರು ಒಂಟಿಯಾಗಿ ನಗರದಲ್ಲಿ ನೆಲೆಸಿದ್ದರು. ಸೋಮವಾರ ಇಬ್ಬರು ಪರಸ್ಪರ ಒಪ್ಪಿಗೆಯ ಮೇರೆಗೆ ಕಾನೂನು ಬದ್ಧವಾಗಿ ಮದುವೆ ಮಾಡಿಕೊಂಡು ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ.

ಬೇಡಿಕೆ ಈಡೇರಿಕೆಗೆ ಮನವಿ

ಕಲಬುರಗಿಯಲ್ಲಿ ರೈಲ್ವೆ ವಿಭಾಗ ಆರಂಭಿಸಲು ಸಿಎಂ ಸಲಹೆಗಾರಿಗೆ ಮನವಿ ಸಲ್ಲಿಸಿದರು.

ಕಲಬುರಗಿ: ಜಿಲ್ಲೆಯ ಸಮಗ್ರ ಅಭಿವೃದ್ದಿಗಾಗಿ ಮುಖ್ಯಮಂತ್ರಿಗಳ ಸಲಹೆಗಾರ, ಶಾಸಕ ಬಿ.ಆರ್. ಪಾಟೀಲ್ ಅವರಿಗೆ ಕಲ್ಯಾಣ ನಾಡು ವಿಕಾಸ ವೇದಿಕೆಯ ವತಿಯಿಂದ ನಗರದಲ್ಲಿ ಮನವಿ ಮಾಡಲಾಯಿತು.

ರಾಜ್ಯದಲ್ಲಿ 5 ವರ್ಷದ ಸ್ಥಿರ ಸರಕಾರ ಸ್ಥಾಪನೆಯಾಗಿದ್ದು, ಸ್ಥಿರ ಸರಕಾರ ಇರುವುದರಿಂದ, ಜೋತೆಗೆ ಕಲಬುರಗಿ ಜಿಲ್ಲೆಯಿಂದ ಕಾಂಗ್ರೆಸ್ ಶಾಸಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ಜಿಲ್ಲೆಯ ಜನರು ಆರಿಸಿ ಕಳುಹಿಸಿದ್ದಾರೆ. ಅದಕ್ಕಾಗಿ 5 ವರ್ಷದಲ್ಲಿ ಜಿಲ್ಲೆಯ ಪ್ರಮುಖ ಯೋಜನೆಗಳನ್ನು ಪೂರ್ಣಗೊಳಿಸಲು ಕಾಲಮಿತಿ ಹಾಕಿಕೊಂಡು ಜಿಲ್ಲೆಯನ್ನು ಸರ್ವಾಂಗಿಣ ಅಭಿವೃದ್ದಿ ಮಾಡಬೇಕು ಎಂದು ಒತ್ತಾಯಿಸಿದರು. ಡಾ. ಡಿ.ಎಂ. ನಂಜುಂಡಪ್ಪ ಸಮಿತಿಯ ವರದಿಯ ಪ್ರಕಾರ ಏಮ್ಸ್ ಆಸ್ಪತ್ರೆಯು ಕಲಬುರಗಿಯಲ್ಲಿ ಸ್ಥಾಪಿಸಬೇಕು, 2018ರ ಲೋಕಸಭೆಯ ಪಾರ್ಲಿಮೇಂಟರಿ ಅಕೌಂಟ್ಸ್ 'ಕಮಿಟಿ (ಪಿಎಸಿ) ಯು ದೇಶದ ಎಲ್ಲಾ ಎ.ಎಸ್.ಐ.ಸಿ ಆಸ್ಪತ್ರೆಗಳನ್ನು ಏಮ್ಸ್ ಆಗಿ ಮೇಲ್ದರ್ಜೆಗೆ ಏರಿಸಬೇಕೆಂದು ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಿದೆ, 2020 ರಲ್ಲಿ ಮದ್ರಾಸ್ ಹೈಕೋರ್ಟ ಕೂಡ ದೇಶದಲ್ಲಿನ ಇ.ಎಸ್.ಐ.ಸಿ ಆಸ್ಪತ್ರೆಗಳನ್ನು ಏಮ್ಸ್ ಆಗಿ ಮೇಲ್ದರ್ಜೆಗೆ ಏರಿಸಬೇಕೆಂದು ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಿದೆ, ಕಲಬುರಗಿಯಲ್ಲಿ ರೈಲ್ವೆ ವಿಭಾಗ ಆರಂಭಿಸಬೇಕು ಎಂದು ಮನವಿ ಸಲ್ಲಿಸಿದರು.

ಏಮ್ಸ್ ನೀಡದಿದ್ದರೆ, ದಿಲ್ಲಿ ಚಲೋ

ಕಲಬುರಗಿ: ಜುಲೈ 23ರಂದು ಕೇಂದ್ರ ಬಜೆಟ್‌ನಲ್ಲಿ ರಾಯಚೂರಿಗೆ ಏಮ್ಸ್ ಘೋಷಿಸದೇ ಹೋದಲ್ಲಿ ಆಗಸ್ಟ್ 6ರಂದು ದೆಹಲಿಯ ಜಂತರ್ ಮಂತರ್ ನಲ್ಲಿ ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳವರು ಸಂಘಟಿತ ಹೋರಾಟವನ್ನು ಮಾಡುತ್ತೇವೆ ಎಂದು ಕಲ್ಯಾಣ ಕರ್ನಾಟಕ ಹೋರಾಟ ಸಮಿತಿಯ ಸಂಸ್ಥಾಪಕ ಅಧ್ಯಕ್ಷ ಲಕ್ಷ್ಮಣ್ ದಸ್ತಿ ಅವರು ಎಚ್ಚರಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಲ್ಯಾಣ ಕರ್ನಾಟಕವು ಇಡೀ ಭಾರತದಲ್ಲಿಯೇ ಹಿಂದುಳಿದ ಪ್ರದೇಶವಾಗಿದೆ ಎಂಬುದು ಕೇಂದ್ರಕ್ಕೂ ಗೊತ್ತಿದೆ. ಡಾ. ಡಿ.ಎಂ. ನಂಜುಂಡಪ್ಪ ವರದಿ ಪ್ರಕಾರ ಹಿಂದುಳಿದ ಕಲ್ಯಾಣ ಕರ್ನಾಟಕಕ್ಕೆ ಐಐಟಿ ಕೊಡಬೇಕಾಗಿತ್ತು. ಆದಾಗ್ಯೂ, ಮುಂಬಯಿ ಕರ್ನಾಟಕದ ರಾಜಕಾರಣಿಗಳ ಕುತಂತ್ರದಿಂದ ಧಾರವಾಡಕ್ಕೆ ಸ್ಥಳಾಂತರವಾಗಿದೆ. ಕಳೆದ ಎರಡು ವರ್ಷಗಳಿಂದ ಏಮ್ಸ್ ಗಾಗಿ ಹೋರಾಟ ಮಾಡಲಾಗುತ್ತಿದೆ. ಆದರೂ ಕೇಂದ್ರ ಸರಕಾರವು ಹೋರಾಟಕ್ಕ ಸ್ಪಂದಿಸುತ್ತಿಲ್ಲ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

371(ಜೆ)ಗೆ ಕೆಲವರು ವಿರೋಧಿಸುತ್ತಿರುವುದನ್ನು ಖಂಡಿಸಿ ಈಗಾಗಲೇ, ಕಲ್ಯಾಣ ಕರ್ನಾಟಕದಲ್ಲಿ ಒಗ್ಗಟ್ಟಿನ ಹೋರಾಟ ಮಾಡಿದ್ದವೆ. ಈಗ ಸಂಘಟಿತ ಹೋರಾಟವನ್ನು ಏಮ್ಸ್ ಗಾಗಿ ಮಾಡಿ ರಾಜ್ಯಕ್ಕೆ, ರಾಷ್ಟ್ರಕ್ಕೆ ತೋರಿಸಿಕೊಡುತ್ತೇವೆ ಎಂದು ಹೇಳಿದ ಅವರು, ಪ್ರಧಾನಿ ನ್ಯಾಯ ಕೊಡದೇ ಇದ್ದರೆ ಬರುವ ಆಗಸ್ಟ್ 6ರಂದು ಜಂತರ್ ಮಂತರ್ ನಲ್ಲಿ ಬೃಹತ್ ಹೋರಾಟ ಮಾಡಲಾಗುವುದು ಎಂದು ದಸ್ತಿ ಎಚ್ಚರಿಸಿದರು.

ಈಗಾಗಲೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅವರು ಪ್ರಧಾನಿಯವರಿಗೆ ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆ ಕುರಿತಂತೆ ಒಂದು ಪ್ರಸ್ತಾವನೆ ಸಲ್ಲಿಸಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ನಾವೂ ಸಹ ಕೇಂದ್ರದ ಬಳಿಗೆ ನಿಯೋಗ ಹೋಗಿದ್ದೇವೆ. ಕೇಂದ್ರ ಸರಕಾರ ಸ್ಪಂದಿಸುತ್ತಿಲ್ಲ. ಅದಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಳೆದ ನಾಲ್ಕೈದು ದಿನಗಳ ಹಿಂದೆ ರಾಯಚೂರಿಗೆ ಏಮ್ಸ್ ಕೊಡಬೇಕು ಇಲ್ಲವೇ ಕಲ್ಯಾಣ ಕರ್ನಾಟಕಕ್ಕೆ ಪ್ಯಾಕೇಜ್ ಘೋಷಿಸಬೇಕು ಎಂದು ಮತ್ತೊಂದು ಪ್ರಸ್ತಾವನೆ ಸಲ್ಲಿಸಿದ್ದಾರೆ. ರಾಜ್ಯ ಸರಕಾರದ ಪ್ರಸ್ತಾವನೆಗೆ ಪ್ರಧಾನಿಯವರು ಸ್ಪಂದಿಸಬೇಕು. ಈ ಸಂಬಂಧ ಇದೇ ಜುಲೈ 16ರಂದು ಕೇಂದ್ರದ ವಿರುದ್ಧ ರಾಯಚೂರಿನಲ್ಲಿ ಉಗ್ರ ಹೋರಾಟ ಹಮ್ಮಿಕೊಂಡಿದ್ದೇವೆ. ಏಳು ಜಿಲ್ಲೆಗಳಲ್ಲಿ ಏಕಕಾಲಕ್ಕೆ ಈ ಕುರಿತು ಹೋರಾಟ ಮಾಡುತ್ತಿದ್ದೇವೆ ಎಂದು ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ರಾಯಚೂರು ಜಿಲ್ಲಾ ಏಮ್ಸ್ ಹೋರಾಟ ಸಮಿತಿಯ ಪ್ರಧಾನ ಸಂಚಾಲಕ ಡಾ. ಬಸವರಾಜ್ ಕಳಸ, ಡಾ. ಬಸವರಾಜ್ ಕುಮ್ನೂರು, ಪ್ರೊ. ಆರ್.ಕೆ. ಹುಡಗಿ, ಮನಿಷ್ ಜಾಜು, ಲಿಂಗರಾಜ್ ಸಿರಗಾಪೂರ್, ಡಾ. ಮಾಜಿದ್ ಡಾಗಿ ಮುಂತಾದವರು ಉಪಸ್ಥಿತರಿದ್ದರು.

ಸಮಾಜ ಸೇವೆ: ಶಿಕ್ಷಕರ ಹೊಣೆ ಶ್ಲಾಘನೀಯ

ಆಳಂದ: ಬಿಎಡ್ ಪ್ರಶಿಕ್ಷಣಾರ್ಥಿಗಳು ಗ್ರಾಮೀಣ ಭಾಗಗಳಿಗೆ ಭೇಟಿ ನೀಡಬೇಕು. ಅಲ್ಲಿನ ಮಕ್ಕಳ ಕಲಿಕೆಯನ್ನು ಹೆಚ್ಚಿಸಲು ಸ್ಥಳೀಯ ಶಾಲೆಗಳೊಂದಿಗೆ ಕೆಲಸ ಮಾಡಬೇಕು. ಜನರಲ್ಲಿ ಪರಿಸರ ಮತ್ತು ಸಮುದಾಯದ ಬಗೆಗೆ ಅವರ ಜವಾಬ್ದಾರಿಯ ಕುರಿತು ತಿಳಿಹೇಳುವ ಮೂಲಕ ಸಮಾಜಕ್ಕೆ ಜವಾಬ್ದಾರಿಯುತ ಸೇವೆ ಸಲ್ಲಿಸಬೇಕು ಎಂದು ಸಿಯುಕೆಯ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಹೇಳಿದರು.

ವಿಶ್ವವಿದ್ಯಾಲಯದ ಸಮುದಾಯ ಜೀವನ ಕುರಿತ ಶಿಬಿರದಲ್ಲಿ ಸಿಯುಕೆಯ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಮಾತನಡಿದರು.

ಇಲ್ಲಿನ ಕೇಂದ್ರೀಯ ವಿಶ್ವವಿದ್ಯಾಲಯದ ಶಿಕ್ಷಣ ಮತ್ತು ತರಬೇತಿ ವಿಭಾಗವು ವಿಶ್ವವಿದ್ಯಾಲಯದ ಆವರಣದಲ್ಲಿ ಆಯೋಜಿಸಿದ್ದ ಸಮುದಾಯ ಜೀವನ ಕುರಿತ ಶಿಬಿರವನ್ನು ಉದ್ಘಾಟಿಸಿ ಮಾತನಾಡಿ, ಗುಣಮಟ್ಟದ ಶಿಕ್ಷಣ, ಗ್ರಾಮೀಣ ಜೀವನ, ಪರಿಸರ, ಆರೋಗ್ಯ ಮತ್ತು ನೈರ್ಮಲ್ಯದ ಸಮಸ್ಯೆಗಳು ಮತ್ತು ಸವಾಲುಗಳನ್ನು ಅರ್ಥಮಾಡಿಕೊಳ್ಳಲು ಶಿಕ್ಷಕ ಪ್ರಶಿಕ್ಷಣಾರ್ಥಿಗಳು ಗ್ರಾಮೀಣ ಪ್ರದೇಶಗಳಿಗೆ ಹೋಗಬೇಕು. ಅವುಗಳಿಗೆ ಪರಿಹಾರ ಒದಗಿಸಬೇಕು. ಶಿಕ್ಷಕರು ಸಬಲರಾದರೆ ಅದು ಸಮುದಾಯಗಳನ್ನು ಶ್ರೀಮಂತಗೊಳಿಸಿದಂತೆ ಎಂದು ಸಲಹೆ ನೀಡಿದರು.

ಪ್ರತಿಯೊಬ್ಬರೂ ಪ್ರಕೃತಿಯ ಬಗ್ಗೆ ಜವಾಬ್ದಾರಿಯುತವಾಗಿ ವರ್ತಿಸಬೇಕು. ಗಿಡಗಳನ್ನು ನೆಟ್ಟು ಭೂಮಿ ಮತ್ತು ಜಲ ಸಂರಕ್ಷಣೆ ಮಾಡಬೇಕು. ನಾವು ವಿಶ್ವವಿದ್ಯಾಲಯದ ಆವರಣವನ್ನು ಸಂಪೂರ್ಣವಾಗಿ ಹಸಿರು ಆವರಣ ಮಾಡಲು ಬಯಸುತ್ತೇವೆ ಅದಕ್ಕಾಗಿ ಈ ವರ್ಷ 2000 ಸಸಿಗಳನ್ನು ನೆಡುತ್ತಿದ್ದೇವೆ ಎಂದು ಹೇಳಿದರು.

ಶಿಕ್ಷಣ ನಿಕಾಯದ ಡೀನ್ ಪ್ರೊ.ಜಿ.ಆರ್. ಅಂಗಡಿ ಮಾತನಾಡಿ, ನಮ್ಮ ಬಿಎಡ್ ಪ್ರಶಿಕ್ಷಣಾರ್ಥಿಗಳಿಗಾಗಿ ಈ ಸಮುದಾಯ ಜೀವನ ಕುರಿತ ಶಿಬಿರ ಮತ್ತು ಮರ ನೆಡುವ ಅಭಿಯಾನವನ್ನು ಹಮ್ಮಿಕೊಂಡಿದ್ದೇವೆ. ಇದು ಅವರಲ್ಲಿ ಸಮುದಾಯದ ಸಹಭಾಗಿತ್ವದ ಬಗ್ಗೆ ಜವಾಬ್ದಾರಿಯುತ ಪ್ರಜ್ಞೆಯನ್ನು ಮೂಡಿಸಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

ವಿದ್ಯಾರ್ಥಿ ಕಲ್ಯಾಣ ವಿಭಾಗದ ಡೀನ್ ಡಾ.ಬಸವರಾಜ ಕುಬಕಡ್ಡಿ, ಡಾ.ಸಾಯಿ ಅಭಿನವ ಸೇರಿದಂತೆ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು

ಹಾಸ್ಟೆಲ್ ವಾರ್ಡನ್ ಬೇಡ ವಿದ್ಯಾರ್ಥಿಗಳ ಧರಣಿ

ಚಿತ್ತಾಪುರ: ಮ್ಯಾಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯಕ್ಕೆ ಮತ್ತೊಮ್ಮೆ ಅನಿತಾ ಅವರು ವಾರ್ಡನ್ ಆಗಿ ಬರುತ್ತಿರುವ ವಿಷಯ ತಿಳಿದು ವಸತಿ ನಿಲಯದ ವಿದ್ಯಾರ್ಥಿನಿಯರು ಪಟ್ಟಣದ ಲಾಡ್ಜಿಂಗ್ ಕ್ರಾಸ್ ನಲ್ಲಿ ಬೆಳ್ಳಂಬೆಳಿಗ್ಗೆ ಮಿಂಚಿನ ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ವಿದ್ಯಾರ್ಥಿನಿಯರು, ಪುನಃ ಅನಿತಾ ಅವರು ವಾರ್ಡನ್ ಆಗಿ ಬರುವುದು ಬೇಡ. ಅವರ ಬದಲಿಗೆ ಬೇರೆ ಯಾರಾದರೂ ವಾರ್ಡನ್ ಬರಲಿ ಎಂಬುದು ವಿದ್ಯಾರ್ಥಿಯರ ಕೂಗಾಗಿತ್ತು. ಮುಂಚೆ ಸಾಕಷ್ಟು ತೊಂದರೆಗಳು ಆಗಿದ್ದರಿಂದ ಅವರು ಬೇಡ ಎಂದು ಸಂಬಂಧಪಟ್ಟ ಅಧಿಕಾರಿಗಳೇ ಅವರ ಬದಲಿಗೆ ಬೇರೆಯವರನ್ನು ವಾರ್ಡನ್ ಆಗಿ ನೇಮಿಸಿತು. ಈಗ ಮತ್ತೆ ಅವರನ್ನು ನಮ್ಮ ವಸತಿ ನಿಲಯಕ್ಕೆ ವಾರ್ಡನ್ ಬರುವುದು ಬೇಡ ಎಂದು ವಿದ್ಯಾರ್ಥಿನಿಯರು ಹೇಳಿದರು.

ಪ್ರತಿಭಟನೆ ನಡೆಯುತ್ತಿರುವ ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಪಿಎಸ್‌ಐ ಶ್ರೀಶೈಲ ಅಂಬಾಟಿ, ಆಗಮಿಸಿ ವಿದ್ಯಾರ್ಥಿನಿಯರ ಮನವಿಗೆ ಸ್ಪಂದಿಸಿ ಪ್ರತಿಭಟನೆ ನಿಲ್ಲಿಸಿದರು. ಬಳಿಕ ಮನವಿ ಪತ್ರವನ್ನು ತಹಸೀಲ್ದಾರ್‌ರಿಗೆ ನೀಡಿ ಸ್ಪಂದಿಸುವಂತೆ ಕೋರಿದರು.

ಸರಕಾರಿ ಮಹಿಳಾ ಕಾಲೇಜಿನ ಅಭಿವೃದ್ಧಿಗೆ ಭರವಸೆ

ಕಲಬುರಗಿ: ನಗರದ ಏಕೈಕ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಇದಾಗಿದ್ದು, ಈ ಕಾಲೇಜಿನಲ್ಲಿ ಬಡ ವಿದ್ಯಾರ್ಥಿನಿಯರು ಅಧ್ಯಯನ ಮಾಡುತ್ತಿದ್ದು, ಸರಕಾರದಿಂದ ಎಲ್ಲಾ ರೀತಿಯ ಸೌಲಭ್ಯ ಒದಗಿಸುವುದಾಗಿ ಲೋಕಸಭಾ ಸದಸ್ಯ ರಾಧಾಕೃಷ್ಣ ದೊಡ್ಡಮನಿ ವಿದ್ಯಾರ್ಥಿನಿಯರಿಗೆ ಭರವಸೆ ನೀಡಿದರು. ನಗರದ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಹೆಚ್ಚುವರಿ ತರಗತಿ ಕೋಣೆಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರಕಾರಿ ಮಹಿಳಾ ಪದವಿ ಕಾಲೇಜಿನ ಅಭಿವೃದ್ಧಿಗೆ ಶ್ರಮಿಸಲು ಪಣತೊಡುವುದಾಗಿ ಭರವಸೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಕಲಬುರಗಿ ದಕ್ಷಿಣ ಮತಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ್ ಮಾತನಾಡಿ, ಈ ಕಾಲೇಜಿನ ಅಭಿವೃದ್ಧಿಗೆ ಶ್ರಮಿಸುವುದಾಗಿ ಭರವಸೆ ನೀಡಿದರು.

ವೇದಿಕೆಮೇಲೆ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾದ ಡಾ. ಶಿವಶರಣ ಗೊಳ್ಳೆ, ವಿಧಾನ ಪರಿಷತ್ ಶಾಸಕ ಜಗದೇವ ಗುತ್ತೇದಾರ್, ಮಾಜಿ ಮೇಯರ್ ಬಾಬು ಒಂಟಿ, ರೈಟ್ಸ್ ಸಂಸ್ಥೆಯ ಅಧಿಕಾರಿಗಳು, ಕಾಲೇಜಿನ ಪ್ರಾಂಶುಪಾಲರಾದ ಡಾ. ಮೋರಗೆ ಪ್ರಕಾಶ ಸೇರಿ ಕಾಲೇಜಿನ ಬೋಧಕ, ಭೋದಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ದಿ.ಧರ್ಮಣ್ಣ ದೊಡ್ಡಮನಿ ನುಡಿನಮನ ನಾಳೆ

ಜೇವರ್ಗಿ: ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ಮಂಡಳಿಯ ಮಾಜಿ ಅಧ್ಯಕ್ಷ ಹಾಗೂ ಬಿಜೆಪಿ ಮುಖಂಡರಾಗಿದ್ದ ದಿ.ಧರ್ಮಣ್ಣ ದೊಡ್ಮನಿ ಗಂವ್ಹಾರ ಅವರ ಅಭಿಮಾನಿ ಬಳಗ ಜೇವರ್ಗಿ ವತಿಯಿಂದ ಇದೆ ಜುಲೈ 14ರಂದು ಬೆಳಗ್ಗೆ 10.30ಕ್ಕೆ ಪಟ್ಟಣದ ಬೂತಪೂರ್ ಕಲ್ಯಾಮಂಟಪದಲ್ಲಿ ನುಡಿನಮನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಬೀರಪ್ಪ ಡಿ.ಪೂಜಾರಿ ಆಂದೋಲ ತಿಳಿಸಿದ್ದಾರೆ.

ಈ ಕುರಿತು ಮಾತನಾಡಿದ ಅವರು, ದಿ.ಧರ್ಮಣ್ಣ ದೊಡ್ಡಮನಿ ಅವರ ನುಡಿನಮನ ಕಾರ್ಯಕ್ರಮಕ್ಕೆ ವಿಧಾನ ಪರಿಷತ್ ಮುಖ್ಯ ಸಚೇತಕರಾದ ಎನ್.ರವಿಕುಮಾರ್ ಅವರು ಆಗಮಿಸಲಿದ್ದು, ಜಿಲ್ಲೆಯ ಮಾಜಿ ಮತ್ತು ಹಾಲಿ ಶಾಸಕರು, ಮಾಜಿ ಸಂಸದರು ಸೇರಿ ತಾಲೂಕಿನ ಎಲ್ಲಾ ಮಠಾಧೀಶರು ಆಗಮಿಸಲಿದ್ದಾರೆ. ಆದರಿಂದ ಜಿಲ್ಲೆಯ ಹಾಗೂ ತಾಲೂಕಿನ ಪಕ್ಷದ ಕಾರ್ಯಕರ್ತರು ಹಾಗೂ ಕುಲಬಾಂಧವರು ಮತ್ತು ಧರ್ಮಣ್ಣ ದೊಡ್ಡಮನಿ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕು ಎಂದು ಕೋರಿದ್ದಾರೆ. ಈ ಸಂದರ್ಭದಲ್ಲಿ ದೇವೇಂದ್ರ ಮುತ್ತಕೋಡ, ಗುರುಗೌಡ ಮಾಲಿ ಪಾಟೀಲ್, ಸಂಗಣ್ಣಗೌಡ ರದ್ದೇವಾಡಗಿ, ಭಾಗೇಶ್ ಹೋತಿನಮಡು, ಗುರುರಾಜ್ ಸುಲಹಳ್ಳಿ, ಮಲ್ಲಣ್ಣ ಕುಸ್ತಿ, ಮರೆಪ್ಪ ಬಡಿಗೇರ, ರೇವಣಸಿದ್ದಪ್ಪ ಸಂಕಾಲಿ, ತಿಪ್ಪಣ್ಣ ರಾಠೋಡ್, ಭೀಮಾಶಂಕರ ಯಲಗುಡ್, ವಿಶ್ವಾರಾಧ್ಯ ಬಡಿಗೇರ, ನಿಂಗಣ್ಣ ರದ್ದೇವಾಡಗಿ, ದೇವು ಪೂಜಾರಿ ಕೊಡಚಿ ಉಪಸ್ಥಿತರಿದ್ದರು.

ಡೆಂಘೀ, ಚಿಕುನ್‌ಗುನ್ಯ ಸೋಂಕು ನಿಯಂತ್ರಿಸಿ



ಜಿಲ್ಲಾ ಪಂಚಾಯತ್ ಹೊಸ ಸಭಾಂಗಣದಲ್ಲಿ ನಡೆದ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಭಂವರ ಜಿಪಂ. ಸಿಇಒಸಿಂಗ್ ಮೀನಾ ಮಾತನಾಡಿದರು.

ಕಲಬುರಗಿ: ಜಿಲ್ಲೆಯಲ್ಲಿ ಡೆಂಘೀ ಹಾಗೂ ಚಿಕನ್‌ಗುನ್ಯ ಪ್ರಕರಣ ಹೆಚ್ಚಾಗುತ್ತಿದ್ದು ಎಲ್ಲ ಅಧಿಕಾರಿಗಳು ಕಡ್ಡಾಯವಾಗಿ ಕೇಂದ್ರಸ್ಥಾನದಲ್ಲಿ ಇದ್ದು, ಕಾರ್ಯ ನಿರ್ವಹಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಭಂವರ ಸಿಂಗ್ ಮೀನಾ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ್ ಹೊಸ ಸಭಾಂಗಣದಲ್ಲಿ ನಡೆದ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿಗಳು ಜುಲೈ 8 ಮತ್ತು 9 ರಂದು ನಡೆದ ಸಭೆಯಲ್ಲಿ ತಿಳಿಸಿದ್ದಾರೆ. ಅಧಿಕಾರಿಗಳು ಗ್ರಾಮ ಪಂಚಾಯತ ವ್ಯಾಪ್ತಿಯ ಗ್ರಾಮಗಳಲ್ಲಿ ಸ್ವಚ್ಚತೆಯನ್ನು ಕಾಪಾಡುವುದು ಹಾಗೂ ಗ್ರಾಮ ಪಂಚಾಯತ ಆವರಣ, ಸರಕಾರಿ ಆಸ್ಪತ್ರಗಳು/ಶಾಲೆಗಳಲ್ಲಿ, ಅಂಗನವಾಡಿ ಕೇಂದ್ರಗಳಲ್ಲಿ ಸ್ವಚ್ಛವಾಗಿ ಇಡಬೇಕು. ಇತರೆ ಸರಕಾರಿ ಕಟ್ಟಡಗಳಲ್ಲಿ ಸ್ವಚ್ಚತೆ ಕಾಪಾಡುವುದು ನೀರು ನಿಲ್ಲದಂತೆ ವ್ಯವಸ್ಥೆ ಮಾಡಲು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಫಾಗಿಂಗ್ ಮಾಡಿ ಸೊಳ್ಳೆಗಳಾಗದಂತೆ ತಡೆಗಟ್ಟುವುದರ ಕುರಿತು ಮತ್ತು ಡೆಂಗ್ಯೂ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಸಭೆಯಲ್ಲಿದ್ದ ಎಲ್ಲಾ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚನೆ ನೀಡಿದರು. ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಕೂಲಿ ಕಾರ್ಮಿಕರಿಗೆ ಕೆಲಸ ನೀಡುವುದು ಹಾಗೂ ಗುಣಮಟ್ಟದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಮಾನವ ದಿನ ಸೃಜನೆ ಮಾಡಬೇಕು. ಸ್ವಚ್ಛ ಭಾರತ ಮಿಷನ್ ಅಡಿಯಲ್ಲಿ ವೈಯಕ್ತಿಕ, ಸಮುದಾಯ ಶೌಚಾಲಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ವಿವಿಧ ವಸತಿ ಯೋಜನೆಯಡಿಯಲ್ಲಿ ನಿಗಡಿಪಡಿಸಿದ ಗುರಿ ಕಾಲಮಿತಿಯೊಳಗೆ ಅನುಷ್ಠಾನಗೊಳಿಸಿ ಪ್ರಗತಿ ಸಾಧಿಸಬೇಕು ಎಂದು ಕರೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಲಕ್ಷ್ಮಣ ಶೃಂಗೇರಿ, ಯೋಜನಾ ನಿರ್ದೇಶಕ ಜಗದೇವಪ್ಪ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು.

ಹವಾಮಾನ ಆಧಾರಿತ ಬೆಳೆವಿಮೆಗೆ ಸೂಚನೆ

ಆಳಂದ: 2024-25 ನೇ ಸಾಲಿನ ಮುಂಗಾರು ಹಂಗಾಮಿಗಾಗಿ ಮರುವಿನ್ಯಾಸಗೊಳಿಸಿದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯನ್ನು ತಾಲೂಕಿನಲ್ಲಿ ಅನುಷ್ಠಾನಗೊಳಿಸಲು ಮಂಜುರಾತಿ ದೊರತಿದೆ, ಜುಲೈ 31 ರ ಒಳಗಾಗಿ ರೈತರು ಸಿ.ಎಸ.ಸಿ ಸೇವಾ ಕೇಂದ್ರಗಳಿಗೆ ಅಥವಾ ಗ್ರಾಮ ಒನ್ ಕೇಂದ್ರ, ಭೇಟಿ ನೀಡಿ ವಿಮೆ ಮಾಡಿಸಬೇಕೆಂದು ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಸುರೇಂದ್ರನಾಥ್ ಹೊನ್ನಾಪ್ಪಗೊಳ ಅವರು ಹೇಳಿದ್ದಾರೆ. ಶುಕ್ರವಾರ ಪಟ್ಟಣದಲ್ಲಿ ಹೇಳಿಕೆ ನೀಡಿರುವ ಅವರು, ಹವಾಮಾನ ಅಂಶಗಳಾದ ತಾಪಮಾನ ಮಳೆಯ ಪ್ರಮಾಣ ಮತ್ತು ಅದರಂತೆ ಇತ್ಯಾದಿ ಮಾಹಿತಿಗಳನ್ನು ಸ್ಥಳೀವಾಗಿ ಲಭ್ಯವಿರುವ ಟೆಲಿಮೆಟ್ರಿಕ್ ಮಳೆ ಮಾಪನ ಕೇಂದ್ರಗಳಲ್ಲಿ ದಾಖಲಿಸುವ ಅಂಶಗಳ ಆಧಾರದ ಮೇಲೆ ವಿಮಾ ನಷ್ಟವನ್ನು ತೀರ್ಮಾನಿಸಲಾಗಿದೆ .



ತಾಲೂಕಿನ ಒಟ್ಟು 47 ಗ್ರಾಮ ಪಂಚಾಯಿತಿಗಳ ಪೈಕಿ 15 ಗ್ರಾಮ ಪಂಚಾಯಿತಿಗಳ ಮಾತ್ರ ದ್ರಾಕ್ಷಿ ಬೆಳೆಗೆ ಒಳಪಟ್ಟಿದ್ದು, ಉಳಿದೆಲ್ಲ ಗ್ರಾಮ ಪಂಚಾಯಿತಿಗಳಲ್ಲಿ ಹಸಿಮೆಣಸಿನಕಾಯಿ, ಪಪ್ಪಾಯಿ ಬೆಳೆ ವಿಮೆ ಒಳಪಟ್ಟಿರುತ್ತದೆ ಎಂದು ಹೇಳಿದರು. ಬೆಳೆ ವಿಮೆ ಕೈಗೊಳ್ಳಬೇಕಾದವರು ಸಾಲ ಪಡೆದ ಮತ್ತು ಪಡೆಯದ ರೈತರು ಎಲ್ಲರೂ ತಮ್ಮ ಹತ್ತಿರದ ಬ್ಯಾಂಕ್ ಗ್ರಾಮ ಒನ್ ಕೇಂದ್ರ, ಅಥವಾ ಸಿ.ಎಸ.ಸಿ ಸೇವಾ ಕೇಂದ್ರಗಳಿಗೆ ತಮ್ಮ ಸಂಬಂಧಿತ ಪಹಣಿ, ಆಧಾರ್ ಕಾರ್ಡ್, ಬ್ಯಾಂಕ್‌ಪಾಸ್ ಬುಕ್, ಹಾಗೂ ಸ್ವಯಂ ಘೋಷಿತ ಬೆಳೆ ಪ್ರಮಾಣ ಪತ್ರದೊಂದಿಗೆ ಭೇಟಿ ನೀಡಿ ಜುಲೇ 31ರ 2024ರ ಒಳಗಾಗಿ ಬೆಳೆವಿಮೆ ನೋಂದಾಯಿಸಿಕೊಳ್ಳಬಹುದಾಗಿದೆ.

ಸಮಾಚಾರ ಸಣ್ಣದಲ್ಲ

ಸಾಂಸ್ಕೃತಿಕ ಕಾರ್ಯಕ್ರಮ 20 ರಂದು ಬಳ್ಳಾರಿಯಲ್ಲಿ

ಬಳ್ಳಾರಿ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಸಾಂಸ್ಕೃತಿಕ ಸಮುಚ್ಚಯ ನಿರ್ವಹಣಾ ಸಮಿತಿ ವತಿಯಿಂದ ಕಲಾ ಪ್ರತಿಭೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಜು. 20 ರಂದು ಸಂಜೆ 6.30 ಗಂಟೆಗೆ ನಗರದ ಡಾ.ರಾಜ್‌ಕುಮಾರ್ ರಸ್ತೆಯ ನಾಡೋಜ ಸುಭದ್ರಮ್ಮ ಮನ್ಸೂರು ಬಯಲು ರಂಗಮಂದಿರ ಸಾಂಸ್ಕೃತಿಕ ಸಮುಚ್ಚಯದಲ್ಲಿ ತಿಂಗಳ ಸೊಬಗು ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ. ಬಳ್ಳಾರಿಯ ಪ್ರಕಾಶ್ ಹೆಮ್ಮಾಡಿ ಅವರಿಂದ ಜಾನಪದ ಜಾದು ಕಾರ್ಯಕ್ರಮ ಮತ್ತು ಸಿರುಗುಪ್ಪ ತಾಲೂಕಿನ ಸಿರಿಗೇರಿಯ ಧಾತ್ರಿ ರಂಗ ಸಂಸ್ಥೆಯಿಂದ ಶ್ರೀ ಕೃಷ್ಣ ಸಂಧಾನ ಹಾಸ್ಯ ನಾಟಕ ಕಾರ್ಯಕ್ರಮ ಇರಲಿವೆ. ಸಾರ್ವಜನಿಕರಿಗೆ ಪ್ರವೇಶ ಮುಕ್ತವಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ವೀಕ್ಷಿಸುವ ಮೂಲಕ ಯಶಸ್ವಿಗೊಳಿಸಬೇಕು ಎಂದು ಕೋರಲಾಗಿದೆ.

ಆಸ್ತಿ ತೆರಿಗೆ ರಿಯಾಯಿತಿ ಇಂದು

ಬಳ್ಳಾರಿ: ಬಳ್ಳಾರಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರಸ್ತಕ ಆರ್ಥಿಕ ವರ್ಷದ ಪ್ರಾರಂಭದ 30 ದಿನಗಳಲ್ಲಿ ಪೂರ್ಣ ಪ್ರಮಾಣದ ಆಸ್ತಿ ತೆರಿಗೆ ಪಾವತಿ ಮಾಡಿದಲ್ಲಿ ಶೇ.5 ರಷ್ಟು ರಿಯಾಯಿತಿ ನೀಡಲು ಕಲ್ಪಿಸಿರುವ ಅವಧಿಯನ್ನು ಜು.13 ರ ವರೆಗೆ ವಿಸ್ತರಿಸಲಾಗಿದೆ. ಪಾಲಿಕೆ ವ್ಯಾಪ್ತಿಯ ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಪಾಲಿಕೆಯ ಆಯುಕ್ತ ಜಿ.ಖಲೀಲ್ ಸಾಬ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ಬಳ್ಳಾರಿ: ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದಿಂದ ಪ್ರಸ್ತಕ ಸಾಲಿನ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆ (20+1) ಅಡಿ ನಿಗಮದಲ್ಲಿ ನೋಂದಣಿಯಾಗಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಸದಸ್ಯರಾಗಿರುವವರಿಗೆ ವಿವಿಧ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಜಿಲ್ಲೆಗೆ ನಿಗದಿಯಾದ 77 ಗುರಿಗಳಲ್ಲಿ ಪರಿಶಿಷ್ಟ ಜಾತಿ 12, ಪರಿಶಿಷ್ಟ ಪಂಗಡ 4, ಅಲ್ಪಸಂಖ್ಯಾತ 12, ವಿಶೇಷಚೇತನರು 3 ಹಾಗೂ ಸಾಮಾನ್ಯ ವರ್ಗದ 46 ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು. ಆಸಕ್ತರು ನಿಗದಿತ ಅರ್ಜಿ ನಮೂನೆಯನ್ನು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ, ಹೊಸಪೇಟೆ, ವಿಜಯನಗರ ಜಿಲ್ಲೆ ಹಾಗೂ ಹತ್ತಿರದ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘದಿಂದ ಪಡೆದುಕೊಂಡು ಅಗತ್ಯ ದಾಖಲೆಗಳೊಂದಿಗೆ ಭರ್ತಿ ಮಾಡಿ ಸಂಬಂಧಿಸಿದ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಿಗೆ ನೀಡಬೇಕು. ಅರ್ಜಿ ಸಲ್ಲಿಸಲು ಜು.20 ಕೊನೆಯ ದಿನವಾಗಿದೆ ಎಂದು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಲಕ ನಾಪತ್ತೆ: ಪತ್ತೆಗೆ ಮನವಿ

ಬಳ್ಳಾರಿ: ಬೆಳಗಲ್ ರಸ್ತೆಯ ಜಿ.ಚೆಂಗಾರೆಡ್ಡಿ ಸ್ಮಾರಕ ಮಾನಸಿಕ ವಿಕಲಚೇತನ ಮಕ್ಕಳ ವಸತಿ ಶಾಲೆಯಲ್ಲಿ ವಾಸವಿದ್ದ 15 ವರ್ಷದ ಆಕಾಶ್ ಎನ್ನುವ ಬಾಲಕ ಜು.4 ರಂದು ಕಾಣೆಯಾಗಿದ್ದು, ಬಾಲಕನ ಪತ್ತೆಗೆ ಸಹಕರಿಸಬೇಕೆಂದು ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆಯ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಮನವಿ ಮಾಡಿದ್ದಾರೆ. ಎತ್ತರ 4 ಅಡಿ, ದುಂಡು ಮುಖ, ತೆಳುವಾದ ಮೈಕಟ್ಟು, ಎಣ್ಣೆಗೆಂಪು ಮೈಬಣ್ಣ, ಕಪ್ಪು ಕೂದಲು ಇದ್ದು, ಬಲಕಿವಿಯಲ್ಲಿ ಕಿವಿಯೋಲೆ ಇರುತ್ತದೆ. ಕಾಣೆಯಾದ ಸಂದರ್ಭದಲ್ಲಿ ಬ್ರೌನ್ ಮತ್ತು ಗ್ರೇ ಕಲರಿನ ಕೆಂಪು ಹೂವು ಡಿಸೈನ್‌ವುಳ್ಳ ತುಂಬು ತೋಳಿನ ಅಂಗಿ, ಗ್ರೀನ್ ಕಲರಿನ ಪ್ಯಾಂಟ್ ಧರಿಸಿದ್ದು, ಕನ್ನಡ ಭಾಷೆ ಮಾತನಾಡುತ್ತಾನೆ. ಚಹರೆ ಗುರುತುಳ್ಳ ಬಾಲಕನ ಬಗ್ಗೆ ಸುಳಿವು ಸಿಕ್ಕಲ್ಲಿ, ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆ ದೂ: 08392-276461, ಮೊ: 9480803049 ಅಥವಾ ಬಳ್ಳಾರಿ ಪೊಲೀಸ್ ಕಂಟ್ರೋಲ್ ರೂಂ ದೂ: 08392-258100 ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

ಡಯೇರಿಯಾ ನಿಯಂತ್ರಣ ಅಭಿಯಾನ

ಬಳ್ಳಾರಿ: ಕಂಪ್ಲಿ ಪುರಸಭೆ ವ್ಯಾಪ್ತಿಯಲ್ಲಿ ಡಯೇರಿಯಾ ಸಾಂಕ್ರಾಮಿಕ ರೋಗ ಹರಡುವಿಕೆ ತಡೆಗಟ್ಟುವ ಅಭಿಯಾನ ಜು.1 ರಿಂದ ಆಗಸ್ಟ್ 31ರ ವರೆಗೆ ಎರಡು ತಿಂಗಳ ಕಾಲ ಪಟ್ಟಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕಂಪ್ಲಿ ಪುರಸಭೆಯ ಮುಖ್ಯಾಧಿಕಾರಿ ತಿಳಿಸಿದ್ದಾರೆ. ಅಶುಚಿತ್ವ, ಜನದಟ್ಟಣೆ, ಪ್ರಾಣಿಗಳೊಂದಿಗೆ ಒಡನಾಟ, ಕಲುಷಿತ ನೀರು, ಕೊಳಕು ಕೈ, ಮತ್ತು ಬ್ಯಾಕ್ಟೀರಿಯಾಗಳಿಂದ ಡಯೇರಿಯಾ ರೋಗವು ಹರಡಲಿದ್ದು, ಕಿಬ್ಬೊಟ್ಟೆಯ ಹೊಟ್ಟೆನೋವು, ಸೆಳೆತ, ವಾಕರಿಕೆ, ಜ್ವರ, ಭೇದಿ ಮುಂತಾದ ಲಕ್ಷಣಗಳು ಕಂಡುಬರುತ್ತದೆ.

{ಡಾ.ಶರಣಪ್ರಕಾಶ್ ಪಾಟೀಲ್} ಸಚಿವ

ಕೇಂದ್ರ ಸರಕಾರ 24 ಲಕ್ಷ ಜನ ವಿದ್ಯಾರ್ಥಿಗಳ ಬದುಕಿನಲ್ಲಿ ಚೆಲ್ಲಾಟವಾಡುತ್ತಿದೆ. ಮೊದಲು ಹಗರಣ ನಡೆದೇ ಇಲ್ಲ ಎಂದಿದ್ದರು. ಆದರೆ ಈಗ ನೀಟ್ ಪರೀಕ್ಷೆಯ ಅಕ್ರಮ ತನಿಖೆಗೆ ಸಿಬಿಐಗೆ ನೀಡಿದ್ದಾರೆ. ಕೇಂದ್ರದ ಮೋದಿ ಸರಕಾರದ ಅತಿದೊಡ್ಡ ಹಗರಣವಾಗಿದೆ. ಇಷ್ಟು ದೊಡ್ಡ ಹಗರಣ ನಡೆದರೂ ಯಾರ ಮೇಲೂ ಕ್ರಮ ಕೈಗೊಂಡಿಲ್ಲ. ಈ ಅಕ್ರಮಕ್ಕೆ ಹೊಣೆ ಯಾರು.?

ಜನಸಂಖ್ಯೆ ನಿಯಂತ್ರಣಕ್ಕೆ ಸಹಭಾಗಿತ್ವ ಅಗತ್ಯ

ಬಳ್ಳಾರಿಯಲ್ಲಿ ವಿಶ್ವ ಜನಸಂಖ್ಯಾ ದಿನಾಚರಣೆಯ ಅಂಗವಾಗಿ ಜಿಲ್ಲಾಮಟ್ಟದ ಜಾಗೃತಿ ಜಾಥಾ

ಬಳ್ಳಾರಿ: ಜನಸಂಖ್ಯಾ ನಿಯಂತ್ರಣಕ್ಕೆ ಆರೋಗ್ಯ ಇಲಾಖೆಯ ಯೋಜನೆಗಳ ಜತೆಗೆ ಜನ ಸಮುದಾಯವು ಸಕ್ರಿಯವಾಗಿ ಭಾಗವಹಿಸಿದ್ದಲ್ಲಿ ಮಾತ್ರ ಜನಸಂಖ್ಯೆಯನ್ನು ನಿಯಂತ್ರಣ ಮಾಡಲು ಸಾಧ್ಯವಿದೆ ಎಂದು ಬಳ್ಳಾರಿ ಮಹಾನಗರ ಪಾಲಿಕೆಯ ಮೇಯರ್ ಮುಲ್ಲಂಗಿ ನಂದೀಶ್ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಾನಗರ ಪಾಲಿಕೆ, ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಠಾನ ವಿಭಾಗ, ಜಿಲ್ಲಾ ಆಸ್ಪತ್ರೆ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಜಿಲ್ಲಾ ಆಸ್ಪತ್ರೆಯ ಡಿಎನ್‌ಬಿ ಸಭಾಂಗಣದಲ್ಲಿ ಏರ್ಪಡಿಸಿದ್ದ ವಿಶ್ವ ಜನಸಂಖ್ಯಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪ್ರಸ್ತುತ ದೇಶದ ಜನಸಂಖ್ಯೆ 144 ಕೋಟಿ ದಾಟಿದ್ದು, ಜಗತ್ತಿನ ಶೇ.17 ಜನಸಂಖ್ಯೆ ಭಾರತದಲ್ಲಿದೆ. 6.82 ಕೋಟಿ ಜನಸಂಖ್ಯೆ ಕರ್ನಾಟಕ ರಾಜ್ಯದಲ್ಲಿದೆ. ಹಾಗಾಗಿ ಜನಸಂಖ್ಯೆ ನಿಯಂತ್ರಣ ಕೈಗೊಳ್ಳುವ ಕಾರ್ಯವನ್ನು ಸಮುದಾಯದ ಸಹಭಾಗಿತ್ವದೊಂದಿಗೆ ಯಶಸ್ವಿಗೊಳಿಸೋಣ ಎಂದು ವಿನಂತಿಸಿದರು.

ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ಸಾಧಕ ವೈದ್ಯರು ಮತ್ತು ಸಿಬ್ಬಂದಿಯವರಿಗೆ ಸನ್ಮಾನಿಸಲಾಯಿತು.

ಡಾ.ಬಾಬು ಜಗಜೀವನರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ಅಧ್ಯಕ್ಷ ಮುಂಡರಗಿ ನಾಗರಾಜ್ ಮಾತನಾಡಿ, ಹೆಚ್ಚುತ್ತಿರುವ ಜನಸಂಖ್ಯೆಯು ದೇಶದ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯಲ್ಲಿ ಅನೇಕ ತೊಂದರೆಗಳನ್ನು ಉಂಟುಮಾಡುತ್ತದೆ. ನಮ್ಮ ಮುಂದೆ ಜನಸಂಖ್ಯಾ ಸ್ಥಿರತೆಯನ್ನು ಕಾಯ್ದುಕೊಳ್ಳುವ ಬಹು ದೊಡ್ಡ ಜವಾಬ್ದಾರಿಯಿದೆ ಎಂದು ಅಭಿಪ್ರಾಯಪಟ್ಟರು.

ತಾತ್ಕಾಲಿಕ ವಿಧಾನದ ಅಡಿಯಲ್ಲಿ ಮಹಿಳೆಯರಿಗೆ ಗರ್ಭ ನಿರೋಧಕ ಚುಚ್ಚುಮದ್ದು, ಅಂತರ ಇಂಜೆಕ್ಷನ್ 2292 ಫಲಾನುಭವಿಗಳಿಗೆ ನೀಡಲಾಗಿದೆ. ಪ್ರತಿ 3 ತಿಂಗಳಿಗೊಮ್ಮೆ ಚುಚ್ಚುಮದ್ದು ಮೂಲಕ ಪಡೆಯಬಹುದಾದ ಚುಚ್ಚುಮದ್ದು ಇದಾಗಿದೆ. ಇಲ್ಲಿಯವರೆಗೆ 4976 ಮಹಿಳೆಯರಿಗೆ ವಂಕಿ ಅಳವಡಿಸಲಾಗಿದೆ. ನುಂಗುವ ಮಾತ್ರೆಗಳನ್ನು 3037 ಮಹಿಳಾ ಫಲಾನುಭವಿಗಳಿಗೆ ವಿತರಿಸಲಾಗಿದೆ. ವಿಶೇಷವಾಗಿ ಹೆರಿಗೆಯಾದ ತಕ್ಷಣ 48 ಗಂಟೆ ಒಳಗಡೆ ಬಾಣಂತಿಗೆ ಅಳವಡಿಸುವ ಪಿಪಿಐಯುಸಿಡಿ (ವಂಕಿ)6451 ಮಹಿಳೆಯರಿಗೆ ಅಳವಡಿಸಲಾಗಿದೆ. ಪುರುಷರಿಗೆ ನಿರೋಧ್ ಲಭ್ಯವಿದ್ದು, 4035 ಫಲಾನುಭವಿಗಳಿಗೆ ನಿರೋಧ್ ವಿತರಿಸಿ ಜಿಲ್ಲೆಯಲ್ಲಿ ಜನಸಂಖ್ಯೆ ನಿಯಂತ್ರಿಸಲು ವ್ಯಾಪಕ ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ಸಾಧಕ ವೈದ್ಯರು ಮತ್ತು ಸಿಬ್ಬಂದಿಯವರಿಗೆ ಸನ್ಮಾನಿಸಲಾಯಿತು. ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಜಾಗೃತಿ ಜಾಥ ನಡೆಯಿತು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ ರಾಷ್ಟ್ರೀಯ ಬಾಲ್ಯಸ್ವಾಸ್ಥ್ಯ ಕಾರ್ಯಕ್ರಮದ ಉಪನಿರ್ದೇಶಕಿ ಡಾ.ವೀಣಾ ಚಾಲನೆ ನೀಡಿದರು.

ಪಾಲಿಕೆ ಉಪಮೇಯರ್ ಡಿ.ಸುಕುಂ, ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಪೂರ್ಣಿಮ ಕಟ್ಟಿಮನಿ, ಆರೋಗ್ಯ ಶಿಕ್ಷಣ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷೆ ಪದ್ಮ ರೋಜ, ಬಸರೆಡ್ಡಿ, ಮುಖಂಡರಾದ ವಿವೇಕ್, ಫಯಾಜ್, ಡಾ.ಅಬ್ದುಲ್ಲಾ.ಆರ್., ಡಾ.ಮರಿಯಂಬಿ ವಿ.ಕೆ., ಡಾ.ಇಂದ್ರಾಣಿ, ಡಾ.ವೀರೇಂದ್ರ ಕುಮಾರ, ಡಾ.ಹನುಮಂತಪ್ಪ, ಈಶ್ವರ ಹೆಚ್.ದಾಸಪ್ಪನವರ ಇತರರಿದ್ದರು.

ಜನಸಂಖ್ಯೆ ಸ್ಥಿರತೆ ಕಾಪಾಡಿ

ಮದುವೆ ನಂತರ ಕನಿಷ್ಟ ಮೂರು ವರ್ಷಗಳವರೆಗೆ ಮಕ್ಕಳಾಗುವುದನ್ನು ತಡೆಗಟ್ಟುವುದು, ಎರಡು ಮಕ್ಕಳಿಗೆ ಸಂತಾನ ನಿಯಂತ್ರಿಸುವುದು, ಒಂದು ಮಗುವಿನ ನಂತರ ಕನಿಷ್ಟ ಮೂರು ವರ್ಷ ಅಂತರವಿಡುವುದು. ಕುಟುಂಬ ಕಲ್ಯಾಣ ಪದ್ಧತಿ ಅಳವಡಿಸುವಂತೆ ಹೆಚ್ಚಿನ ಗಮನ ಹರಿಸಲಾಗುತ್ತಿದೆ. ಮೇಲಿನ ಎಲ್ಲಾ ರೀತಿಯಿಂದ ಜನಸಂಖ್ಯೆ ನಿಯಂತ್ರಿಸಿ ಜನಸಂಖ್ಯೆ ಸ್ಥಿರತೆಯನ್ನು ಕಾಪಾಡಿ ದೇಶದ ಸಮಗ್ರ ಅಭಿವೃದ್ದಿಯಲ್ಲಿ ಪಾಲುದಾರ ರಾಗೋಣ ಎಂದು ಜಗಜೀವನರಾಮ್ ತಿಳಿಸಿದರು.

> ಜಿಲ್ಲೆಯಲ್ಲಿ ಲ್ಯಾಪ್ರೊಸ್ಕೋಪಿಕ್ ಮತ್ತು ಟ್ಯುಬೆಕ್ಟಮಿ ಶಸ್ತ್ರಚಿಕಿತ್ಸೆ ಮೂಲಕ ಇಲ್ಲಿಯವರೆಗೆ 13825 ಮಹಿಳಾ ಫಲಾನುಭವಿಗಳಿಗೆ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ಗಾಯವಿಲ್ಲದ, ಹೊಲಿಗೆ ಇಲ್ಲದ ನೋ ಸ್ಕಾಲ್‌ಪೇಲ್ ವೆಸಕ್ಟಮಿ ಶಸ್ತ್ರಚಿಕಿತ್ಸೆ ಈವರೆಗೆ 3 ಜನ ಫಲಾನುಭವಿಗಳಿಗೆ ಮಾಡಲಾಗಿದೆ.
>
> - ಡಾ.ವೈ.ರಮೇಶ್‌ಬಾಬು, ಕುಟುಂಬದ ಕಲ್ಯಾಣಾಧಿಕಾರಿ

ಯೋಗ ಶಿಕ್ಷಕರ ತರಬೇತಿ ಕಾರ್ಯಾಗಾರ

ನಗರದ ಕೊಟ್ಟೂರುಸ್ವಾಮಿ ಮಠದಲ್ಲಿ ನಡೆದ ಪೂರ್ವಸಿದ್ಧತಾ ಸಭೆ ನಡೆಯಿತು.

ಹೊಸಪೇಟೆ: ಯೋಗವನ್ನು ವಿಸ್ತರಿಸುವ, ಆರೋಗ್ಯ ಪೂರ್ಣ ಸಮಾಜ ನಿರ್ಮಾಣ ಮಾಡುವ ಕಾಯಕದಲ್ಲಿ ತೊಡಗಿರುವ ಸಾಧಕರಿಗೆ ಉನ್ನತೀಕರಣದ ಪ್ರಶಿಕ್ಷಣ ನೀಡುವ ಯೋಗ ತರಬೇತುದಾರರ ತರಬೇತಿ ಕಾರ್ಯಾಗಾರ ಜು.17ರಿಂದ ನಡೆಯಲಿದೆ ಎಂದು ಪತಂಜಲಿ ಯೋಗ ಸಮಿತಿ ರಾಜ್ಯ ಸಮಿತಿ ಸದಸ್ಯ ಹಾಗೂ ಜಿಲ್ಲಾ ಉಸ್ತುವಾರಿ ಡಾ.ಎಸ್.ಬಿ.ಹಂದ್ರಾಳ್ ಹೇಳಿದರು.

ನಗರದ ಕೊಟ್ಟೂರುಸ್ವಾಮಿ ಮಠದಲ್ಲಿ ನಡೆದ ಪೂರ್ವಸಿದ್ಧತಾ ಸಭೆಯಲ್ಲಿ ಮಾತನಾಡಿ, ಯೋಗ ಶಿಕ್ಷಣದಲ್ಲಿ ಅನೇಕ ಬದಲಾವಣೆಗಳು ಹೊಸ ಹೊಸ ಆವಿಷ್ಕಾರಗಳು ಆಗುತ್ತಿದ್ದು ಅವುಗಳನ್ನು ತಿಳಿಯುವ ಹಾಗೂ ಮೈಗೂಡಿಸಿಕೊಂಡು ಮುನ್ನಡೆಯುವ, ತರಬೇತಿ ಪಡೆದು ಸಮರ್ಥವಾಗಿ ಮಾರ್ಗದರ್ಶನ ಮಾಡುವ ಕೌಶಲಗಳನ್ನು ಕಲಿಯಲು ತರಬೇತಿ ಸಹಕಾರಿಯಾಗಲಿದೆ ಎಂದರು.

ಹರಿದ್ವಾರ, ಬೆಂಗಳೂರು, ಹುಬ್ಬಳ್ಳಿ ಸೇರಿದಂತೆ ವಿವಿಧ ಭಾಗಗಳಿಂದ ತಜ್ಞ ತರಬೇತುದಾರರು 25ದಿನಗಳಲ್ಲಿ ಮಾರ್ಗದರ್ಶನ ಮಾಡಲಿದ್ದಾರೆ. ದಕ್ಷಿಣ ಭಾರತದ ವರಿಷ್ಠರು ಹಾಗೂ ಪತಂಜಲಿ ರಾಜ್ಯ ಪ್ರಭಾರಿಯಾದ ಭವರಲಾಲ್ ಆರ್ಯರವರು ನೇತೃತ್ವದಲ್ಲಿ ನಡೆಯಲಿದೆ. ಜಿಲ್ಲೆಯ ಪತಂಜಲಿಯ ಯೋಗ ಸಾಧಕರಿಗೆ ಮತ್ತು ಪ್ರಭಾರಿಗಳಿಗೆ ಹಾಗೂ ಮಹಿಳೆಯರಿಗೆ ಮತ್ತು ಎಲ್ಲ ನಿರಂತರ ಕೇಂದ್ರಗಳ ಸಂಚಾಲಕರನ್ನು ಒಳಗೊಂಡಂತೆ ವಾರ್ಡ್‌ವಾರು ಸಮಿತಿಗಳ ರಚನೆ, ವಿವಿಧ ಸಮಿತಿಗಳನ್ನು ರಚಿಸಿ ಕಾರ್ಯಕ್ರಮ ಯಶಸ್ವಿಯಾಗಿ ನಿರ್ವಹಿಸಲು ತೀರ್ಮಾನಿಸಲಾಯಿತು.

ರಾಜ್ಯ ಯುವ ಪ್ರಭಾರಿ ಕಿರಣ್ ಕುಮಾರ, ಸಹಶಿಕ್ಷಕರ ತರಬೇತಿ ಉಸ್ತುವಾರಿ ರಾಜೇಶ್ ಕರ್ವಾ, ಡಾ.ಎಫ್.ಟಿ.ಹಳ್ಳಿಕೇರಿ, ಅನಂತ ಜೋಶಿ, ಪ್ರಮೀಳಮ್ಮ, ವೀರೇಶ ಸೇರಿದಂತೆ ಇತರರಿದ್ದರು.

ಏಮ್ಸ್ ಸ್ಥಾಪನೆಗೆ ಒತ್ತಾಯಿಸಿ 16ರಂದು ಹೋರಾಟ

ಹೊಸಪೇಟೆ: ರಾಜಕೀಯ ಇಚ್ಛಾಶಕ್ತಿ ಕೊರತೆಯಿಂದ ರಾಜ್ಯಕ್ಕೆ ಮಂಜೂರಾದ ರಾಯಚೂರಿನಲ್ಲಿ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್(ಏಮ್ಸ್) ಆಸ್ಪತ್ರೆ ರಾಯಚೂರಿನಲ್ಲಿಯೇ ಆಗಬೇಕು ಎಂದು ಒತ್ತಾಯಿಸಿ ಜು.16ರಂದು ಕಲ್ಯಾಣ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಏಮ್ಸ್ ಹೋರಾಟ ಸಮಿತಿ ಸಂಚಾಲಕ ಅಶೋಕ ಜೈನ್ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಲ್ಯಾಣ ಕರ್ನಾಟಕದ ಬಹುತೇಕ 7 ಜಿಲ್ಲೆಯಲ್ಲಿ ಮೂಲ ಸೌಕರ್ಯ, ವೈದ್ಯಕೀಯ, ಶಿಕ್ಷಣ ರಾಜಕೀಯ ಇಚ್ಛಾಶಕ್ತಿ ಕೊರತೆಯಲ್ಲಿ ಸೊರಗುತ್ತಿದ್ದು ಬಿಸಿಲು, ಉಷ್ಣ ವಿದ್ಯುತ್ ಸ್ಥಾವರಗಳ ಕಾರಣವೂ ರಾಯಚೂರು ರೋಗದಲ್ಲಿ ನರಳುವಂತೆ ಮಾಡಿದೆ ಎಂದರು. ಮೂರು ವರ್ಷಗಳಿಂದ ಹೋರಾಟ ನಡೆಯುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಕೇಂದ್ರಕ್ಕೆ ಎರಡು ಬಾರಿ ಪತ್ರ ಬರೆದಿದ್ದಾರೆ. ದೆಹಲಿಗೆ ಭೇಟಿ ನೀಡಿದ್ದ ನಮ್ಮ ನಿಯೋಗ ಕೇಂದ್ರ ಆರೋಗ್ಯ ಸಚಿವ ಮನ್ಸುಕ್ ಮಾಂಡವಿಯಾ ಮತ್ತು ನಿರ್ಮಲಾ ಸೀತಾರಾಮನ್ ಅವರಿಗೂ ಮನವಿ ಸಲ್ಲಿಸಿದೆ ಎಂದರು.

ಕೇಂದ್ರದ ಯೋಜನೆಗಳನ್ನು ಸಚಿವ ಪ್ರಲ್ಹಾದ್ ಜೋಶಿ ಅವರು ಹುಬ್ಬಳ್ಳಿಗೆ ಕೊಂಡೊಯ್ಯುವ ಹುನ್ನಾರ ಮಾಡುತ್ತಿದ್ದಾರೆ. ನಮ್ಮ ಜಿಲ್ಲೆಗಳ ಬೇಡಿಕೆಗಳಿಗೆ ಒಕ್ಕೊರಲಾಗಿ ಹೋರಾಡಬೇಕು. ಜು. 16ರಂದು ಧರಣಿ ನಡೆಸಿ, ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಗುವುದು. ಜಿಲ್ಲೆಯ ನಾಗರಿಕರು, ಸಂಘಟನೆಗಳು ಬೆಂಬಲ ನೀಡಬೇಕು. ರಾಯಚೂರು ಜಿಲ್ಲೆ ಅಥವಾ ಕಲ್ಯಾಣ ಕರ್ನಾಟಕ ಭಾಗಕ್ಕೆ ಏಮ್ಸ್ ನೀಡದಿದ್ದರೆ ಪ್ರತ್ಯೇಕ ರಾಜ್ಯ ಕೇಳಬೇಕಾದೀತು ಎಂದೂ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಬೋಡಾರಾಮಪ್ಪ, ಪಿ.ವೆಂಕಟೇಶ್, ಗುಜ್ಜಲ ಗಣೇಶ್, ಪ್ರೊ.ವೀರೇಗೌಡ, ಮಧುರಚೆನ್ನಶಾಸ್ತ್ರಿ, ಘಂಟೆ ಸೋಮಶೇಖರ, ಭರತ್ ಕುಮಾರ್, ಬಾಲೆಸಾಬ್ ಇತರರಿದ್ದರು.



ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಸಮಿತಿ ಸಂಚಾಲಕ ಅಶೋಕ ಜೈನ್ ಮಾತನಾಡಿದರು.

ದೇಶಕ್ಕೆ ಏಮ್ಸ್ ಅವಶ್ಯಕತೆ ಇದೆ

ಅಪೌಷ್ಟಿಕತೆಯಲ್ಲಿಯೂ ದೇಶದ ಗಮನ ಸೆಳೆದಿದ್ದು ಈ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಏಮ್ಸ್ ಅವಶ್ಯಕತೆ ಇದೆ, ಮುಖ್ಯಮಂತ್ರಿ, ಆರೋಗ್ಯ ಸಚಿವರು ಸೇರಿದಂತೆ ಎಲ್ಲಾ ಮನವಿಗೆ ಪುರಸ್ಕಾರ ನೀಡಿ ರಾಯಚೂರಿನಲ್ಲಿ ಸುದೀರ್ಘ ಹೋರಾಟ ಪರಿಗಣಿಸಿ ಕೇಂದ್ರ ಸರಕಾರ ಏಮ್ಸ್ ಸ್ಥಾಪನೆಗೆ ಮುಂದಾಗಬೇಕು. ಮುಂದಿನ ದಿನಗಳಲ್ಲಿ ಮಂಡನೆಯಾಗಲಿರುವ ಕೇಂದ್ರ ಬಜೆಟ್‌ನಲ್ಲಿ ಅನುದಾನ ನೀಡಿ ಏಮ್ಸ್ ಆರಂಭಕ್ಕೆ ಮುಂದಾಗದಿದ್ದರೆ, ಉಗ್ರ ಹೋರಾಟ ನಡೆಸಲಾಗುವುದು ಎಂದು ಅಶೋಕ ಜೈನ್ ಎಚ್ಚರಿಸಿದರು.

ಇಂಧನ ಸಚಿವ ಕೆ.ಜೆ. ಜಾರ್ಜ್ ಅವರು ಗುರುವಾರ ಬಳ್ಳಾರಿ ಉಷ್ಣ ವಿದ್ಯುತ್ ಸ್ಥಾವರಕ್ಕೆ ಭೇಟಿ ನೀಡಿ, ಘಟಕದ ಅಭಿವೃದ್ಧಿ ಕುರಿತು ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿದರು. ಈ ವೇಳೆ ಇಂಧನ ಇಲಾಖೆ ಸರಕಾರದ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ಕೆಪಿಸಿಎಲ್ ತಾಂತ್ರಿಕ ನಿರ್ದೇಶಕ ದಿವಾಕರ್ ಸಿ.ಎಂ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮಾದಕ ದ್ರವ್ಯಗಳಿಗೆ ಬಲಿಯಾಗದಿರಿ: ಕುಸುಮ

ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಆಯೋಜಿಸಿದ್ದ ಮಾದಕ ವಸ್ತುಗಳ ವಿರೋಧಿ ದಿನಚರಣೆ ಕಾರ್ಯಕ್ರಮ ಆಚರಿಸಲಾಯಿತು.

ಹರಪನಹಳ್ಳಿ: ಗುಟ್ಕಾ ತಂಬಾಕು ದುಶ್ಚಟಕ್ಕೆ ಬಲೆಯಾಗಿ ಅನೇಕ ಕುಟುಂಬಗಳು ನಾಶವಾಗಿವೆ. ಶಾಲಾ ಕಾಲೇಜು ವಿದ್ಯಾರ್ಥಿಗಳ್ಳಿಗೆ ಗುಟುಕ ತಂಬಾಕು ಸೇವನೆಯ ಬಗ್ಗೆ ಜಾಗ್ರತಿ ಮೂಡಿಸಬೇಕು ಎಂದು ಬಿಜೆಪಿ ಜಿಲ್ಲಾ ಕಾರ್ಯದರ್ಶಿಗಳಾದ ಕುಸುಮ ಜಗದೀಶ್ ಹೇಳಿದರು.

ಪಟ್ಟಣ್ಣದ ತಾಲೂಕು ಕ್ರೀಡಾಂಗಣದಲ್ಲಿ ಗೃಹ ರಕ್ಷಕ ದಳದಿಂದ ಹಾಗೂ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಆಯೋಜಿಸಿದ್ದ ಮಾದಕ ವಸ್ತುಗಳ ವಿರೋಧಿ ದಿನಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಮಾದಕ ವಸ್ತುಗಳಿಗೆ ಬಲಿ ಆದರೆ ಮಕ್ಕಳ ಶಿಕ್ಷಣ ಕುಂಠಿತವಾಗುತ್ತದೆ. ದುಶ್ಚಟಗಳಿಂದ ದೂರವಿರಿ ಎಂದರು .

ಯುವಜನರು, ಸೃಜನಶೀಲ, ವಯಸ್ಕರ ಸಮಾಜದ ಒಂದು ಅವಿಭಾಜ್ಯ ಅಂಗ ಸಮಾಜವನ್ನು ತಿದ್ದುವಂತ ಪ್ರತಿಯೊಂದು ಜವಾಬ್ದಾರಿ ಯುವಕರಿಗೆ ಇರುತ್ತದೆ. ಕುಟುಂಬದ ಆರೋಗ್ಯಕರ ಜತೆಗೆ ಸಮಾಜದ ಬೆಳವಣಿಗೆಗೆ ಹೆಚ್ಚಿನ ಆದ್ಯತೆ ನೀಡಿ. ಇತ್ತೀಚಿನ ದಿನಮಾನಗಳಲ್ಲಿ ಗ್ರಾಮೀಣ ಭಾಗದಲ್ಲಿ ತಂಬಾಕು ಗುಟ್ಕಗಳ ಅಂತ ಮಾದಕ ವಸ್ತುಗಳಿಗೆ ಹೆಚ್ಚು ಬಲಿ ಆಗುತ್ತಾರೆ. ಆರೋಗ್ಯಕರವಾದ ಮನೋರಂಜನೆ ಕ್ರೀಡೆ ಸಾಂಸ್ಕೃತಿಕ ಚಟುವಟಿಕೆಗಳು ಪುಸ್ತಕವನ್ನು ಪತ್ರಿಕೆಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಿ ಸಕಾರಾತ್ಮಕ ಯೋಜನೆಗಳ ಕಡೆಗೆ ಮನಸ್ಸು ಕೊಡಬೇಕು. ಆಧುನಿಕ ಜೀವನದಲ್ಲಿ ಇದರ ಹಾವಳಿ ಹೆಚ್ಚಾಗಿದ್ದರಿಂದ ದುಶ್ಚಟಗಳಿಗೆ ಬೇಗ ಮಾರುಹೋಗುತ್ತಾರೆ ಆರೋಗ್ಯಕರವಾದ ಮನಸ್ಸು ದೇಹವನ್ನು ಶುದ್ಧತೆ ಇಟ್ಟುಕೊಳ್ಳಿ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಗೃಹ ರಕ್ಷಕ ದಳದ ಹಿರಿಯ ಯೋಗ ಅಧಿಕಾರಿ ಎಂ ಮಾಲತೇಶ್ ಎಸ್ ಎಂ ಮಲ್ಲಿಕಾರ್ಜುನ್ ಸಿ.ಸುಭಾಸ್ ಪರಮೇಶ್. ಎಚ್. ಹಾಲಸ್ವಾಮಿ ಎಚ್ ರಾಜಪ್ಪ ಕೊಳಚಿ ನಿಂಗರಾಜ. ಬಿ ರಾಮಚಂದ್ರ ಕೋಟೆಪ್ಪ ಕೆ ಬಸವರಾಜ್ ರಫೀಕ್ ದುರ್ಗಾ ಜಿ ರಾವ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಆರೋಗ್ಯ ಜಾಗೃತಿ ವಾಹನಕ್ಕೆ ನಂದೀಶ್ ಚಾಲನೆ

ರೋಗಗಳನ್ನು ಸಕಾಲದಲ್ಲಿ ಗುರುತಿಸಿ ಚಿಕಿತ್ಸೆ ನೀಡುವ ಸಂಚಾರಿ ಜಾಗೃತಿ ವಾಹನಕ್ಕೆ ಮಹಾನಗರ ಪಾಲಿಕೆ ಮೇಯರ್ ಮುಲ್ಲಂಗಿ ನಂದೀಶ್ ಚಾಲನೆ ನೀಡಿದರು.

ಬಳ್ಳಾರಿ: ಜಿಲ್ಲೆಯಲ್ಲಿ ಹೆಚ್‌ಐವಿ ಸೋಂಕು ಸೇರಿದಂತೆ ಇತರೆ ರೋಗಗಳನ್ನು ಸಕಾಲದಲ್ಲಿ ಗುರುತಿಸಿ ಚಿಕಿತ್ಸೆ ನೀಡುವ ಸಂಚಾರಿ ಜಾಗೃತಿ ವಾಹನಕ್ಕೆ ಮಹಾನಗರ ಪಾಲಿಕೆ ಮೇಯರ್ ಮುಲ್ಲಂಗಿ ನಂದೀಶ್ ಚಾಲನೆ ನೀಡಿದರು.

ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಆವರಣದಲ್ಲಿ ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ ಮೂಲಕ ಒದಗಿಸಲಾದ ಸುಸಜ್ಜಿತ ಸಂಚಾರಿ ಪ್ರಯೋಗಾಲಯ, ಆಪ್ತಸಮಾಲೋಚನೆ ಹಾಗೂ ಜನಜಾಗೃತಿ ನೀಡಲು ಎಲ್‌ಇಡಿ ಟಿವಿ ಹೊಂದಿದ ವಾಹನಕ್ಕೆ ಚಾಲನೆ ನೀಡಿ ಮಾತನಾಡಿದರು.

ಕಲ್ಯಾಣ ಕರ್ನಾಟಕದ ಜಿಲ್ಲೆಗಳಿಗೆ ರಾಜ್ಯ ಸರಕಾರವು ಹೆಚ್ಚಿನ ಮುತುವರ್ಜಿವಹಿಸುತ್ತಿದ್ದು, ಜಿಲ್ಲೆಗೆ ಹಸ್ತಾಂತರಿಸಲಾದ ಸುಸಜ್ಜಿತ ವಾಹನವು ಗ್ರಾಮೀಣ ಪ್ರದೇಶ ಒಳಗೊಂಡಂತೆ ನಗರದ ಕೊಳಚೆ ಪ್ರದೇಶಗಳ ಜನತೆಗೆ ಹೆಚ್ಚಿನ ರೀತಿಯಲ್ಲಿ ಸದುಪಯೋಗವಾಗುವಂತೆ ನಿಗಾವಹಿಸಬೇಕು ಎಂದು ಹೇಳಿದರು. ಸಾರ್ವಜನಿಕರಿಗೆ ವಾಹನದಲ್ಲಿ ಕುಳಿತುಕೊಳ್ಳುವ ಆಸನದ ವ್ಯವಸ್ಥೆಯಿದೆ. ಹೆಚ್‌ಐವಿ ಸೇರಿದಂತೆ ಇತರೆ ರೋಗಗಳಿಗೆ ಮತ್ತು ವೈಯಕ್ತವಾಗಿ ಕಂಡು ಬರುವ ಕಾಯಿಲೆಗಳಿಗೆ ಆಪ್ತ ಸಮಲೋಚನೆ ಮೂಲಕ ಧೈರ್ಯ ತುಂಬುವ ಕಾರ್ಯವನ್ನು ಆಪ್ತ ಸಮಾಲೋಚಕರು ಮಾಡುವರು.

ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಹಾಗೂ ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿಯೂ ಆದ ಡಾ.ಇಂದ್ರಾಣಿ ಅವರು ಜಿಲ್ಲೆಯಲ್ಲಿ ಹೆಚ್‌ಐವಿ ನಿಯಂತ್ರಣ ಚಟುವಟಿಕೆಗಳಿಗೆ ವಾಹನ ಬಳಸುವ ಕುರಿತು ಮಾಹಿತಿ ನೀಡಿದರು.

ಈ ವೇಳೆ ಡಾ.ಬಾಬು ಜಗಜೀವನರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ಅಧ್ಯಕ್ಷ ಮುಂಡರಗಿ ನಾಗರಾಜ, ಪಾಲಿಕೆಯ ಉಪಮೇಯರ್ ಡಿ.ಕುಸುಂ, ಆರೋಗ್ಯ ಶಿಕ್ಷಣ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷೆ ಪದ್ಮ ರೋಜ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಬಸರೆಡ್ಡಿ, ಸ್ಥಳೀಯ ಮುಖಂಡರಾದ ವಿವೇಕ್, ಫಯಾಜ್, ಜಿಲ್ಲಾ ರೋಗವಾಹಕ ಆಶ್ರೀತ ರೋಗಗಳ ನಿಯಂತ್ರಣಾಧಿಕಾರಿ ಅಬ್ದುಲ್ಲಾ, ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಪೂರ್ಣಿಮ ಕಟ್ಟಿಮನಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮರಿಯಂಬಿ ವಿ.ಕೆ,. ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ವಿರೇಂದ್ರ ಕುಮಾರ, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಹನುಮಂತಪ್ಪ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಡ್ಯಾಪ್ಕೊ ಮೇಲ್ವಿಚಾರಕ ಗಿರೀಶ್ ಇತರರಿದ್ದರು.

> ಪ್ರಸ್ತುತ ಜಿಲ್ಲೆಗೆ ಒದಗಿಸಲಾದ ಸಂಚಾರಿ ವಾಹನದಲ್ಲಿ ಸುಸಜ್ಜಿತ ಪ್ರಯೋಗಾಲಯ ಮತ್ತು ಆಪ್ತ ಸಮಾಲೋಚನೆಯ ಪ್ರತ್ಯೇಕ ವಿಭಾಗವಿದ್ದು, ಪ್ರಯೋಗಾಲಯ ತಂತ್ರಜ್ಞರಿಗೆ ಅಗತ್ಯ ವೈದ್ಯಕೀಯ ಪರಿಕರಗಳನ್ನು ವ್ಯವಸ್ಥಿತವಾಗಿ ಕಾಯ್ದಿಟ್ಟುಕೊಳ್ಳಲು ಸೌಲಭ್ಯ ಕಲ್ಪಿಸಲಾಗಿದೆ.
>
> - ಡಾ.ಯಲ್ಲಾ ರಮೇಶ್ ಬಾಬು, ಕುಟುಂಬ ಕಲ್ಯಾಣ ಅಧಿಕಾರಿ

ಹೊಸಪೇಟೆಯಲ್ಲಿ ಕರಡಿ ಸಾರ್ವಜನಿಕರಲ್ಲಿ ಆತಂಕ

ಹೊಸಪೇಟೆ: ನಗರದ ಹೃದಯ ಭಾಗದಲ್ಲಿರುವ ಶ್ರೀರಾಮುಲು ಉದ್ಯಾನದಲ್ಲಿ ಶುಕ್ರವಾರ ಬೆಳಗ್ಗೆಯೇ ಎರಡು ಕರಡಿಗಳು ಓಡಾಡಿಕೊಂಡಿದ್ದು, ಜನರು ಆತಂಕಗೊಂಡಿದ್ದಾರೆ. ಕರಡಿಗಳನ್ನು ಸೆರೆಹಿಡಿಯಲು ಅರಣ್ಯ ಇಲಾಖೆಯಿಂದ ಕಾರ್ಯಾಚರಣೆ ಆರಂಭವಾಗಿದೆ. ರಾಣಿಪೇಟೆಯ ಮನೆಯೊಂದರ ಅಂಗಳದಲ್ಲಿ ಒಂದು ತಾಯಿ ಮತ್ತು ಮರಿ ಕರಡಿಗಳು ಆಡುತ್ತಿರುವುದನ್ನು ಮಹಿಳೆಯೊಬ್ಬರು ನಸುಕಿನ 4.30ರ ವೇಳೆಗೆ ಕಂಡಿದ್ದರು. ಈ ಪೈಕಿ ಒಂದು ಕರಡಿ ಸಮೀಪದ ಶ್ರೀರಾಮುಲು ಉದ್ಯಾನದಲ್ಲಿ ತಿರುಗಾಡಿದೆ. ಕೆಲವರು ಅದರ ವಿಡಿಯೊ ಚಿತ್ರೀಕರಣ ಸಹ ಮಾಡಿದ್ದಾರೆ. ಜನ ಗುಂಪುಗೂಡುತ್ತಿದ್ದಂತೆಯೇ ಆತಂಕಗೊಂಡ ಕರಡಿ ಉದ್ಯಾನ ಹಿಂಭಾಗದ, ತೋಟಗಾರಿಕೆ ಇಲಾಖೆಗೆ ಒಳಪಟ್ಟ ಸ್ಥಳದಲ್ಲಿನ ಪೊದೆಯಲ್ಲಿ ಅಡಗಿ ಕುಳಿತಿದೆ. ಇನ್ನೊಂದು ಮರಿ ಸಹ ಅಲ್ಲೇ ಇದೆಯೋ, ಇಲ್ಲವೋ ಎಂಬುದು ಸ್ಪಷ್ಟವಾಗಿಲ್ಲ. ಅರಣ್ಯ ಇಲಾಖೆ ಸಿಬ್ಬಂದಿ ಬೆಳಿಗ್ಗೆ 5.30ರ ಸುಮಾರಿಗೆ ಸ್ಥಳಕ್ಕೆ ಧಾವಿಸಿದ್ದರು. ಆದರೆ ಕರಡಿ ಸೆರೆಹಿಡಿಯುವ ಪರಿಕರಗಳು ಇರಲಿಲ್ಲ. ಕಮಲಾಪುರದಿಂದ ಅವುಗಳನ್ನು ತರಿಸಿಕೊಳ್ಳುವ ಹೊತ್ತಿಗೆ ಬೆಳಗ್ಗೆ 7.30 ಕಳೆದಿತ್ತು. ಬಲೆ, ಬೋನು, ಅರಿವಳಿಕೆ ಇಂಜೆಕ್ಷನ್ ನೀಡುವ ಗನ್ ಸಹಿತ ಬಂದಿರುವ ಸಿಬ್ಬಂದಿ ಇದೀಗ ಕರಡಿ ಸೆರೆ ಹಿಡಿಯುವ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಕಳೆದ ಎರಡು ವರ್ಷದ ಹಿಂದೆ ರಾಣಿಪೇಟೆ ಪ್ರದೇಶಕ್ಕೆ ಕರಡಿಯೊಂದು ಬಂದಿತ್ತು. ಮನೆಯ ತಾರಸಿ ಮೇಲೆ ಬಂದಿದ್ದ ಅದನ್ನು ಅರಿವಳಿಕೆ ಇಂಜೆಕ್ಷನ್ ನೀಡಿ ಬಳಿಕ ಸೆರೆ ಹಿಡಿಯಲಾಗಿತ್ತು.

ಹಿಂದುಳಿದ ಕ್ಷೇತ್ರ ಅಭಿವೃದ್ಧಿಗೆ ಹಿನ್ನಡೆ: ಕೃಷ್ಣನಾಯ್ಕ

ಹೂವಿನಹಡಗಲಿ: ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳ ಅಭಿವೃದ್ಧಿಗಾಗಿ ನೀಡುವ ವಿಶೇಷ ಅನುದಾನದ ಬಹುಪಾಲು ಹಣವನ್ನು ವಿವೇಚನಾ ನಿಧಿಗೆ ಕಾಯ್ದಿರಿಸುವುದರಿಂದ ಹಿಂದುಳಿದ ಕ್ಷೇತ್ರಗಳ ಅಭಿವೃದ್ಧಿಗೆ ಹಿನ್ನಡೆಯಾಗಲಿದೆ ಎಂದು ಶಾಸಕ ಕೃಷ್ಣನಾಯ್ಕ ಅಸಮಾಧಾನ ವ್ಯಕ್ತಪಡಿಸಿದ್ದರು. ಪಟ್ಟಣದಲ್ಲಿ ರಾಜ್ಯ ಸರಕಾರಿ ನೌಕರರ ಭವನದ ಮಹಡಿ ಕಟ್ಟಡಕ್ಕೆ ಶಿಲಾನ್ಯಾಸ ನೆರವೇರಿಸಿ ಅವರು ಮಾತನಾಡಿದರು. ಪ್ರಸಕ್ತ ವರ್ಷ ಕೆಕೆಆರ್‌ಡಿಬಿಗೆ 5,000 ಸಾವಿರ ಕೋಟಿ ವಿಶೇಷ ಅನುದಾನ ನೀಡುವುದಾಗಿ ಸರಕಾರ ಭರವಸೆ ನೀಡಿದೆ. ಇದರಲ್ಲಿ 2,000 ಕೋಟಿಯನ್ನು ಮುಖ್ಯಮಂತ್ರಿ, ಜಿಲ್ಲಾ ಉಸ್ತುವಾರಿ ಸಚಿವರ ವಿವೇಚನಾ ಕೋಟಾ ಕಾಯ್ದಿರಿಸಿ ಕೊಳ್ಳುವುದರಿಂದ ಅಭಿವೃದ್ಧಿಗೆ ಹಿನ್ನಡೆಯಾಗುತ್ತದೆ. ಅನುದಾನ ಎಲ್ಲ ಕ್ಷೇತ್ರಗಳಿಗೆ ಸಮಾನವಾಗಿ ಹಂಚಿಕೆಯಾಗಬೇಕು' ಎಂದು ಒತ್ತಾಯಿಸಿದರು. ತೆರಿಗೆ ಹಣವನ್ನು ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಖರ್ಚು ಮಾಡುತ್ತಿರುವುದರಿಂದ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ನೀಡುತ್ತಿಲ್ಲ. ನೌಕರರ ಭವನದ ಮಹಡಿ ಕಟ್ಟಡಕ್ಕೆ ಅನುದಾನ ನೀಡಲು ಪ್ರಯತ್ನಿಸುತ್ತಿದ್ದು, ಸಾಧ್ಯವಾಗದಿದ್ದರೆ ವೈಯಕ್ತಿಕವಾಗಿ ನೆರವು ನೀಡುತ್ತೇನೆ. ಸುಸಜ್ಜಿತ ಗುರುಭವನಕ್ಕೆ ಶೀಘ್ರವೇ ಚಾಲನೆ ನೀಡಲಾಗುತ್ತದೆ ಎಂದು ಹೇಳಿದರು. ಬಿಇಒ ಮಹೇಶ ಪೂಜಾರ್, ಸಿಡಿಪಿಒ ರಾಮನಗೌಡ, ಶಿಕ್ಷಕರ ಸಂಘದ ಅಧ್ಯಕ್ಷ ಯು.ಆನಂದ, ಶಿವಲಿಂಗಪ್ಪ, ಪತ್ರಕರ್ತರ ಸಂಘದ ಅಧ್ಯಕ್ಷ ಚಂದ್ರು ಕೊಂಚಿಗೇರಿ, ಉಲ್ಲಾಸ ರೆಡ್ಡಿ, ಬಸೆಟ್ಟಿ ಪ್ರಕಾಶ, ಶಿವಲಿಂಗಪ್ಪ ಉಪಸ್ಥಿತರಿದ್ದರು.

ಕರ್ತವ್ಯಲೋಪ: ಕ್ರಮಕ್ಕೆ ಶಿಫಾರಸ್ಸು

ಹೂವಿನಹಡಗಲಿ: ಮಲೇರಿಯಾ ಸೇರಿದಂತೆ ಸಾಂಕ್ರಾಮಿಕ ರೋಗಗಳ ನಿಯಂತ್ರಣ ಕಾರ್ಯದಲ್ಲಿ ಕೆಲಸ ಮಾಡದ ಅಧಿಕಾರಿ, ಸಿಬ್ಬಂದಿ ಸಹಿಸುವುದಿಲ್ಲ ಅಂತವರ ವಿರುದ್ಧ ಕ್ರಮ ಜರುಗಿಸಲು ಶಿಫಾರಸು ಮಾಡಬೇಕಾಗುತ್ತದೆ ಎಂದು ಶಾಸಕ ಎಲ್.ಕೃಷ್ಣನಾಯ್ಕ ಎಚ್ಚರಿಸಿದರು. ಪಟ್ಟಣದ ತಾಲೂಕು ಕಚೇರಿಯಲ್ಲಿ ನಡೆದ ಸಾಂಕ್ರಾಮಿಕ ರೋಗ ತಡೆಗಟ್ಟುವ ಕುರಿತ ಕಾರ್ಯಪಡೆ ಸಭೆಯಲ್ಲಿ ಅವರು ಮಾತನಾಡಿದರು. ಪುರಸಭೆ, ಗ್ರಾಮ ಪಂಚಾಯಿತಿ ನೈರ್ಮಲ್ಯವನ್ನು ಸಮರ್ಪಕವಾಗಿ ನಿರ್ವಹಿಸಬೇಕು. ಜನವಸತಿ ಪ್ರದೇಶದಲ್ಲಿ ಚರಂಡಿ ತ್ಯಾಜ್ಯ, ಮಲಿನ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಎಂದರು.ಸರ್ಕಾರಿ ಆಸ್ಪತ್ರೆಗಳಲ್ಲಿ ವೇಳಾಪಟ್ಟಿ ಪ್ರಕಾರ ವೈದ್ಯರು ಇರಬೇಕು. ಕಠಿಣ ಪರಿಸ್ಥಿತಿಯಲ್ಲಿ ಮಾತ್ರ ಬೇರೆ ಆಸ್ಪತ್ರೆಗೆ ಶಿಫಾರಸು ಮಾಡಬೇಕು. ರೋಗಿಗಳೊಂದಿಗೆ ಸೌಜನ್ಯದಿಂದ ವರ್ತಿಸಬೇಕು ಎಂದು ಹೇಳಿದರು.

ಪಟ್ಟಣಕ್ಕೆ ಪೂರೈಕೆಯಾಗುವ ನೀರು ಶುದ್ಧೀಕರಣವಾಗುತ್ತಿಲ್ಲ ಪುರಸಭೆ ನಿರ್ಲಕ್ಷ್ಯ ಸರಿಯಲ್ಲ ನೀರಿನ ಮಾದರಿ ಸಂಗ್ರಹಿಸಿ ವರದಿ ನೀಡಬೇಕು ಎಂದು ಗ್ರಾಮೀಣ ನೀರು ನೈರ್ಮಲ್ಯ ಇಲಾಖೆ ಎಇಇ ಅಂಬೇಡ್ಕರ್ ಅವರಿಗೆ ಸೂಚಿಸಿದರು.

ತಾಲ್ಲೂಕು ಪಂಚಾಯಿತಿ ಎಂ.ಉಮೇಶ, ಗ್ರೇಡ್-2 ತಹಸೀಲ್ದಾರ್ ಮಲ್ಲಿಕಾರ್ಜುನ, ತಾಲೂಕು ಆರೋಗ್ಯಾಧಿಕಾರಿ ಡಾ.ಸಪ್ನಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ವಿದ್ಯುತ್ ವ್ಯತ್ಯಯ ಇಂದು

ಬಳ್ಳಾರಿ: ನಗರದ ಜಿಲ್ಲಾ ಕೋರ್ಟ್ ಸಂಕೀರ್ಣ ವ್ಯಾಪ್ತಿಯಲ್ಲಿನ ವಿದ್ಯುತ್ ಲೈನಿನ ನಿರ್ವಹಣೆ ಕಾರ್ಯವನ್ನು ತುರ್ತಾಗಿ ಕೈಗೊಳ್ಳುತ್ತಿರುವುದರಿಂದ ಜು.13 ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೆ 11.ಕೆ.ವಿ ಫೀಡರ್ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬಳ್ಳಾರಿ ನಗರ ಜೆಸ್ಕಾಂನ ಉಪವಿಭಾಗ-2ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಅಶೋಕ್ ರೆಡ್ಡಿ ತಿಳಿಸಿದ್ದಾರೆ. ಎಫ್-6 ಫೀಡರ್‌ನ ತಾಳೂರು ರಸ್ತೆ, ಸ್ನೇಹ ಕಾಲೋನಿ, ಶ್ರೀನಗರ, ರೇಣುಕಾ ನಗರ, ಭಗತ್‌ಸಿಂಗ್ ನಗರ, ಕನ್ನಡ ನಗರ, ಮಹಾನಂದಿ ಕೊಟ್ಟಂ, ಪಾರ್ವತಿ ನಗರ, ಎಸ್.ಪಿ.ಸರ್ಕಲ್, ಶಾಸ್ತ್ರೀ ನಗರ, ಬ್ಯಾಂಕ್ ಕಾಲೋನಿ, ಬಸವನಕುಂಟೆ, ಸಿರುಗುಪ್ಪ ರೋಡ್, ರಾಮನಗರ, ಹವಂಬಾವಿ ಮತ್ತು ಎಫ್-14 ಫೀಡರ್ ವ್ಯಾಪ್ತಿಯ ಜಿಲ್ಲಾ ಕೋರ್ಟ್ ಸಂಕೀರ್ಣ. ಎಫ್-13 ಫೀಡರ್ ವ್ಯಾಪ್ತಿಯ ದೇವಿನಗರ, ಸಿರುಗುಪ್ಪಾ ರಸ್ತೆ, ಇಂದಿರ ನಗರ, ಸಂಜಯನಗರ, ಶಿವಲಿಂಗ ನಗರ, ಶಾಸ್ತ್ರೀನಗರ, ಬಸವನಕುಂಟೆ, ಎಂ.ಕೆ.ನಗರ, ಹವಂಬಾವಿ, ಅಶೋಕ ನಗರ, ಶ್ರೀನಿವಾಸ ನಗರ, ಕುರಿಹಟ್ಟಿ, ಎಸ್.ಪಿ. ಸರ್ಕಲ್, ವೀರಣ್ಣಗೌಡ ನಗರ, ರಾಜೇಶ್ವರಿ ನಗರ, ಕೆ.ಎಂ.ಎಫ್, ಭುವನಗಿರಿ ಕಾಲೋನಿ, ಎಸ್.ಎಲ್.ವಿ ಕಾಲೋನಿ, ಶಿವಗಿರಿ ಕಾಲೋನಿ, ರಾಮನಗರ, ಶ್ರೀನಿವಾಸ್ ನಗರ, ಸೂರ್ಯ ಕಾಲೋನಿ ಪ್ರದೇಶಗಳ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ತಿಳಿಸಿದ್ದಾರೆ.

ವಿಶ್ವವಾಣಿ @vishwavaninews ಬೆಂಗಳೂರು ಶನಿವಾರ 13|07|2024

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಬಿ ಪಾಸಿಟಿವ್

ನಂಬಿಕೆಯಿರಲಿ ಮೌಢ್ಯತೆ ಬೇಡ

ಅಪಶಕುನ ಕಾಲ್ಗುಣ ಅಥವಾ ದೆವ್ವ ಭೂತ ಎಂಬ ಮೂಢನಂಬಿಕೆ ವಿದ್ಯಾವಂತರಲ್ಲೂ ಆವರಿಸಿದ್ದು ಪ್ರಗತಿಯ ಸಂಕೇತವಂತೂ ಅಲ್ಲ. ಅಪಶಕುನದ ಮೂಢ ನಂಬಿಕೆ ಮನಸಿನ ಮೂಲೆಯಲಿ ಗಾಢವಾಗಿ ನೆಲೆ ನಿಂತಿದೆ. ಇದಕ್ಕೆಲ್ಲಾ ಕಾರಣ ನಕಾರಾತ್ಮಕ ಯೋಚನೆ. ಬದುಕಿನಲ್ಲಿ ನಡೆವ ಸಾಮಾನ್ಯ ಅವಘಡ, ಮನದ ದುಗುಡಕ್ಕೂ, ವಾಸ್ತು ಅಥವಾ ಅಪಶಕುನದ ಹೆಸರನ್ನಿಟ್ಟು ಬಿಡುವರು. ದಾರಿಯಲಿ ಅಡ್ಡವಾದ ಬೆಕ್ಕು, ಗೋಡೆಯಲಿ ಕಾಲು ಜಾರಿ ಮೈಮೇಲೆ ಬಿದ್ದ ಹಲ್ಲಿ, ಕಾಗೆಯೊಂದು ಮುಟ್ಟಿದ್ದಕ್ಕೆ ಶನಿಕಾಟ ಸಾವು ತರುವುದೆಂದು ಹಣೆಪಟ್ಟಿ ಕಟ್ಟಿ ಬಿಡುತ್ತಾರೆ.

ತಲೆ ಬುಡ ಇಲ್ಲದ ಈ ಮೂಢನಂಬಿಕೆ ಯಾರ ಉದ್ಧಾರಕ್ಕಾಗಿ ಇದೆ. ಪರೀಕ್ಷೆಯಲ್ಲಿ ಪಾಸ್ ಮಾಡು ದೇವರೆ ಎಂದು ದೇವರ ಮುಂದೆ ದೀಪ ಹಚ್ಚಿ ಕೂತರೆ ಉತ್ತೀರ್ಣರಾಗುತ್ತಾರಾ? ದೀಪದ ಬೆಳಕಲ್ಲಿ, ಪ್ರಾಮಾಣಿಕ ಪ್ರಯತ್ನದಿಂದ ಓದುವ ಮಕ್ಕಳು ಪರೀಕ್ಷೆಯಲ್ಲಿ ಉತ್ತೀರ್ಣರಾಗುತ್ತಾರೆ. ಮಕ್ಕಳಲ್ಲಿ ನಾವು ಮೂಢನಂಬಿಕೆ ಬಿತ್ತಬಾರದು. ಅದರ ಬದಲು ಪ್ರಯತ್ನಕ್ಕೆ ತಕ್ಕ ಫಲ ಸಿಗುತ್ತದೆ ಎಂದು ತಿಳಿಸಬೇಕು. ಹಾಗಂತ ದೇವರನ್ನು ನಂಬಬಾರದು ಎಂದು ಹೇಳುತ್ತಿಲ್ಲ.

ದೇವರು ಎಂದರೆ ಒಂದು ಅದ್ಬುತ ಶಕ್ತಿ. ದೇವರು ಇದ್ದಾನೆ ಎಂಬುವುದೇ ಮನಸ್ಸಿಗೆ ಸಕಾರಾತ್ಮಕ ಶಕ್ತಿ. ನಂಬಿಕೆ ಸಕಾರಾತ್ಮಕವಾಗಿರಲಿ. ಪ್ರತಿ ಸಲ ದೇವರು ನಮ್ಮ ಬೇಡಿಕೆಯನ್ನು ಈಡೆರಿಸಲೇ ಬೇಕೆಂದೇನಿಲ್ಲ. ದೈವವನ್ನು ನಂಬುವುದು ತಪ್ಪಲ್ಲ. ದೈವವಿದ್ದರೆ ದೆವ್ವನು ಇರುತ್ತದೆ ಎಂದು ಮತ್ತೊಂದು ಮೂಢನಂಬಿಕೆ ಮನದಲ್ಲಿ ಪೋಷಿಸುವುದು ತಪ್ಪು. ಮನುಷ್ಯ ವೈಜ್ಞಾನಿಕವಾಗಿ ಯೋಚಿಸಲೇ ಬೇಕು. ಜೀವನದಲ್ಲಿ ನಂಬಿಕೆ ಇರಲಿ ಅತಿಯಾದ ಮೂಢನಂಬಿಕೆ ಬೇಡ. ಅತಿಯಾದದ್ದು ಯಾವುದು ಒಳ್ಳೆಯದಲ್ಲ. ದೇವರನ್ನು ಆರಾಧಿಸೋಣ. ನಮ್ಮ ಕಾಯಕದಲ್ಲಿ ಅವನನ್ನು ಕಾಣೋಣ.

• ಅಂಜಲಿ ಶ್ರೀನಿವಾಸ

ಲವ್‌ಎವೆರಿ ಬಾಡಿ

ಕಲಿಕೆಯಲ್ಲಿ ಹೆಣ್ಣು ಮಕ್ಕಳು ಸದಾ ಮುಂದು ಎನ್ನುವುದು ಜಗಜ್ಜನಿತ. ಹಾಗಾಗಿಯೇ ಶಾಲಾಕಾಲೇಜುಗಳ ಫಲಿತಾಂಶ ಪಟ್ಟಿಯಲ್ಲಿ ಮುಂದಿರುವ ಹೆಸರು ಹುಡುಗಿಯರದ್ದು. ಇದಕ್ಕೂ ಕಾರಣವಿದೆ. ಹುಡುಗರ ಮೆದುಳು ದೊಡ್ಡದಾಗಿದ್ದರೂ, ಹುಡುಗಿಯರ

ಮೆದುಳು ವೇಗವಾಗಿ ಪಕ್ವವಾಗುತ್ತದೆ. ಇದು ಶಬ್ದಕೋಶ, ಓದುವಿಕೆ ಮತ್ತು ಬರೆಯುವ ಕೌಶಲ್ಯಗಳ ಮೇಲೆ ಪರಿಣಾಮ ಬೀರುತ್ತದೆ. ಹಾಗಾಗಿ ಹೆಣ್ಣುಮಕ್ಕಳ ನೆನಪಿನ ಶಕ್ತಿ ಹೆಚ್ಚಿರುತ್ತದೆ. ಹುಡುಗರಿಗೆ ಸಾಮಾನ್ಯವಾಗಿ, ಕಲಿಯಲು ಪ್ರೇರಣೆಯ ಅಗತ್ಯತೆ ಇರುತ್ತದೆ. ಪೋಷಕರು ಅವರಲ್ಲಿರುವ ಪ್ರತಿಭೆಯನ್ನು ಗುರುತಿಸಿ, ಅದರಲ್ಲಿ ತೊಡಗಲು ಪ್ರೇರೇಪಿಸಿ, ಪ್ರೋತ್ಸಾಹಿಸಿದರೆ ಅವರು ಆ ಕ್ಷೇತ್ರದಲ್ಲಿ ಗುರುತಿಸಿಕೊಳ್ಳಬಲ್ಲರು.

• ದೇಹಾಭಿ'ಮಾಣಿ'

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com

ಯಮನ ವಾಹನ ಬದಲಾಗಿದೆ!

ಯಮನು ನಮ್ಮನ್ನು ನರಕಕ್ಕೆ ಕರೆದೊಯ್ಯಲು ಮೊದಲಿನ ಹಾಗೆ ಕೋಣದ ಮೇಲೆ ಸವಾರಿ ಮಾಡಿ ಬರುತ್ತಿಲ್ಲ. ಆತನೂ ಅಪ್ಡೇಟ್ ಆಗಿದ್ದಾನೆ. ಈಗ ಅವನದ್ದು ಏನಿದ್ದರೂ ರೋಡ್ ಮೇಲೆಯೇ ಡೆಲಿವರಿ. ಅವನು ಮೊಬೈಲ್‌ನಲ್ಲಿ ಮೆಸೇಜ್ ಮೂಲಕ, ಕರೆಯ ಮೂಲಕ, ವಿಡಿಯೋ ಮೂಲಕ ತನ್ನ ಬಂಟರನ್ನು ಕಳಿಸುತ್ತಿದ್ದಾನೆ.

ನಮ್ಮ ಜೀವಕ್ಕೆ ನಾವೇ ಬೆಲೆ ಕೊಡುತ್ತಿಲ್ಲ, ಇನ್ನು ಬೇರೆಯವರು ಏನು ಮಾಡಿಯಾರು? ನಮಗೆ ಜೀವ ಎನ್ನುವುದು ಆಟವಾಗಿದೆ. ಸುತ್ತ ಮುತ್ತ ಆಗುತ್ತಿರುವ ತಂತ್ರಜ್ಞಾನದ ಬೆಳವಣಿಗೆಯ ಜತೆ ನಮ್ಮ ಆಚಾರ ವಿಚಾರದಲ್ಲಿ ಪ್ರೌಢತ್ವವು ಹೆಚ್ಚುತ್ತಿದೆಯೇ? ಎಂಬುದು ಅತ್ಯಂತ ಗಂಭೀರವಾದ ಪ್ರಶ್ನೆ. ಆ ದಿನ ಮುಂಬಯಿ ಪುಣೆ ರಾಷ್ಟ್ರೀಯ ಹೆದ್ದಾರಿಯ ಮೇಲೆ ನನ್ನ ಕಾರನ್ನು ಓಡಿಸಿಕೊಂಡು ಹೋಗುತ್ತಿದ್ದೆ. ನಾನಿದ್ದಿದ್ದು ಹೈ ಸ್ಪೀಡ್ ಲೇನ್, ಅದಕ್ಕೆ ತಕ್ಕನಾಗಿ ಕಾರಿನ ವೇಗವನ್ನು ಸಂಬಾಳಿಸಿಕೊಂಡಿದ್ದೆ. ಮುಂದೆ ಅದೇ ಸಾಲಿನಲ್ಲಿ ಇನ್ನೊಂದು ಕಾರು ಬಲು ನಿಧಾನವಾಗಿ ಹೋಗುತ್ತಿತ್ತು!

ಜೋಷ್ ಮಾತು
• ವಿಕ್ರಂ ಜೋಶಿ

ದೂರದಿಂದಲೇ ಗಮನಿಸಿದಾಗ ಗೊತ್ತಾಗಿದ್ದೆಂದರೆ, ಆತ ಮೊಬೈಲ್ ನಲ್ಲಿ ಮಾತನಾಡುತ್ತಾ ಕಾರನ್ನು ಓಡಿಸುತ್ತಿದ್ದ. ಹೇಗೋ ಹಾಗೋ ನನ್ನ ಕಾರಿನ ವೇಗವನ್ನು ಕಡಿಮೆ ಮಾಡಿ ಪಕ್ಕದ ಸಾಲಿಗೆ ಬಂದು ಆ ಕಾರನ್ನು ಹಿಂದಕ್ಕೆ ಹಾಕಿ ನಾನು ಮುಂದಕ್ಕೆ ಹೋದೆ, ಒಂದು ಅಫಘಾತ ತಪ್ಪಿತು ಎಂದು ನಿಟ್ಟುಸಿರನ್ನು ಬಿಟ್ಟೆ! ವೇಗದ ಲೇನ್‌ನಲ್ಲಿ ಇದ್ದುಕೊಂಡು ಹೀಗೆ ನಿಧಾನ ಗತಿಯಲ್ಲಿ ಡ್ರೈವ್ ಮಾಡುವವರಿಗೆ ಏನೆನ್ನೋಣ? ಹಿಂದಿನಿಂದ ಬರುವವರ ನಿಯಂತ್ರಣವು ಮೀರಿದರೆ ಇಬ್ಬರಿಗೂ ಜೀವದ ಅಪಾಯ ತಪ್ಪಿದ್ದಲ್ಲ. ವಾಹನವನ್ನು ಬದಿಗೆ ನಿಲ್ಲಿಸಿ ಫೋನಿನಲ್ಲಿ ಮಾತನಾಡಬಹುದಲ್ಲವೆ? ವಿದೇಶದಲ್ಲಾಗಿದ್ದರೆ ಸಿಸಿಟಿವಿ ಕ್ಯಾಮೆರಾದಲ್ಲಿ ಪತ್ತೆ ಮಾಡಿ, ಅವನನ್ನು ಹಿಡಿದು, ಕಂಬಿಯನ್ನು ಎಣಿಸುವಂತೆ ಮಾಡುತ್ತಿದ್ದರು.

ವಾಹನ ಚಲಾಯಿಸುವುದೇ ಜೋಕ್!

ಮೊನ್ನೆ ನಡೆದ ಇನ್ನೊಂದು ಸಂಗತಿ ನೆನಪಾಗುತ್ತದೆ. ಪುಣೆಯ ಪ್ರಮುಖ ಓಣಿಯೊಂದರಲ್ಲಿ ಸ್ಕೂಟರ್ ಓಡಿಸಿಕೊಂಡು ಹೋಗುವಾಗ ಎದುರಿಗೆ ಒಬ್ಬಾಕೆ ತನ್ನ ಕಾರನ್ನು ಎರ್ರಾಬಿರ್ರಿ ಓಡಿಸಿಕೊಂಡು ಬರುತ್ತಿದ್ದಳು. ಅವಳ ಕಾರು ಕುಡಿದ ಅಮಲಿನಲ್ಲಿದ್ದಂತಿತ್ತು. ಹತ್ತಿರ ಬರುತ್ತಿದ್ದಂತೆ, ಆಕೆ ಮೊಬೈಲ್‌ನಲ್ಲಿ ಏನನ್ನೋ ನೋಡುತ್ತ ಕಾರನ್ನು ಓಡಿಸುತ್ತಿರುವುದು ಗೊತ್ತಾಗುತ್ತಿತ್ತು. ರಸ್ತೆಯ ಮೇಲೆ ಅಪಘಾತ ಆಗುವುದು



ಡಿಜಿಟಲ್ ಯುಗದ ಅನಾಗರಿಕರು

ಕೆಲವು ದ್ವಿಚಕ್ರ ವಾಹನ ಚಾಲಕರೇನು ಕಡಿಮೆಯಲ್ಲ, ಕಿವಿಯಲ್ಲಿ ಇಯರ್ ಫೋನ್ ಸಿಕ್ಕಿಸಿಕೊಂಡು, ಹಾಡಿನ ಮತ್ತಿನಲ್ಲಿ ವೇಗದ ಮಿತಿಯನ್ನು ಮೀರಿ ಹೋಗುತ್ತಿರುತ್ತಾರೆ. ಅವರಿಗೆಲ್ಲ ಹಿಂದೆ ಬರುತ್ತಿರುವ ವಾಹನಗಳು ಕಾಣುವುದಿಲ್ಲ, ಮುಂದಿರುವ ಸಿಗ್ನಲ್ ತೋರುವುದಿಲ್ಲ; ಕೆಲವರಂತೂ ಬೈಕ್ ಓಡಿಸುವುದು ಒಂದೇ ಕೈಯಲ್ಲಿ, ಅವರ ಇನ್ನೊಂದು ಕೈ ಇರುವುದು ಮೊಬೈಲ್ ಹಿಡಿದುಕೊಳ್ಳುವುದಕ್ಕೆ, ಬೈಕ್ ಓಡಿಸುತ್ತಾ ಮಾತನಾಡುವುದಕ್ಕೆ. ಅವರ ದೃಷ್ಟಿಯಲ್ಲಿ ಇದೊಂದು ಫ್ಯಾಶನ್! ರಸ್ತೆ ದಾಟುತ್ತಿರುವ ಮಕ್ಕಳು, ಮುದುಕರು, ಮಹಿಳೆಯರು ಯಾರೂ ಇವರ ಕಣ್ಣಿಗೆ ಬೀಳುವುದಿಲ್ಲ. ನಂತರ ಹೆಚ್ಚು ಕಡಿಮೆ ಆದಾಗ ಆಯತಪ್ಪಿ ಇವರೂ ಬೀಳುತ್ತಾರೆ, ಎದುರಿಗೆ ರಸ್ತೆಯಲ್ಲಿರುವ ಅಮಾಯಕರನ್ನೂ ಸಾಯಿಸುತ್ತಾರೆ. ಬೇಜವಾಬ್ದಾರಿಯ ಇವರೆಲ್ಲ ಡಿಜಿಟಲ್ ಯುಗದ ಅನಾಗರಿಕರು!

ಇಂತಹವರಿಂದಲೇ. ಇವರೆಲ್ಲ ಸಾರ್ವಜನಿಕ ರಸ್ತೆಯ ಮೇಲೆ ವಾಹನ ಚಲಾಯಿಸುವುದು ಅಂದರೆ ಒಂದು 'ಜೋಕ್' ಎಂದುಕೊಂಡು ಬಿಟ್ಟಿದ್ದಾರೆ. ಏನಾದರೂ ಅತ್ತಿತ್ತ ಕೊಂಚ ಏರುಪೇರಾದರೆ ಪಕ್ಕದಲ್ಲಿ ಹೋಗುತ್ತಿರುವ ದ್ವಿಚಕ್ರ ವಾಹಹನದ ಸವಾರರು ಇವರ ತಪ್ಪಿನಿಂದ ಸಾಯುತ್ತಾರೆ. ಇಂತಹ ಸನ್ನಿವೇಶಗಳಿಗೆ ನನ್ನ ಪ್ರಜ್ಞೆಯು ಸಾಕ್ಷಿ ಆದಾಗಲೆಲ್ಲ, ಕಾರನ್ನು ಓಡಿಸುವಾಗ ಮೊಬೈಲ್ ಸ್ಕ್ರೀನ್ ಬ್ಲ್ಯಾಂಕ್ ಆಗಿಬಿಡುವ ಒಂದು ಹೊಸ ಫೀಚರ್‌ನ್ನು ಕಾರು, ಆಟೋರಿಕ್ಷಾ, ಟ್ರಕ್ ಹಾಗೂ ಬಸ್ಸಿನ ಕಂಪನಿಯವರು ತರಬೇಕು ಎಂದನಿಸುತ್ತದೆ.

ಮೊಬೈಲ್ ಒಳಗಿನ ತಲ್ಲೀನತೆ

ಅಂತೆಯೇ ಈ ಲೇಖನಕ್ಕೆ ಸ್ಫೂರ್ತಿಯನ್ನು ನೀಡಿದ್ದು ಒಬ್ಬ ಮಹಿಳೆ. ನಿನ್ನೆಯ ದಿನ ಒಂದು ಅತ್ಯಂತ ಬ್ಯುಸಿಯಾಗಿರುವ ಸರ್ಕಲ್‌ನಲ್ಲಿ ನಡು ವಯಸ್ಸಿನ ಮಹಿಳೆಯೊಬ್ಬಳು ಸಿಗ್ನಲ್‌ನ ಸ್ಥಿತಿಯನ್ನು ಲೆಕ್ಕಿಸದೆ ವಿಡಿಯೋ ಕರೆಯಲ್ಲಿ ಮಗ್ನಳಾಗಿ ರಸ್ತೆಯನ್ನು ದಾಟುತ್ತಿದ್ದಳು. ಕೆಲವೊಮ್ಮೆ ಸಿನೇಮಾದಲ್ಲಿ ಗೋಡೆಯನ್ನು ದಾಟಿ ಹೋಗುವ, ಗಾಡಿಗಳು ಹಾದು ಹೋದರೂ ಏನೂ ಆಗದೆ ಇರುವ, ಬೆಂಕಿಯೊಳಗೆ ನುಗ್ಗಿ ಹೊರಬರುವ ಸೀನುಗಳಿರುತ್ತವೆಯಲ್ಲ ಹಾಗಿತ್ತು ಅವಳು ಸರ್ಕಲ್ ನಡುವೆ ರಸ್ತೆಯನ್ನು ದಾಟುತ್ತಿರುವುದು! ಯಾರದೋ ಜತೆ ವಿಡಿಯೋ ಕರೆಯಲ್ಲಿ ಆಕೆ ಸಂಪೂರ್ಣವಾಗಿ ತನ್ನನ್ನು ತಾನು ಮರೆತಿದ್ದಳು. ಬೇರೆ ಕಡೆಯಾಗಿದ್ದರೆ ಸಿಗ್ನಲ್ ಬಿದ್ದಿದ್ದೇ ಅವಳನ್ನು ಕೆಡವಿ, ಅವಳ ದೇಹವನ್ನು ಚಟ್ನಿ ಮಾಡಿ ಅದರ ಮೇಲೆ ವಾಹನಗಳು ಹೋಗುತ್ತಿದ್ದವು. ನಮ್ಮ ದೇಶವಾಗಿದ್ದಕ್ಕೆ ಜನರು ತಮ್ಮಷ್ಟಕ್ಕೆ ತಾವೇ ಅವಳನ್ನು ಬೈದುಕೊಂಡು ಅವಳ ಪಕ್ಕಕ್ಕೆ ಸರಿದು ಹೋಗುತ್ತಿದ್ದರು. ಪಾದಚಾರಿಗಳಿಗೆ ರಸ್ತೆಯನ್ನು ದಾಟುವಾಗ ತಲ್ಲೀನತೆ ರಸ್ತೆಯ ಮೇಲೆ ಇರಬೇಕೇ ಹೊರತು ಮೊಬೈಲ್ ಒಳಗಲ್ಲ.

ನಿಮಗೊಂದು ವಿಷಯ ಗೊತ್ತಿದೆಯೇ? ರಸ್ತೆಯ ಅಪಘಾತದಲ್ಲಿ ಭಾರತದ್ದು ಜಗತ್ತಿನಲ್ಲೇ ಉನ್ನತ ಸ್ಥಾನ. ಚೀನಾವನ್ನು ಹಿಂದಕ್ಕೆ ಹಾಕಿದ್ದೇವೆ. ನಮ್ಮಲ್ಲಿ 5–29 ವಯಸ್ಸಿನವರಲ್ಲಿ ಹೆಚ್ಚುಪಾಲು ಸಾಯುತ್ತಿರುವವರು ಯಾವುದೇ ಕಾಯಿಲೆಯಿಂದಲ್ಲ, ಬದಲಾಗಿ ರಸ್ತೆಯಲ್ಲಿ ಆಗುತ್ತಿರುವ ಅಪಘಾತಗಳಿಂದ. ಇದರಲ್ಲಿ ರಾಕೆಟ್ ಸೈನ್ಸ್ ಏನೂ ಇಲ್ಲ, ಅವರಲ್ಲಿಯ ನಿರ್ಲಕ್ಷ್ಯವೇ ಮುಖ್ಯ ಕಾರಣ. ವಾಹನವನ್ನು ಚಲಿಸುತ್ತಿರುವಾಗ ಮೊಬೈಲ್ ನಲ್ಲಿ ಕಳೆದು ಹೋಗುತ್ತಿರುವುದೇ ಆ ನಿರ್ಲಕ್ಷ್ಯದ ಮಹಾಮಾರಿಯಲ್ಲಿ ದೊಡ್ಡ ಪಿಡುಗು. ಯಮನು ನಮ್ಮನ್ನು ನರಕಕ್ಕೆ ಕರೆದೊಯ್ಯಲು ಮೊದಲಿನ ಹಾಗೆ ಕೋಣದ ಮೇಲೆ ಸವಾರಿ ಮಾಡಿ ಬರುತ್ತಿಲ್ಲ. ಆತನೂ ಅಪ್ಡೇಟ್ ಆಗಿದ್ದಾನೆ. ಈಗ ಅವನದ್ದು ಏನಿದ್ದರೂ ರೋಡ್ ಮೇಲೆಯೇ ಡೆಲಿವರಿ. ಅವನು ಮೊಬೈಲ್‌ನಲ್ಲಿ ಮೆಸೇಜ್ ಮೂಲಕ, ಕರೆಯ ಮೂಲಕ, ವಿಡಿಯೋ ಮೂಲಕ ತನ್ನ ಬಂಟರನ್ನು ಕಳಿಸುತ್ತಿದ್ದಾನೆ. ಕಾರನ್ನು ಓಡಿಸುವಾಗ, ಸ್ಕೂಟರ್ ಚಲಿಸುವಾಗ ಒಮ್ಮೆ ಅವುಗಳನ್ನು ನೋಡಿದರೆ, ಅವುಗಳಲ್ಲಿ ಕಳೆದು ಹೋದರೆ ಮುಗಿಯಿತು ಯಮನ ಪಾಶವು ಕೊರಳಿಗೆ ಬಿದ್ದಂತೆ. ಎಚ್ಚರವಾಗಿರಿ – ವಾಹನವನ್ನು ಓಡಿಸುವಾಗ ಮೊಬೈಲ್ ಬಳಸಿದರೆ ಯಮನನ್ನು ಕರೆದಂತೆ!

ಮೆಕ್ಸಿಕೋದ ವರ್ಣಮಯ ನಗರ

• ವಿಶ್ವನಾಥ್ ಬಳುವನೇರಲು

ಉತ್ತರ ಅಮೇರಿಕಾದ ಮೆಕ್ಸಿಕೋಗೆ ಸೇರಿದ ಸ್ಯಾನ್ ಮಿಗುಯೆಲ್ ಡಿ ಅಲೆಂಡೆ ನಗರವು ವಿಶ್ವದ ಅತ್ಯಂತ ಆಕರ್ಷಕ ನಗರಗಳಲ್ಲಿ ಒಂದಾಗಿದೆ. ವಿಶೇಷವಾಗಿ ಮೆಕ್ಸಿಕೋದಲ್ಲಿನ ನಗರದ ಸೌಂದರ್ಯವು ಪ್ರಪಂಚದಾದ್ಯಂತದ ಜನರನ್ನು ಆಕರ್ಷಿಸುವುದರಲ್ಲಿ ಯಶಸ್ವಿಯಾಗಿದೆ.







ಈ ನಗರವು ಎರಡು ವಿಭಿನ್ನ ದೇಶಗಳ ಎರಡು ರಾಜಧಾನಿಗಳ ನಡುವೆಯಿದೆ. ಸ್ಯಾಂಟಿಯಾಗೊ ಡಿ ಕ್ವಾಟ್ರೋರ್ರಿದ ದಕ್ಷಿಣಕ್ಕೆ ಒಂದು ಗಂಟೆ ಮತ್ತು ಮತ್ತೊಂದು ಯುನೆಸ್ಕೋ ವಿಶ್ವ ಪರಂಪರೆಯ ತಾಣವಾದ ಗ್ವಾನಾಜುವಾಟೊದ ಉತ್ತರಕ್ಕೆ ಕೇವಲ ಒಂದೂವರೆ ಗಂಟೆ ದೂರದಲ್ಲಿದೆ. ನಗರವು ವಿಶೇಷ ವಾಸ್ತುಶಿಲ್ಪದಿಂದ ತುಂಬಿದ್ದು 16 ನೇ ಶತಮಾನದ ಸ್ಪ್ಯಾನಿಷ್ ವಸಾಹತುಶಾಹಿ ಬರೊಕ್ ವಾಸ್ತುಶಿಲ್ಪದ ಅತ್ಯುತ್ತಮ ಉದಾಹರಣೆಗಾಗಿ ಯುನೆಸ್ಕೋ ವಿಶ್ವಪರಂಪರೆಯ ತಾಣವಾಗಿದೆ. ಇಲ್ಲಿ ನೀವು ಕಟ್ಟಡಗಳ ವಿಶೇಷ ಬಾಗಿಲುಗಳನ್ನು ನೋಡಿ ಆನಂದಿಸಬಹುದು.

ನಗರವು ಬಣ್ಣಗಳು ಮತ್ತು ಹೂವುಗಳಿಂದ ತುಂಬಿದ್ದು, ಅಂಗಡಿಗಳನ್ನು ಗಾಢವಾದ ಬಣ್ಣಗಳಿಂದ ಚಿತ್ರಿಸಲಾಗಿದೆ.ಕೈಗಾರಿಕಾ ಕಾರ್ಖಾನೆಗಳ ಪ್ರವೇಶದ್ವಾರಗಳಿಗೂ ಸಹ ಹೂವುಗಳಿಂದ ಅಲಂಕರಿಸಲಾಗಿದೆ.

ಡಿಸ್ನಿ ಕೋಟೆಯಂತೆ ಕಾಣುವ ಕ್ಯಾಥೆಡ್ರಲ್ ಹೊಂದಿರುವ ಇದು ನಗರದ ಸಾಂಪ್ರದಾಯಿಕ ಸಂಕೇತವಾಗಿದೆ.17 ನೇ ಶತಮಾನದ ನವ-ಗೋಥಿಕ್ ಕ್ಯಾಥೆಡ್ರಲ್ ಅದರ ಗುಲಾಬಿ ಟರ್ಬೈನ್‌ಗಳು ಮತ್ತು ಎತ್ತರದ, ಅಲಂಕೃತ ದೇವಾಲಯಕ್ಕೆ ಹೆಸರುವಾಸಿಯಾಗಿದೆ.

ನಗರವು ರೋಮಾಂಚಕರ ಕಲಾ ದೃಶ್ಯವನ್ನು ಹೊಂದಿದ್ದು, 1940 ರ ದಶಕದಿಂದಲೂ ಹೊಸ ಕಲಾವಿದರು ನಗರದ ಸೌಂದರ್ಯ ಹೆಚ್ಚಿಸಲು ಸೇರುತ್ತಿದ್ದಾರೆ. ಬೀದಿಗಳು ಸುಂದರವಾದ ಭಿತ್ತಿಚಿತ್ರಗಳಿಂದ ಕೂಡಿದೆ. ನಗರವು ಕಲಾ ಗ್ಯಾಲರಿಗಳು ಮತ್ತು ಕರಕುಶಲ ಅಂಗಡಿಗಳಿಂದ ತುಂಬಿರುತ್ತದೆ.

ಸಂತೋಷದ ಹುಡುಕಾಟ

ಬದುಕು ಜಟಕಾಬಂಡಿ
• ಸಂದೀಪ್ ಶರ್ಮಾ ಮೂಟೇರಿ

ಈಗಿನ ಜೀವನಶೈಲಿ ಎಲ್ಲರಿಗೂ ತಿಳಿದೇ ಇದೆ. ಒಬ್ಬೊಬ್ಬರ ಅಭಿರುಚಿಯೂ ಭಿನ್ನ. ಒಬ್ಬರಿಗೆ ಅಧ್ಯಾತ್ಮದಲ್ಲಿ ಸಮಾಧಾನ ಸಿಕ್ಕರೆ, ಇನ್ನೊಬ್ಬರಿಗೆ ಶಾಪಿಂಗ್ ಮಾಡುವುದರಲ್ಲಿ, ಮತ್ತೊಬ್ಬರಿಗೆ ವಾರಾಂತ್ಯ ಪಾರ್ಟಿ ಮಾಡುವುದಲ್ಲಿ, ಮಗದೊಬ್ಬರಿಗೆ ಟ್ರೆಕ್ಕಿಂಗ್ ನಲ್ಲಿ, ಇನ್ನು ಹಲವರಿಗೆ ಸಂತೋಷವಾಗಿರುವುದು ಹೇಗೆ ಎಂಬುದನ್ನು ತಿಳಿಸಿಕೊಡುವ ಹ್ಯಾಪಿನೆಸ್ ಕೋಚ್‌ಗಳ ಯೂಟ್ಯೂಬ್ ವೀಡಿಯೋಗಳಲ್ಲಿ, ಬೆವರಿಳಿಸುವ ಜಿಮ್ ಗಳಲ್ಲಿ, ಸಿನೆಮಾ ನೋಡುವುದರಲ್ಲಿ, ಒಟ್ಟಿನಲ್ಲಿ ಕೊಡುಕೊಳ್ಳುವ ಪ್ರಕ್ರಿಯೆ ಹತ್ತು ಹಲವು ರೀತಿಯಲ್ಲಿ, ರೂಪದಲ್ಲಿ. ಅಂತಿಮ ಗುರಿಯೆಂದರೆ ಗೊಂದಲದ, ಧಾವಂತದ, ವ್ಯಾಪಾರಿ ಮನೋಭಾವದ ಸಂಕೀರ್ಣ ಬದುಕಿನ ಜಂಜಾಟದ ನಡುವೆ ಒಂದಷ್ಟು ಮನಃಶಾಂತಿ, ಸಮಾಧಾನದ ಹುಡುಕಾಟ.

ಒಂದು ಕಾಲದಲ್ಲಿ ಸಂತೋಷ, ನೆಮ್ಮದಿಯೆಂದರೆ ಅದೊಂದು ಮನಸ್ಸಿನ ಭಾವ, ಅಧ್ಯಾತ್ಮದ ಅನುಭವ. ಆದರೆ ಈಗ ಸಂತೋಷ ವ್ಯಾಪಾರೀಕರಣದ ಅವಿಭಾಜ್ಯ ತಂತ್ರ. ಹಣದಿಂದ ಸಂತೋಷವನ್ನು ಖರೀದಿಸಲು ಸಾಧ್ಯವಿಲ್ಲ ಎನ್ನುವ ಮಾತಿಗೆ ತದ್ವಿರುದ್ಧವಾಗಿ ಕಾಸು ಕೊಟ್ಟಾದರೂ ಸಂತೋಷ ಪಡೆದುಕೊಳ್ಳುವ ನಿತ್ಯದ ಪರದಾಟ.

ಮನಸ್ಸಿನ ನೆಮ್ಮದಿಗೆ ತರಬೇತಿ

ಅಮೆರಿಕದ ಯಾಲೇ ವಿಶ್ವವಿದ್ಯಾನಿಲಯವು ಕೋರ್ಸ್ ಇರಾದ ಮೂಲಕ ನಡೆಸುವ 'ದಿ ಸೈನ್ಸ್ ಆಫ್ ವೆಲ್ ಬಿಯಿಂಗ್' ಎನ್ನುವ ಆನ್ಲೈನ್ ತರಬೇತಿಗೆ ಇಲ್ಲಿಯವರೆಗೆ ಸುಮಾರು 50 ಲಕ್ಷ ಮಂದಿ ನೋಂದಣೆ ಮಾಡಿಕೊಂಡು ತರಬೇತಿ ಪಡೆದಿದ್ದಾರೆ. ಜೀವನದಲ್ಲಿ ಕ್ಷೇಮವಾಗಿರುವುದಕ್ಕೂ ತರಬೇತಿ ಆರಂಭವಾಗಿದೆ ಹಾಗೂ ಅದಕ್ಕೆ ಅತ್ಯಂತ ಬೇಡಿಕೆಯಿದೆ. ಇದರಿಂದಲೇ ಜೀವನದಲ್ಲಿ ನೆಮ್ಮದಿ, ಸಂತೋಷ ಹಾಗೂ ತೃಪ್ತಿ ಪಡೆದುಕೊಳ್ಳುವ ಮನುಷ್ಯನ ಚಡಪಡಿಕೆಯ ಪ್ರಮಾಣವನ್ನು ಊಹಿಸಿಕೊಳ್ಳಬಹುದು. ಪ್ರಪಂಚದಾದ್ಯಂತ ಸುಮಾರು 2,000 ವಿಶ್ವವಿದ್ಯಾನಿಲಯಗಳು ಸಂತೋಷದ ಮಟ್ಟವನ್ನು ಅಳೆಯುವುದಕ್ಕೆ ಹಾಗೂ ತಂತ್ರಗಳನ್ನು ತಿಳಿಯುವುದಕ್ಕೆ ಸಂಶೋಧನ ಕೇಂದ್ರಗಳನ್ನು ತೆರೆದಿವೆ.

ನಾಗಾಲೋಟದ ಬದುಕಿನಲ್ಲಿ ನೆಮ್ಮದಿ ಮರೀಚಿಕೆಯಾಗಿರುವುದು, ಇದರ ಪರಿಣಾಮ ಮಾನಸಿಕ ಹಾಗೂ ದೈಹಿಕ ಆರೋಗ್ಯದ ಸಮಸ್ಯೆ. ಮನಸ್ಸಿನಲ್ಲಿ ಅದೇನೋ ತಳಮಳ, ಏನೇ ಮಾಡಿದರೂ ಮೊದಲಿನ ನೆಮ್ಮದಿ ಇಲ್ಲ, ಶಾಂತಿ ಇಲ್ಲ, ಊರು ಬಿಟ್ಟು ನಗರ ಸೇರಿದವರಿಗೆ ಎಲ್ಲಿಗೂ ಸಲ್ಲದವರಾಗುತ್ತಿದ್ದೇವೆ ಎನ್ನುವ ಚಿಂತೆ. ಕೈ ತುಂಬಾ ಕಾಸು ಸಂಪಾದಿಸುವವರಿಗೆ ಎಷ್ಟು ಖರೀದಿ ಮಾಡಿದರೂ ತಾನು ಪಡೆಯದ್ದು ಇನ್ನೇನೋ ಇದೆ ಎನ್ನುವ ತಳಮಳ, ಅದನ್ನು ಪಡೆದುಕೊಳ್ಳಲು ಇನ್ನಷ್ಟು ಖರೀದಿ. ಆದರೆ ಆ ಆತಂಕ ಮಾತ್ರ ಮನಸ್ಸಿನಿಂದ ಹೋಗಲೊಲ್ಲದು.

ಪ್ರಚಾರ ತಂತ್ರ

ಇಂತಹ ಮನಃಸ್ಥಿತಿಯ ಹೊಯ್ದಾಟದಲ್ಲಿರುವವರ ಕಣ್ಣೆದುರಿಗೆ ಸುಲಭವಾಗಿ ಕಾಣುವುದು, ಸಾಮಾಜಿಕ ಜಾಲತಾಣದಲ್ಲಿ ಕಂಡು ಬರುವ ಸಂತೋಷದ ಮಾದರಿಗಳು ಆ ಪರಿಕಲ್ಪನೆಯಲ್ಲಿಯೇ ಸಂತೋಷದ ಹುಡುಕಾಟ, ನೆಮ್ಮದಿಗಾಗಿ ಅಲೆದಾಟ. ಈ ಅನ್ವೇಷಣೆಯ ದಾರಿಯಲ್ಲಿ ನಮ್ಮೆದುರಿಗೆ ತೆರೆದುಕೊಳ್ಳುವುದು ಸಂತೋಷವನ್ನು ತಂದುಕೊಡುವ ವ್ಯವಹಾರದ ಮಾದರಿಗಳು. ಮಾಸ್ಟರ್ ಕ್ಲಾಸ್‌ಗಳು, ಡೊಪೋಮಿನ್ ಹೆಚ್ಚಿಸಲು ಬಳಸಬಹುದಾದ ವೈದ್ಯಕೀಯ ಉತ್ಪನ್ನಗಳು, ಸಕಾರಾತ್ಮಕ ಚಿಂತನೆ ಹೆಚ್ಚಿಸುವ ವ್ಯಾಯಾಮಗಳು, ಆಹಾರೋತ್ಪನ್ನಗಳು, ಸುಂದರವಾಗಿ ಕಾಣಿಸುವುದರಿಂದ ಆನಂದವಾಗಿರಬಹುದು ಎನ್ನುವ ಜಾಹಿರಾತುಗಳು. ಟ್ರಾವೆಲಿಂಗ್ ಸಂಸ್ಥೆಗಳು ಶಾಂತಿ ನೆಮ್ಮದಿ ಪ್ರವಾಸಿ ತಾಣಗಳಲ್ಲಿವೆ. ಹಸಿರು ಪರಿಸರದಲ್ಲಿದೆ, ನದಿ, ಬೆಟ್ಟಗುಡ್ಡಗಳಲ್ಲಿದೆ ಎಂದು ಪ್ರಚಾರ ತಂತ್ರವನ್ನೇ ರೂಪಿಸಿವೆ. ಅದನ್ನು ಪಡೆದುಕೊಳ್ಳಲು ಮತ್ತದೇ ಹಣವೆಂಬ ಅಸ್ತ್ರ.

ಒಂದು ಅಂಕಿಅಂಶದ ಪ್ರಕಾರ 200 ಬಿಲಿಯನ್ ಹ್ಯಾಪಿನೆಸ್, 2 ಮಿಲಿಯನ್ ಹ್ಯಾಪಿನೆಸ್ ಇಸ್ ಚಾಯ್ಸ್ ಎನ್ನುವ ಇನ್ಸ್ಟಾಗ್ರಾಂ ಪೋಸ್ಟ್‌ಗಳಿವೆ. ಇತರ ಸಾಮಾಜಿಕ ಜಾಲತಾಣಗಳೇನು ಕಡಿಮೆ ಇಲ್ಲ. ಮನುಷ್ಯ ಹೇಗೆ ಸಂತೋಷವಾಗಿರಬಹುದು, ನೆಮ್ಮದಿ ಪಡೆದುಕೊಳ್ಳಬಹುದು ಎನ್ನುವುದರ ಬಗೆಗೆ ಲೆಕ್ಕವಿಲ್ಲದಷ್ಟು ಸಂದೇಶಗಳು ಇವೆ.

ದಾರ್ಶನಿಕರು ಹೇಳುವಂತೆ ಸಂತೋಷ ಬೇರೆಲ್ಲೂ, ಆದರೂ ಗಿಟ್ಟಿಸಿಕೊಳ್ಳುವಲ್ಲಿ ಎಡವುತ್ತಿದ್ದೇವೆ. ಸಂತೋಷ ಸಣ್ಣಸಣ್ಣ ವಿಚಾರಗಳಲ್ಲಿವೆ, ಅದು ದಿನನಿತ್ಯದ ನಿರಂತರ ಪ್ರಕ್ರಿಯೆ ಎನ್ನುವುದು ಮರೆತೇ ಬಿಡುತ್ತೇವೆ. ನಮಗೆಲ್ಲ ಸಂತೋಷವೆಂದರೆ ಅದೊಂದು ಗುರಿ. ಅದರೆಡೆಗೆ ಗಂಭೀರವಾಗಿ ಯೋಚಿಸುತ್ತೇವೆ, ಯೋಜಿಸುತ್ತೇವೆ, ಕೂಡಿಡುತ್ತೇವೆ. ಈ ಪ್ರಕ್ರಿಯೆಯಲ್ಲಿ ಹಲವನ್ನು ಕಳೆದುಕೊಳ್ಳುತ್ತೇವೆ. ಸಂತೋಷದ ಪರಿಕಲ್ಪನೆಯ ಮಾದರಿಯನ್ನು ಮುಂದಿಡುವ ಮಾರುಕಟ್ಟೆ ಬೆಳೆಯುತ್ತಲೇ ಇದೆ.